# ಕರ್ನಾಟಕ ವಿಧಾನ ಪರಿಷತ್

1. ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ವಿ.ನಾರಾಯಣ ಸ್ವಾಮಿ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1279
3. ಉತ್ತರಿಸುವ ದಿನಾಂಕ : 17.03.2020
4. ಉತ್ತರಿಸುವ ಸಚಿವರು : ಮಾನ್ಯ ಸಹಕಾರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಪ್ರಕಾರ (Karnataka Society Registration Act) ನೋಂದಾಯಿಸಿರುವ ಅನೇಕ ಸಂಘಗಳ (ಕ್ಲಬ್ಸ್) ಕಾರ್ಯವೈಖರಿ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ನೇಮಿಸಿದ ಸದನ ಸಮಿತಿಯು ವರದಿ ಸಲ್ಲಿಸಿದೆಯೇ; | ರಾಜ್ಯದಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳ ಬಗ್ಗೆ ವಿಚಾರಣೆ ನಡೆಸಲು ಶ್ರೀ ಎನ್.ಎ.ಹ್ಯಾರಿಸ್, ಮಾನ್ಯ ಶಾಸಕರು ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸದನ ಸಮಿತಿಯು ವರದಿಯನ್ನು ದಿನಾಂಕ: 07-02-2017 ರಂದು ವಿಧಾನ ಸಭೆಯಲ್ಲಿ ಮಂಡಿಸಿರುತ್ತಾರೆ. |
| 2 | ಸಲ್ಲಿಸಿದ್ದಲ್ಲಿ, ಅದರ ಪ್ರತಿಯನ್ನು ನೀಡುವುದು; | ಪ್ರತಿ ಲಗತ್ತಿಸಿದೆ. |
| 3 | ವರದಿ ಸಲ್ಲಿಸಿದ ಪಕ್ಷದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳನ್ನು ತಿಳಿಸುವುದು; | ಸದನ ಸಮಿತಿಯ ಶಿಫಾರಸ್ಸುಗಳಲ್ಲಿ ಕಂದಾಯ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ವಿಷಯಗಳಿರುವುದರಿಂದ ನಗರಾಭಿವೃದ್ಧಿ ಇಲಾಖೆಯ ಅಂಶಗಳನ್ನು Karnataka Regulation of entry to public places and Regulation of Clubs bills 2016 ರಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಪರಿಶೀಲಿಸುವ ಕುರಿತು ಸಂಸದೀಯ ವ್ಯವಹಾರಗಳ ಇಲಾಖೆಯ ಅಭಿಪ್ರಾಯ ಕೋರಲಾಗಿ ಸಂಸದೀಯ ವ್ಯವಹಾರಗಳ ಇಲಾಖೆಯು ಸದರಿ ವಿಧೇಯಕವನ್ನು ರಚಿಸಲು ಮತ್ತು ನಗರಾಭಿವೃದ್ಧಿ ಇಲಾಖೆಯು ಪ್ರಸ್ತಾಪಿಸಿದಂತೆ ವಿಧೇಯಕವನ್ನು ಮಾರ್ಪಡಿಸುವ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಪರಿಶೀಲಿಸಿ ಮಂಡಿಸುವಂತೆ ತಿಳಿಸಿದ್ದು ಅದರಂತೆ ಈ ಸಂಬಂಧ ನಗರಾಭಿವೃದ್ಧಿ ಇಲಾಖೆಗೆ ಕಡತ ಕಳುಹಿಸಲಾಗಿದೆ. |
| 4 | ಈ ವಿಳಂಬಗಳಿಂದ ಕ್ಲಬ್‌ಗಳಲ್ಲಿ ಸದಸ್ಯತ್ವ ಪಡೆಯಲು ಇಚ್ಛಿಸುವ ಶಾಸಕರುಗಳು ಅವಕಾಶವಂಚಿತರಾಗುತ್ತಿಲ್ಲವೇ? ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ; | ನಗರಾಭಿವೃದ್ಧಿ ಇಲಾಖೆಗೆ ನಿಯಮಾನುಸಾರ ಕ್ರಮವಿಡಲು ಕಡತವನ್ನು ಸಲ್ಲಿಸಲಾಗಿದೆ. |
| 5 | ಶಾಸಕರುಗಳಿಗೆ ಸಂಘಗಳ ಸದಸ್ಯತ್ವ ನೀಡುವ ಸಲುವಾಗಿ ಕಾಯ್ದೆ ತಿದ್ದುಪಡಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ? | |

ಸಿಒ 19 ಸಿಎಸ್‌ಆರ್ 2020

(ಎಸ್.ಟಿ.ಸೋಮಶೇಖರ್)

ಸಹಕಾರ ಸಚಿವರು

# ಕರ್ನಾಟಕ ವಿಧಾನ ಸಭೆ


(14ನೇ ವಿಧಾನಸಭೆ)

# ಕ್ಲಬ್ ಸದನ ಸಮಿತಿ

**ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳ ಬಗ್ಗೆ ವಿಚಾರಣೆ ನಡೆಸಿ ನೀಡಿರುವ**

## ಸದನ ಸಮಿತಿಯ ವರದಿ

**ವಿಧಾನಸಭೆಯಲ್ಲಿ ಮಂಡಿಸಿದ ದಿನಾಂಕ: 07-02-2017**



ಶಾಸನ ರಚನಾ ಶಾಖೆ

ಕರ್ನಾಟಕ ವಿಧಾನಸಭೆ ಸಚಿವಾಲಯ

ವಿಧಾನಸೌಧ, ಬೆಂಗಳೂರು.

# ಕರ್ನಾಟಕ ವಿಧಾನ ಸಭೆ

(14ನೇ ವಿಧಾನ ಸಭೆ)

# ಕ್ಲಬ್ ಸದನ ಸಮಿತಿ

ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳ ಬಗ್ಗೆ ವಿಚಾರಣೆ ನಡೆಸಿ ನೀಡಿರುವ

# ಸದನ ಸಮಿತಿಯ ವರದಿ

**ವಿಧಾನಸಭೆಯಲ್ಲಿ ಮಂಡಿಸಿದ ದಿನಾಂಕ:**

ಶಾಸನ ರಚನಾ ಶಾಖೆ

ಕರ್ನಾಟಕ ವಿಧಾನಸಭೆ ಸಚಿವಾಲಯ

ವಿಧಾನಸೌಧ, ಬೆಂಗಳೂರು.

## ವಿಷಯ ಸೂಚಿ


| ಕ್ರಮ ಸಂಖ್ಯೆ | ವಿವರ | ಪುಟಗಳು |
|---|---|---|
| 1 | ಸಮಿತಿಯ ರಚನೆ | i |
| 2 | ಮುನ್ನುಡಿ | ii |
| 3 | ವರದಿ | 1-52 |
| 4 | ಸಮಿತಿಯ ಶಿಫಾರಸ್ಸುಗಳು | 53-61 |
| 5 | ಅನುಬಂಧಗಳು | |

# ಸದನ ಸಮಿತಿಯ ರಚನೆ

ಶ್ರೀ ಎ. ಮಂಜು
ಅಧ್ಯಕ್ಷರು

ಶ್ರೀಯುತರುಗಳಾದ:

1. ಹೆಚ್.ಡಿ. ರೇವಣ್ಣ : ವಿಧಾನಸಭೆ ಸದಸ್ಯರು ಹಾಗೂ ಸದನ ಸಮಿತಿಯ ಸದಸ್ಯರು
2. ಎನ್.ಎ. ಹ್ಯಾರಿಸ್ : : :
3. ಡಾ|| ಅಜಯ ಧರ್ಮಸಿಂಗ್ : : :
4. ಟಿ. ರಘುಮೂರ್ತಿ : : :
5. ವಾಸು : : :
6. ಬಿ.ವೈ. ರಾಘವೇಂದ್ರ : : :
7. ಗುರುಪಾಟೀಲ ಶಿರವಾಳ : : :

*ಶ್ರೀ ಎ. ಮಂಜು, ಅಧ್ಯಕ್ಷರು ಸಚಿವರಾಗಿ ನೇಮಕಗೊಂಡ ನಂತರ ಸಮಿತಿಯ ಸದಸ್ಯರಾದ ಶ್ರೀ ಎನ್.ಎ. ಹ್ಯಾರಿಸ್‌ರವರು ದಿನಾಂಕ: 13.11.2015 ರಿಂದ ಅಧ್ಯಕ್ಷರಾಗಿ ನೇಮಕಗೊಂಡಿರುತ್ತಾರೆ.

ಶ್ರೀ ಎನ್.ಎ. ಹ್ಯಾರಿಸ್,
ಅಧ್ಯಕ್ಷರು

ಶ್ರೀಯುತರುಗಳಾದ:

1. ಹೆಚ್.ಡಿ. ರೇವಣ್ಣ : ವಿಧಾನಸಭೆ ಸದಸ್ಯರು ಹಾಗೂ ಸದನ ಸಮಿತಿಯ ಸದಸ್ಯರು,
2. ಡಾ|| ಅಜಯ ಧರ್ಮಸಿಂಗ್ : : :
3. ಟಿ. ರಘುಮೂರ್ತಿ : : :
4. ವಾಸು : : :
5. ಬಿ.ವೈ. ರಾಘವೇಂದ್ರ : : :
6. ಗುರುಪಾಟೀಲ ಶಿರವಾಳ : : :

ವಿಧಾನಸಭೆಯ ಸಚಿವಾಲಯದ ಅಧಿಕಾರಿಗಳು
ಶ್ರೀಯುತರುಗಳಾದ:

1. ಎಸ್. ಮೂರ್ತಿ — ಕಾರ್ಯದರ್ಶಿ (I/c)(ದಿನಾಂಕ:01.03.2016 ರಿಂದ)
2. ಎಸ್.ವೈ. ಕುಳಗೇರಿ — ಕಾರ್ಯದರ್ಶಿ (I/c)(ದಿನಾಂಕ:29.02.2016 ರಂದು ನಿವೃತ್ತಿ ಹೊಂದಿರುತ್ತಾರೆ.
3. ಎಂ.ಎಸ್. ಕುಮಾರಸ್ವಾಮಿ — ಉಪ ಕಾರ್ಯದರ್ಶಿ
4. ಬಿ.ಎಸ್. ಮಹಾಲಿಂಗೇಶ್ — ಅಧೀನ ಕಾರ್ಯದರ್ಶಿ
5. ಸಂದೀಪ್ ವಿ. ಬೆಟಸೂರ್ — ಅಧೀನ ಕಾರ್ಯದರ್ಶಿ

(361)

## ಮುನ್ನುಡಿ

ಕರ್ನಾಟಕ ವಿಧಾನಸಭೆಯು 2012-13ನೇ ಸಾಲಿನಲ್ಲಿ ರಾಜ್ಯದಲ್ಲಿ ಮತ್ತು ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳು ಸರ್ಕಾರದ ನಿಯಮಗಳನ್ನು ಮತ್ತು ಕಾನೂನನ್ನು ಗಾಳಿಗೆ ತೂರಿ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಸದನ ಸಮಿತಿಯನ್ನು ರಚಿಸಲಾಗಿದ್ದು, ಈ ಸಂಬಂಧ ಸಮಿತಿಯು ದಿನಾಂಕ: 07.06.2013 ರಂದು ಸದನದಲ್ಲಿ ಮಧ್ಯಂತರ ವರದಿಯನ್ನು ಮಂಡಿಸಿರುತ್ತದೆ. ಮುಂದುವರೆದಂತೆ, ಸಮಿತಿಯು ಶ್ರೀ ಎ. ಮಂಜು ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 21.01.2015, 20.02.2015, 06.03.2015, 31.03.2015, 12.06.2015, 21.08.2015, 28.08.2015, 04.09.2015, 11.09.2015, 18.09.2015, 01.10.2015, 08.10.2015, 15.10.2015, 30.10.2015 ರಂದು ಸಭೆ ನಡೆಸಿರುತ್ತದೆ. ತದನಂತರ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡ ಶ್ರೀ ಎನ್.ಎ. ಹ್ಯಾರಿಸ್ ರವರ ಅಧ್ಯಕ್ಷತೆಯಲ್ಲಿ 05.12.2015, 19.12.2015, 23.03.2016, 23.04.2016, 21.05.2016, 07.10.2016, 26.10.2016, 03.11.2016, 26.12.2016, 18.01.2017, 25.01.2017 ಮತ್ತು 06.02.2017 ರಂದು ಸಭೆಗಳನ್ನು ನಡೆಸಿ ಸಂಬಂಧಪಟ್ಟ ಇಲಾಖಾಧಿಕಾರಿಗಳೊಂದಿಗೆ ಚರ್ಚೆ ನಡೆಸಿರುತ್ತದೆ.

ಸಮಿತಿಯ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ವರದಿಯನ್ನು ತಯಾರಿಸುವಲ್ಲಿ ಸಹಕರಿಸಿದ ಮಾನ್ಯ ಸದಸ್ಯರುಗಳಿಗೆ ಹಾಗೂ ವಿಧಾನಸಭಾ ಸಚಿವಾಲಯದ ಅಧಿಕಾರಿ, ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ದಿನಾಂಕ: 25.01.2016 ಮತ್ತು 06.02.2017ರಂದು ನಡೆದ ಸಭೆಗಳಲ್ಲಿ ಕರಡು ವರದಿಯನ್ನು ಸಮಗ್ರವಾಗಿ ಸಮಿತಿಯು ಪರಿಶೀಲಿಸಿ ಅಂಗೀಕರಿಸಿತು ಹಾಗೂ ಸದರಿ ವರದಿಯನ್ನು ಸಮಿತಿಯ ಪರವಾಗಿ ಸನ್ಮಾನ್ಯ ಸಭಾಧ್ಯಕ್ಷರವರಿಗೆ ಸಲ್ಲಿಸಲು ಸಮಿತಿಯ ಮಾನ್ಯ ಅಧ್ಯಕ್ಷರಿಗೆ ಅಧಿಕಾರವನ್ನು ನೀಡಿರುತ್ತದೆ.

ದಿನಾಂಕ:
ಸ್ಥಳ:ಬೆಂಗಳೂರು

ಎನ್.ಎ. ಹ್ಯಾರಿಸ್
ಅಧ್ಯಕ್ಷರು
ಸದನ ಸಮಿತಿ.

# ವರದಿ

ಹದಿಮೂರನೇ ವಿಧಾನಸಭೆಯ ಸನ್ಮಾನ್ಯ ಸಭಾಧ್ಯಕ್ಷರು, ರಾಜ್ಯದಲ್ಲಿರುವ ಕ್ಲಬ್‌ಗಳಿಗೆ ಸಂಬಂಧಿಸಿದಂತೆ ಅವುಗಳ ಕಾರ್ಯವೈಖರಿ ಮತ್ತು ಅವುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸಮಗ್ರವಾಗಿ ವಿಚಾರಣೆ ನಡೆಸುವ ಸಲುವಾಗಿ ಡಾ: ಡಿ. ಹೇಮಚಂದ್ರ ಸಾಗರ್, ಅವರ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿಯನ್ನು ದಿನಾಂಕ 26.11.2012ರಂದು ರಚಿಸಲಾಗಿತ್ತು.

**<u>ಸದರಿ ಸಮಿತಿಯು ಈ ಕೆಳಕಂಡ ಪರಿಶೀಲನಾಂಶಗಳನ್ನು ಒಳಗೊಂಡಿತ್ತು.</u>**

1. ರಾಜ್ಯದಲ್ಲಿರುವ ಕ್ಲಬ್‌ಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್/ಸಂಸ್ಥೆಗಳಿಗೆ ಎಷ್ಟು ಜಾಗವನ್ನು ಯಾವ ಉದ್ದೇಶಕ್ಕಾಗಿ ಯಾವ ಆಧಾರದ ಮೇಲೆ ನೀಡಲಾಗಿದೆ. ಹಾಗೂ ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳನ್ನು ಯಾವ ಕಾಯ್ದೆಯನ್ವಯ ರಿಜಿಸ್ಟರ್ ಮಾಡಲಾಗುತ್ತಿದೆ ಎಂಬುದನ್ನು ಪರಿಶೀಲಿಸುವುದು.
2. ಕ್ಲಬ್‌ಗಳು ಯಾವ ಉದ್ದೇಶಕ್ಕಾಗಿ ಅನುಮತಿ ಪಡೆದಿವೆಯೋ ಅದೇ ರೀತ್ಯಾ ಕಾರ್ಯನಿರ್ವಹಿಸುತ್ತಿವೆಯೇ ಹಾಗೂ ಅವುಗಳ ಬೈಲಾ ಪ್ರಕಾರ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ಪರಿಶೀಲಿಸುವುದು.
3. ಕ್ಲಬ್‌ಗಳ ಸದಸ್ಯತ್ವವನ್ನು ಯಾವ ರೀತಿ ನೀಡಲಾಗುತ್ತಿದೆ; ಸದಸ್ಯರಿಗೆ ಸಮರ್ಪಕ ಸೇವೆಯನ್ನು ನೀಡಲಾಗುತ್ತಿದೆಯೇ ಸದಸ್ಯರಿಂದ ಪಡೆಯಲಾಗುತ್ತಿರುವ ಸದಸ್ಯತ್ವ ಶುಲ್ಕ, ಮನರಂಜನಾ ಶುಲ್ಕ ಇನ್ನಿತರೆ ಶುಲ್ಕಗಳನ್ನು ಯಾವ ರೀತಿ ಉಪಯೋಗಿಸಲಾಗುತ್ತಿದೆ ಹಾಗೂ ಅದರಲ್ಲಿ ದುರುಪಯೋಗವಾಗಿದೆಯೇ? ಎಂಬುದನ್ನು ಪರಿಶೀಲಿಸುವುದು.
4. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳ ಲೆಕ್ಕಗಳನ್ನು ಆಡಿಟ್ ಮಾಡಲಾಗಿದೆಯೇ ಹಾಗೂ ಹಣ ದುರುಪಯೋಗವಾಗಿರುವುದು ಕಂಡು ಬಂದಿದ್ದಲ್ಲಿ ಅಂತಹ ಕ್ಲಬ್‌ಗಳ ಸಂಸ್ಥೆಗಳ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮದ ಬಗ್ಗೆ ಪರಿಶೀಲಿಸುವುದು.
5. ರಾಜ್ಯದಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿಯನ್ನು ಅವುಗಳಲ್ಲಿನ ನ್ಯೂನತೆಗಳನ್ನು ಸಮಗ್ರವಾಗಿ ಪರಿಶೀಲಿಸುವುದು ಹಾಗೂ ಸಂಬಂಧಪಟ್ಟ ಅಧಿನಿಯಮಕ್ಕೆ ಅಗತ್ಯವೆನಿಸುವ ತಿದ್ದುಪಡಿಗಳನ್ನು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದರ ಕುರಿತು ಪರಿಶೀಲಿಸುವುದು.

ಡಾ: ಡಿ. ಹೇಮಚಂದ್ರ ಸಾಗರ್. ಅವರ ನೇತೃತ್ವದಲ್ಲಿ ರಚಿಸಲಾದ ಸದನ ಸಮಿತಿಯು ಹಲವಾರು ದಿನಾಂಕಗಳಂದು ಸಭೆ ಸೇರಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಒಳಪಟ್ಟ ಈ ಕೆಳಕಂಡ ಕ್ಲಬ್‌ಗಳಿಗೆ ಭೇಟಿ ನೀಡಿ ಕ್ಲಬ್‌ಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿತಲ್ಲದೆ ಕ್ಲಬ್‌ಗಳ ಪದಾಧಿಕಾರಿಗಳೊಂದಿಗೆ ಚರ್ಚೆ ನಡೆಸಿತು.

1. ಗಾಲ್ಫ್ ಕ್ಲಬ್.
2. ಸೆಂಚುರಿ ಕ್ಲಬ್.
3. ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್.
4. ಬೆಂಗಳೂರು ಟರ್ಫ್ ಕ್ಲಬ್.
5. ಬೋರಿಂಗ್ ಇನ್‌ಸ್ಟಿಟ್ಯೂಟ್ ಕ್ಲಬ್.
6. ಬೆಂಗಳೂರು ಕ್ಲಬ್.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾನಗರ ವ್ಯಾಪ್ತಿಗೆ ಒಳಪಟ್ಟ ಕ್ಲಬ್‌ಗಳಿಗಲ್ಲದೆ ಮೈಸೂರು ನಗರದ ವ್ಯಾಪ್ತಿಗೆ ಒಳಪಟ್ಟ ಕಾಸ್ಮೋಪಾಲಿಟನ್ ಕ್ಲಬ್, ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್, ಕ್ಲಬ್ ಹೌಸ್ ಮೈಸೂರ್ ರೇಸ್ ಕ್ಲಬ್ ಲಿಮಿಟೆಡ್ ಹಾಗೂ ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್‌ಗಳಿಗೆ ಸಮಿತಿಯು ಭೇಟಿ ನೀಡಿ ಕ್ಲಬ್ಬಿನ ಪದಾಧಿಕಾರಿಗಳು ಹಾಗೂ ಇಲಾಖಾಧಿಕಾರಿಗಳೊಂದಿಗೆ ಚರ್ಚೆ ನಡೆಸಿತು.

ಹದಿಮೂರನೇ ವಿಧಾನಸಭೆಯ ಅವಧಿಯಲ್ಲಿ ವಿಧಾನಸಭಾ ಸದಸ್ಯರಾಗಿದ್ದ ಡಾ: ಡಿ. ಹೇಮಚಂದ್ರ ಸಾಗರ್ ಇವರ ನೇತೃತ್ವದಲ್ಲಿ ರಚಿಸಲಾದ ಕ್ಲಬ್ ಸದನ ಸಮಿತಿಯು ಸಲ್ಲಿಸಿದ ಮಧ್ಯಂತರ ವರದಿಯನ್ನು ದಿನಾಂಕ 07.06.2013 ರಂದು ಸದನದಲ್ಲಿ ಮಂಡಿಸಲಾಗಿದ್ದು, ಅದರ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

**ಪರಿಶೀಲನೆಯ ಸಮಯದಲ್ಲಿ ಇಲಾಖಾಧಿಕಾರಿಗಳಿಂದ ಹಾಗೂ ಕ್ಲಬ್ ಪದಾಧಿಕಾರಿಗಳಿಂದ ಸಮಿತಿಗೆ ತಿಳಿದು ಬಂದ ಮಾಹಿತಿಗಳ ವಿವರ ಈ ಕೆಳಕಂಡಂತಿದೆ.**

- ರಾಜ್ಯದಲ್ಲಿರುವ ಕೆಲವು ಕ್ಲಬ್‌ಗಳಿಗೆ ಹಿಂದಿನ ರಾಜಮಹಾರಾಜರ/ದಿವಾನರ ಕಾಲದಲ್ಲಿ ಜಮೀನನ್ನು ನೀಡಲಾಗಿದ್ದು, ಅವುಗಳಿಗೆ ನೀಡಲಾಗಿರುವ ಎಲ್ಲಾ ಜಮೀನುಗಳು ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದರೆ ಕೆಲವು ಕ್ಲಬ್‌ಗಳಿಗೆ ಬೃಹತ್ ಬೆಂಗಳೂರು ನಗರ ಪಾಲಿಕೆ, ಲೋಕೋಪಯೋಗಿ ಇಲಾಖೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಗೆ ಬರುವ ಜಮೀನುಗಳಾಗಿರುತ್ತದೆ. ಇದಲ್ಲದೇ ಕೆಲವು ಜಿಲ್ಲೆಗಳಲ್ಲಿ

ಜಿಲ್ಲಾಧಿಕಾರಿಗಳು ಕ್ಲಬ್‌ಗಳಿಗೆ ಜಾಗವನ್ನು ನೀಡಿರುತ್ತಾರೆ, ಇದರಿಂದಾಗಿ ಕೆಲವು ಕ್ಲಬ್‌ಗಳ ವ್ಯವಹಾರಗಳು ಸರ್ಕಾರದ ಮಟ್ಟದಲ್ಲಿ ಕಂದಾಯ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

- ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ಗೆ ಸರ್ಕಾರದ ವತಿಯಿಂದ ಜಾಗ ನೀಡಲಾಗಿರುತ್ತದೆ. ಈ ಹಿಂದೆ ಕೆ.ಎಸ್.ಟಿ.ಡಿ.ಸಿ.ಗೆ ಸರ್ಕಾರದಿಂದ 180-185 ಎಕರೆ ಜಾಗ ನೀಡಿದ್ದು, ಕೆ.ಎಸ್.ಡಿ.ಸಿ.ಯವರು ಕ್ಯಾಬಿನೆಟ್ ಅಪ್ರೋವಲ್ ಪಡೆದು ಕರ್ನಾಟಕ ಗಾಲ್ಫ್ ಅಸೋಸಿಯೆಷನ್‌ಗೆ ಒಂದು ಎಕರೆಗೆ ಒಂದು ರೂಪಾಯಿಯಂತೆ ಜಾಗವನ್ನು ಲೀಸ್‌ಗೆ ನೀಡಲಾಗಿರುತ್ತದೆ. ಸದರಿ ವಿಷಯಕ್ಕೆ ಅಕೌಂಟೆಂಟ್ ಜನರಲ್‌ರವರು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ.
- ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್, ಮೈಸೂರು ರೇಸ್ ಕ್ಲಬ್‌ಗಳಿಗೆ ಸರ್ಕಾರದಿಂದ ಜಮೀನನ್ನು ಲೀಸ್ ಆಧಾರದ ಮೇಲೆ ನೀಡಲಾಗಿದ್ದು, ಇಂಥ ಪ್ರತಿಷ್ಠಿತ ಕ್ಲಬ್‌ಗಳಲ್ಲಿ ಸರ್ಕಾರದ ಪ್ರತಿನಿಧಿಗಳಿಗೆ ಅಂದರೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಕಡ್ಡಾಯವಾಗಿ ಗೌರವ ಸದಸ್ಯತ್ವ ನೀಡುವ ಬಗ್ಗೆ ನಿಯಮ ರಚಿಸುವ ಸರ್ಕಾರ ಪ್ರಸ್ತಾವವಿರುವುದಾಗಿ ತಿಳಿದು ಬಂದಿರುತ್ತದೆ.
- ಮೈಸೂರು ಸರ್ಕಾರ 1915 ಮತ್ತು 1923ರಲ್ಲಿ ಕುದುರೆ ಓಡಿಸುವ ಸ್ಪರ್ಧೆಯನ್ನು ನಡೆಸುವ ಉದ್ದೇಶಕ್ಕಾಗಿ ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯವರಿಗೆ 83 ಎಕರೆ 14 ಗುಂಟೆ ಜಮೀನನ್ನು ನೀಡಿ ಭೋಗ್ಯದ ಕರಾರು ಪತ್ರವನ್ನು ವಾರ್ಷಿಕ ರೂ.50,000/-ಗಳ ಮೊತ್ತದೊಂದಿಗೆ ಮಾಡಿಕೊಳ್ಳಲಾಗಿರುತ್ತದೆ. ದಿನಾಂಕ 21.12.1983ರಂದು ಅಂದಿನ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರು ಬೆಂಗಳೂರು ಟರ್ಫ್ ಕ್ಲಬ್‌ನೊಂದಿಗೆ 30 ವರ್ಷಗಳಿಗೆ ಭೋಗ್ಯದ ಕರಾರು ಒಪ್ಪಂದಂತೆ ಪರಿಷ್ಕೃತ ಒಪ್ಪಂದವನ್ನು ವಾರ್ಷಿಕ ರೂ.50,000/- ಗಳನ್ನು ಪಾವತಿಸುವಂತೆ ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ರಸ್ತೆ ಅಗಲೀಕರಣಕ್ಕಾಗಿ ಕೆಲವು ರಸ್ತೆಗಳನ್ನು ಉಪಯೋಗಿಸಿರುವ ಕಾರಣ ಪ್ರಸ್ತುತ ಟರ್ಫ್ ಕ್ಲಬ್‌ನ ಸುಪರ್ದಿಯಲ್ಲಿ 73 ಎಕರೆ 39 ಗುಂಟೆ ಜಮೀನು ಮಾತ್ರ ಇರುತ್ತದೆ.

- **<u>ಬೆಂಗಳೂರು ಗಾಲ್ಫ್ ಕ್ಲಬ್</u>** : ಬೆಂಗಳೂರು ಗಾಲ್ಫ್ ಕ್ಲಬ್ 1876ರಲ್ಲಿ ಸ್ಥಾಪನೆಯಾಗಿದ್ದು, ಕಳೆದ 135 ವರ್ಷಗಳಿಂದ ಸತತವಾಗಿ (ಅಂದರೆ 2ನೇ ಮಹಾಯುದ್ಧದ ಅವಧಿಯನ್ನು ಹೊರತುಪಡಿಸಿ) ಯಾವುದೇ ಅಡೆತಡೆಗಳಿಲ್ಲದೆ ಕಾರ್ಯನಿರ್ವಹಿಸುತ್ತಿದೆ. ಗಾಲ್ಫ್ ಆಟವನ್ನು ಮುಖ್ಯವಾದ ಆಟವನ್ನಾಗಿ ಪ್ರೋತ್ಸಾಹಿಸುತ್ತಿದೆ. ಮೈಸೂರು ಮಹಾರಾಜರ ಕಾಲದಲ್ಲಿ ಸುಮಾರು 60 ಎಕರೆ 15 ಗುಂಟೆ ಜಮೀನನ್ನು ನೀಡಲಾಗಿದ್ದು, ಸದ್ಯ 600 ಜನ ಸದಸ್ಯರು 1850 ಜನ ಗೌರವಾನ್ವಿತ ಸದಸ್ಯರಿರುತ್ತಾರೆ. ಕ್ಲಬ್‌ನ ಸದಸ್ಯರಾಗ ಬಯಸುವವರಿಗೆ ರೂ.50 ಸಾವಿರ ಸದಸ್ಯತ್ವ ಶುಲ್ಕವನ್ನು ನಿಗದಿಪಡಿಸಲಾಗಿದೆ. ಪ್ರತಿ ವರ್ಷ ಬಿ.ಬಿ.ಎಂ.ಪಿ ಗೆ ರೂ. 7,00,000/-ಗಳ ಪ್ರಾಪರ್ಟಿ ಟ್ಯಾಕ್ಸ್‌ನ್ನು ಕ್ಲಬ್ ವತಿಯಿಂದ ಕಟ್ಟಲಾಗುತ್ತಿದೆ. ಸದರಿ ಕ್ಲಬ್ ಕ್ರೀಡಾ ಚಟುವಟಿಗಳನ್ನು ಉತ್ತೇಜಿಸುವ ಮುಖ್ಯ ಉದ್ದೇಶ ಹೊಂದಿರುತ್ತದೆ.

- **<u>ಸೆಂಚುರಿ ಕ್ಲಬ್:</u> ಮೈಸೂರಿನ ಮಹಾರಾಜರು ಸೆಂಚುರಿ ಕ್ಲಬ್‌ಗೆ 7.2 ಎಕರೆ ಜಮೀನು ನೀಡಿದ್ದು ಪ್ರಸ್ತುತ 4.35 ಎಕರೆ ಮಾತ್ರ ಕ್ಲಬ್‌ನ ಸುಪರ್ದಿಯಲ್ಲಿರುತ್ತದೆ. ಹಾಲಿ 6000 ಜನ ಸದಸ್ಯರಿದ್ದು, ಕ್ಲಬ್‌ನ ಸದಸ್ಯತ್ವ ಪಡೆಯಬೇಕಾದಲ್ಲಿ ಅವರು ಕರ್ನಾಟಕದವರಾಗಿರಬೇಕು, ಅಡ್ರೆಸ್ ಪ್ರೂಫ್ ಹೊಂದಿರಬೇಕು, ಅಧಿಕಾರಿಗಳು ಸದಸ್ಯರಾಗಬಯಸಿದಲ್ಲಿ ಎ ವೃಂದದ ಅಧಿಕಾರಿಗಳಾಗಿರಬೇಕು, ವರ್ಗಾವಣೆಯುಳ್ಳ ಹುದ್ದೆಯಾಗಿರಬೇಕು ಎಂಬ ನಿಭಂದನೆ ಇರುತ್ತದೆ. ಸದರಿ ಕ್ಲಬ್‌ನವರು ವಾರ್ಷಿಕ 7.5 ಲಕ್ಷ ರೂ.ಗಳನ್ನು ಬಿ.ಬಿ.ಎಂ.ಪಿ.ಗೆ ಕಂದಾಯ ಕಟ್ಟುತ್ತಿದ್ದಾರೆ.**

- **<u>ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್:</u>** ಕರ್ನಾಟಕ ರಾಜ್ಯದ ಬೀದರ್‌ನಿಂದ ಚಾಮರಾಜನಗರದವರೆಗೆ ಪ್ರತಿ ಜಿಲ್ಲೆಯ ಮಕ್ಕಳಿಗೂ ಅನುಕೂಲವಾಗುವಂತೆ ಕ್ರಿಕೆಟ್ ತರಬೇತಿ ನೀಡುವ ವ್ಯವಸ್ಥೆಯನ್ನು ಕ್ರಿಕೆಟ್ ಕ್ಲಬ್ ಸಂಸ್ಥೆಯಿಂದ ಮಾಡಲಾಗುತ್ತಿದೆ. ಕ್ರಿಕೆಟ್ ಕ್ಲಬ್‌ನಲ್ಲಿ ವಸ್ತ್ರ ಸಂಹಿತೆ ಬಗ್ಗೆ ಯಾವುದೇ ನಿಖರವಾದ ನಿಯಮಗಳಿರುವುದಿಲ್ಲ. ಆದರೆ ಪ್ರತಿಯೊಬ್ಬ ಕ್ಲಬ್‌ನ ಸದಸ್ಯರಿಗೆ ರೌಂಡ್ ನೆಕ್ ಟೀ ಶರ್ಟ್ ಹಾಕಿಕೊಳ್ಳಲು ಅವಕಾಶ ಇರುವುದಿಲ್ಲ. ದಿನಾಂಕ 07.07.1969ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಪ್ರತಿ ವರ್ಷಕ್ಕೆ 1,000/- ರೂ. ಬಾಡಿಗೆ ಆಧಾರದ ಮೇಲೆ 16 ಎಕರೆ 25 ಗುಂಟೆ ಜಮೀನನ್ನು ಮೈಸೂರು ರಾಜ್ಯ ಕ್ರಿಕೆಟ್ ಸಂಸ್ಥೆಗೆ 99 ವರ್ಷ ಲೀಸ್ ಅವಧಿಗೆ ನೀಡಲಾಗಿರುತ್ತದೆ.

- **ಬೆಂಗಳೂರು ಟರ್ಫ್ ಕ್ಲಬ್** : 1956ರ ಕಂಪನಿಗಳ ಕಾಯ್ದೆಯಡಿ ಬೆಂಗಳೂರು ಟರ್ಫ್ ಕ್ಲಬ್ ನೋಂದಣಿಯಾಗಿರುತ್ತದೆ. ಕ್ಲಬ್‌ನ ಮುಖ್ಯ ಉದ್ದೇಶ ಕುದುರೆಗಳನ್ನು ಓಡಿಸುವ ಸ್ಪರ್ಧೆ ನಡೆಸುವುದು. ಕುದುರೆ ಓಡಿಸುವ ಸ್ಪರ್ಧೆಯನ್ನು ಬೇಸಿಗೆ ಹಾಗೂ ಚಳಿಗಾಲದಲ್ಲಿ ನಡೆಸಲಾಗುತ್ತಿದೆ. ಸರ್ಕಾರಕ್ಕೆ ಕ್ಲಬ್‌ನ ವತಿಯಿಂದ ರೂ. 1.20 ಕೋಟಿ ರೂಪಾಯಿಗಳ ತೆರಿಗೆಯನ್ನು ಪಾವತಿಸಲಾಗುತ್ತಿದೆ. ಕ್ಲಬ್‌ನಲ್ಲಿ 150 ಜನ ಸದಸ್ಯರಿದ್ದು, 200 ಜನ ಸಹ ಸದಸ್ಯರಿರುತ್ತಾರೆ. ಸರ್ಕಾರದ ವತಿಯಿಂದ ಆರ್ಥಿಕ ಇಲಾಖೆಯ ಕಾರ್ಯದರ್ಶಿ, ಬೆಂಗಳೂರು ಪೋಲೀಸ್ ಆಯುಕ್ತರು ಹಾಗೂ ಮುಖ್ಯ ಮಂತ್ರಿಗಳಿಂದ ನಾಮನಿರ್ದೇಶನಗೊಂಡ ಇಬ್ಬರು ಕ್ಲಬ್‌ನ ಸದಸ್ಯರಾಗಿರುತ್ತಾರೆ. 1863ರಲ್ಲಿ ಟರ್ಫ್ ಕ್ಲಬ್‌ಗೆ ಸರ್ಕಾರದಿಂದ 92 ಎಕರೆ ಜಮೀನನ್ನು ನೀಡಲಾಗಿದ್ದು, ಪ್ರಸ್ತುತ 71 ಎಕರೆ ಜಮೀನು ಮಾತ್ರ ಉಳಿದುಕೊಂಡಿರುತ್ತದೆ. ಸರ್ಕಾರಕ್ಕೆ ಈ ಹಿಂದೆ ಪ್ರತಿ ವರ್ಷ 5 ಲಕ್ಷ ರೂಪಾಯಿಗಳ ಲೀಸ್ ಹಣವನ್ನು ನೀಡಲಾಗುತ್ತಿದ್ದು, ಆದರೆ ಈಗ 25 ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿದೆ

- **ಬೌರಿಂಗ್ ಇನ್‌ಸ್ಟಿಟ್ಯೂಟ್ ಕ್ಲಬ್:** ಬೌರಿಂಗ್ ಇನ್‌ಸ್ಟಿಟ್ಯೂಟ್ ಕ್ಲಬ್ 1868ರಲ್ಲಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಆಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಬಿ.ಎಲ್.ರೈಸ್. ಇವರಿಂದ ಸ್ಥಾಪಿತಗೊಂಡಿರುತ್ತದೆ. 5000 ಜನ ಸದಸ್ಯರನ್ನು ಹೊಂದಿರುತ್ತದೆ. ಸದರಿ ಸಂಸ್ಥೆಯು ಕರ್ನಾಟಕ ಸೊಸೈಟಿ (ರಿ) ಆಕ್ಟ್ 1960ರಡಿಯಲ್ಲಿ ನೋಂದಣಿಯಾಗಿರುತ್ತದೆ. ಕ್ಲಬ್‌ನಲ್ಲಿ ವಿವಿಧ ಕ್ರೀಡಾ ಅನುಕೂಲಗಳು ಇರುತ್ತದೆ.

- **ಬೆಂಗಳೂರು ಕ್ಲಬ್:** 1868ರಲ್ಲಿ ಬ್ರಿಟಿಷ್ ಅಧಿಕಾರಿಗಳ ಉಪಯೋಗಕ್ಕಾಗಿ ಈ ಕ್ಲಬ್‌ನ್ನು ಸ್ಥಾಪಿಸಲಾಗಿರುತ್ತದೆ. ಬೆಂಗಳೂರು ಕ್ಲಬ್ ದೇಶ ಮತ್ತು ವಿದೇಶಗಳಲ್ಲಿ ಇತರೆ ಕ್ಲಬ್‌ಗಳಿಗೆ ಅಫೀಲಿಯೇಷನ್ ಹೊಂದಿರುತ್ತದೆ. ಹಾಲಿ 6000 ಜನ ಸದಸ್ಯರಿರುತ್ತಾರೆ. ಬೆಂಗಳೂರು ಕ್ಲಬ್ ಯಾವುದೇ ತರಹದ ಸಾಮಾಜಿಕ ಚಟುವಟಿಗಳಲ್ಲಿ ತೊಡಗಿಕೊಂಡಿರುವುದಿಲ್ಲ. ಆದರೆ ಪ್ರತಿ ವರ್ಷ 20 ಲಕ್ಷ ರೂಪಾಯಿಗಳ ತೆರಿಗೆಯನ್ನು ಪಾವತಿಸುತ್ತಿದೆ.

- **ಕರ್ನಾಟಕ ಇಂಜಿನಿಯರ್ಸ್ ಅಕಾಡೆಮಿ:** 1988-89 ಸಾಲಿನಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ಉದ್ದೇಶದಿಂದ ಕರ್ನಾಟಕ ಇಂಜಿನಿಯರ್ಸ್ ಅಕಾಡೆಮಿಯನ್ನು ಸ್ಥಾಪಿಸಲಾಯಿತು. ಸದರಿ ಕ್ಲಬ್‌ಗೆ ಬಿ.ಡಿ.ಎ. ಯಿಂದ 1 ಎಕರೆ 3 ಗುಂಟೆ ಜಮೀನನ್ನು ಮಂಜೂರು

ಮಾಡಲಾಗಿದೆ. ಯಾವುದೇ ವಸ್ತ್ರ ಸಂಹಿತೆಯ ನಿರ್ಬಂಧ ಇರುವುದಿಲ್ಲ. ಅಬಕಾರಿ ಇಲಾಖೆಯಿಂದ ಸಿಎಲ್-4 ಪರವಾನಿಗೆಯನ್ನು ಪಡೆದಿರುತ್ತದೆ

- <u>ನಾಗರಬಾವಿ ಕ್ಲಬ್(ರಿ):</u> ಮನರಂಜನೆಯ ಉದ್ದೇಶದಿಂದ 1997-98ನೇ ಸಾಲಿನಲ್ಲಿ ಈ ಕ್ಲಬ್ ಸ್ಥಾಪಿತವಾಗಿರುತ್ತದೆ. ಈ ಕ್ಲಬ್ ಖಾಸಗಿ ಸ್ವತ್ತಿನಲ್ಲಿ ನಡೆಸಲಾಗುತ್ತಿದೆ.

- <u>ರೀಜೆನ್ಸಿ ಇನ್ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಅಂಡ್ ಕಲ್ಚರ್:</u> ಮನರಂಜನೆ ಉದ್ದೇಶದಿಂದ 1989-90ನೇ ಸಾಲಿನಲ್ಲಿ ಖಾಸಗಿ ಸ್ವತ್ತಿನಲ್ಲಿ ಈ ಕ್ಲಬ್‌ನ್ನು ಸ್ಥಾಪಿಸಲಾಗಿದೆ. ಅಬಕಾರಿ ಇಲಾಖೆಯಿಂದ ಸಿಎಲ್-4 ಲೈಸೆನ್ಸ್ ನೀಡಲಾಗಿರುತ್ತದೆ.

- **<u>ಬಿ.ಆರ್.ವಿ ಇನ್ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಅಂಡ್ ಕಲ್ಚರ್</u> 1991-92ನೇ ಸಾಲಿನಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ತಿಳುವಳಿಕೆ ಮೂಡಿಸುವ ಸಲುವಾಗಿ ಖಾಸಗಿ ಸ್ವತ್ತಿನಲ್ಲಿ ಈ ಕ್ಲಬ್‌ನ್ನು ಸ್ಥಾಪಿಸಲಾಗಿದೆ. ಇಲಾಖೆಯಿಂದ ಸಿಎಲ್-4 ಪರವಾನಿಗೆಯನ್ನು ಪಡೆದಿರುತ್ತದೆ.**

- **<u>ಬಸವೇಶ್ವರ ನಗರ ಇನ್ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಆಂಡ್ ಕಲ್ಚರ್:</u> ಮನರಂಜನೆ ಮತ್ತು ಸಾಂಸ್ಕೃತಿಕ ಉದ್ದೇಶದಿಂದಾಗಿ ಖಾಸಗಿ ಸ್ವತ್ತಿನಲ್ಲಿ 1985-86ರಲ್ಲಿ ಈ ಕ್ಲಬ್‌ನ್ನು ಸ್ಥಾಪಿಸಲಾಗಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದಿರುತ್ತದೆ.**

- **<u>ಸಿಟಿಜನ್ ಕಲ್ಚರಲ್ ಅಸೋಸಿಯೇಷನ್:</u> ಸಾಂಸ್ಕೃತಿಕ ಕ್ರೀಡೆ ಮತ್ತು ಇತರ ಸಮುದಾಯದಿಂದ ಸ್ನೇಹ ಬಾಂಧವ್ಯ ಬೆಳೆಸುವ ಉದ್ದೇಶದಿಂದ 1969ರ ಸಾಲಿನಲ್ಲಿ ಈ ಕ್ಲಬ್‌ನ್ನು ಖಾಸಗಿ ಸ್ವತ್ತಿನಲ್ಲಿ ಸ್ಥಾಪಿಸಲಾಗಿರುತ್ತದೆ.**

- <u>ಮಲ್ಲೇಶ್ವರಂ ಅಸೋಸಿಯೇಷನ್:</u> 1920ರಲ್ಲಿ ಈ ಕ್ಲಬ್‌ನ್ನು ಖಾಸಗಿ ಸ್ವತ್ತಿನಲ್ಲಿ ಸ್ಥಾಪಿಸಲಾಗಿರುತ್ತದೆ. ವಸ್ತ್ರ ಸಂಹಿತೆ ಜಾರಿಯಲ್ಲಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

- <u>ಬಿ.ಇ.ಎಲ್. ಆಫೀಸರ್ಸ್ ಕ್ಲಬ್:</u> 1963-64ರಲ್ಲಿ ಬಿ.ಇ.ಎಲ್ ಸರಹದ್ದಿನ ಒಳಗಡೆ ಈ ಕ್ಲಬ್ ಸ್ಥಾಪನೆಗೊಂಡಿರುತ್ತದೆ. ಕ್ಲಬ್‌ನ ಜಾಗ ಕೇಂದ್ರ ಸರ್ಕಾರಕ್ಕೆ ಸೇರಿದ ಸ್ವತ್ತಾಗಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

- **ಸದಾಶಿವನಗರ ಕ್ಲಬ್:** ಸಾಂಸ್ಕೃತಿಕ ಮತ್ತು ಸಾಮಾಜಿಕ ಮನರಂಜನೆ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶದಿಂದ 1963ರಲ್ಲಿ ಸದರಿ ಕ್ಲಬ್‌ನ್ನು ಸ್ಥಾಪಿಸಲಾಗಿತ್ತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸದಾಶಿವನಗರ ಕ್ಲಬ್‌ಗೆ 30843 ಅಡಿಗಳಷ್ಟು ಜಾಗವನ್ನು 30 ವರ್ಷಗಳಿಗೆ ಲೀಸ್ ನೀಡಲಾಗಿರುತ್ತದೆ.

- **ಕಾರ್ಡ್‌ರೋಡ್ ಕ್ಲಬ್ (ನಂದಿನಿ ಲೇಔಟ್ ಕ್ಲಬ್):** ವಿದ್ಯಾಭ್ಯಾಸ, ಕ್ರೀಡೆ ಮತ್ತು ಮನರಂಜನೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 1987ರಲ್ಲಿ ಸದರಿ ಕ್ಲಬ್‌ನ್ನು ಸ್ಥಾಪಿಸಲಾಯಿತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿ.ಎ. ನಿವೇಶನ 602 ಚದರ ಮೀಟರ್‌ನ್ನು ಕ್ಲಬ್‌ಗೆ ನೀಡಿರುತ್ತಾರೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.
- **ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್:** ಸಾಮಾಜಿಕ ಚಟುವಟಿಗಳು, ಕ್ರೀಡೆಗಳು ಮತ್ತು ಮನರಂಜನೆಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಸ್ವಂತ ಜಮೀನಿನಲ್ಲಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್ ಕ್ಲಬ್‌ನ್ನು ಸ್ಥಾಪಿಸಲಾಗಿರುತ್ತದೆ.
- **ಕರ್ನಾಟಕ ಸ್ಟೇಟ್ ಹಾಕಿ ಅಸೋಸಿಯೇಷನ್:** ರಾಜ್ಯದಲ್ಲಿ ಹಾಕಿ ಕ್ರೀಡೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 1934ರಲ್ಲಿ ಕರ್ನಾಟಕ ಸ್ಟೇಟ್ ಹಾಕಿ ಅಸೋಸಿಯೇಷನ್‌ನ್ನು ಸ್ಥಾಪಿಸಲಾಗಿರುತ್ತದೆ. ಬಿ.ಬಿ.ಎಂ.ಪಿ ವತಿಯಿಂದ 5 ಎಕರೆ ಜಾಗವನ್ನು ನೀಡಲಾಗಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.
- **ದಿ ಕಂಟ್ರಿ ಕ್ಲಬ್ ಆಫ್ ಇಂಡಿಯಾ ಲಿಮಿಟೆಡ್:** ಮನರಂಜನೆ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಲು ತಿಳುವಳಿಕೆ ನೀಡುವ ಉದ್ದೇಶದಿಂದ ದಿನಾಂಕ 14.06.1996ರಲ್ಲಿ ಕ್ಲಬ್‌ನ್ನು ಖಾಸಗಿ ಸ್ವತ್ತಿನಲ್ಲಿ ಸ್ಥಾಪಿಸಲಾಗಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.
- **ಐ.ಟಿ.ಐ ಅಫೀಸರ್ಸ್ ಕ್ಲಬ್:** ಐ.ಟಿ.ಐ ಲಿ., ಸಂಸ್ಥೆಗೆ ಸೇರಿದ ಜಮೀನಲ್ಲಿ ಸದರಿ ಕ್ಲಬ್‌ನ್ನು ಸ್ಥಾಪಿಸಲಾಗಿದ್ದು, ವಸ್ತ್ರ ಸಂಹಿತೆ ಜಾರಿಯಲ್ಲಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.
- **ಕಸ್ತೂರಿನಗರ ಕ್ಲಬ್:** ಈ ಕ್ಲಬ್ 1997ರಲ್ಲಿ ಸ್ಥಾಪಿಸಲಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿ.ಎ. 8(ಎ) 100 X 100 ಅಡಿ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

➢ <u>ಹೆಣ್ಣೂರು ಬಾಣಸವಾಡಿ ಕಾಸ್ಮೋಪಾಲಿಟನ್ ಕ್ಲಬ್:</u> 1991-92ನೇ ಸಾಲಿನಲ್ಲಿ ಕರ್ನಾಟಕ ನೋಂದಣಿ ಅಧಿನಿಯಮದಡಿಯಲ್ಲಿ ಕ್ಲಬ್‌ನ್ನು ಸ್ಥಾಪಿಸಲಾಗಿರುತ್ತದೆ. ಬಿ.ಡಿ.ಎ ವತಿಯಿಂದ 2 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

➢ <u>ದಿ ಸಿವಿಯೇಟ್ ಕ್ಲಬ್</u> : 2009-10ನೇ ಸಾಲಿನಲ್ಲಿ ಖಾಸಗಿ ಜಮೀನಿನಲ್ಲಿ ಈ ಕ್ಲಬ್‌ನ್ನು ಸ್ಥಾಪಿಸಲಾಗಿರುತ್ತದೆ. ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

➢ <u>ಇಂದಿರಾನಗರ ಕ್ಲಬ್:</u> 1980ನೇ ಸಾಲಿನಲ್ಲಿ ಕ್ಲಬ್‌ನ್ನು ಸ್ಥಾಪಿಸಲಾಗಿದ್ದು, ಸದರಿ ಕ್ಲಬ್ ತಮ್ಮದೇ ಆದಂತಹ ವಸ್ತ್ರ ಸಂಹಿತೆಯನ್ನು ಜಾರಿಗೆ ತಂದಿರುತ್ತದೆ.

➢ <u>ಜೆ.ಪಿ.ನಗರ ಕಲ್ಚರಲ್ ಅಸೋಸಿಯೇಷನ್(ರಿ):</u> 1983ರಲ್ಲಿ ಕ್ಲಬ್ ಸ್ಥಾಪನೆಯಾಗಿದ್ದು, ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

➢ <u>ಸ್ಯಾಟಲೈಟ್ ಕ್ಲಬ್</u> : ಈ ಕ್ಲಬ್ 1989ರಲ್ಲಿ ಸ್ಥಾಪನೆಯಾಗಿದ್ದು, ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

➢ <u>ಜೆ.ಪಿ.ನಗರ ರೆಸಿಡೆಂಟ್ಸ್ ವೆಲ್ಫೇರ್ ಅಂಡ್ ಕಲ್ಚರಲ್ ಅಸೋಸಿಯೇಷನ್:</u> ಈ ಕ್ಲಬ್ 1980ರಲ್ಲಿ ಸ್ಥಾಪನೆಯಾಗಿದ್ದು, ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

➢ <u>ಜಯನಗರ ಅಸೋಸಿಯೇಷನ್:</u> ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವ ಸದುದ್ದೇಶದಿಂದ 2002ರಲ್ಲಿ ಕ್ಲಬ್‌ನ್ನು ಸ್ಥಾಪಿಸಲಾಗಿದ್ದು, ಸಿಎಲ್-4 ಪರವಾನಿಗೆಯನ್ನು ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿದೆ.

➢ <u>ಕಾಸ್ಮೋಪಾಲಿಟನ್ ಕ್ಲಬ್, ಮೈಸೂರು:</u> ಈ ಕ್ಲಬ್‌ನ್ನು 1895ರಲ್ಲಿ ಸರದಾರ್ ರಾಮಚಂದ್ರ ರಾಜ್ ಅರಸ್‌ರವರು ಸ್ಥಾಪಿಸಿದರು.

<u>ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಮೈಸೂರು:</u> ಈ ಕ್ಲಬ್‌ನ ಮುಖ್ಯ ಉದ್ದೇಶ ಮನರಂಜನೆ ಮತ್ತು ಕ್ರೀಡೆಗಳಾಗಿದ್ದು, 1933ರಲ್ಲಿ ಪ್ರಾರಂಭವಾಗಿರುತ್ತದೆ. ಕ್ಲಬ್‌ನ ಒಟ್ಟು ವಿಸ್ತೀರ್ಣ 8 ಎಕರೆ 32 ಗುಂಟೆಗಳಾಗಿರುತ್ತದೆ.

- <u>ಕ್ಲಬ್ ಹೌಸ್ ಮೈಸೂರ್ ರೇಸ್ ಕ್ಲಬ್ ಲಿಮಿಟೆಡ್:</u> ಈ ಕ್ಲಬ್ 1891ರಲ್ಲಿ ಸ್ಥಾಪನೆಯಾಗಿದ್ದು, ರೇಸ್ ಮತ್ತು ಕ್ರೀಡಾ ಚಟುವಟಿಗಳನ್ನು ನಡೆಸಿಕೊಂಡು ಬರುತ್ತಿದೆ. 1968ರಲ್ಲಿ ಲಿಮಿಟೆಡ್ ಕಂಪನಿಯಾಗಿ ನೋಂದಣಿಯಾಯಿತು. 1968ರಲ್ಲಿ ಕರ್ನಾಟಕ ಸರ್ಕಾರ ಮೈಸೂರು ರೇಸ್ ಕ್ಲಬ್‌ನ್ನು ರೇಸ್ ಚಟುವಟಿಕೆಗಾಗಿ 20 ವರ್ಷಗಳ ಲೀಸ್ ನೀಡಿರುತ್ತದೆ. ನಂತರ ಪುನ: 10 ವರ್ಷಕ್ಕೆ ಲೀಸನ್ನು ನವೀಕರಣ ಮಾಡಲಾಗಿರುತ್ತದೆ. ಪ್ರಸ್ತುತ 1 ಕೋಟಿ ರೂಪಾಯಿಗಳ ಲೀಸ್ ಬಾಡಿಗೆಯನ್ನು ನೀಡುತ್ತಿರುತ್ತಾರೆ.
- <u>ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್, ಮೈಸೂರು:</u> ಈ ಕ್ಲಬ್ 1985-86ನೇ ಸಾಲಿನಲ್ಲಿ ಸ್ಥಾಪನೆಯಾಗಿದ್ದು, ಗಾಲ್ಫ್‌ಗೆ ಸಂಬಂಧಿಸಿದ ಕ್ರೀಡಾ ಚಟುವಟಿಗಳನ್ನು ನಡೆಸಿಕೊಂಡು ಬರುತ್ತಿದೆ.

<u>ಸಮಿತಿಯು ಈ ಕೆಳಕಂಡ ಅಭಿಪ್ರಾಯಗಳು ಹಾಗೂ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿತು:</u>

- ಕ್ಲಬ್‌ಗಳು ಈ ನೆಲದ ಕಾನೂನಿನ ರೀತ್ಯಾ ಕಾರ್ಯಚಟುವಟಿಗಳನ್ನು ನಡೆಸುತ್ತಿದ್ದಾರೆಯೇ ಎಂದು ಪರಿಶೀಲಿಸುವುದು ಇಲಾಖಾಧಿಕಾರಿಗಳ ಕರ್ತವ್ಯವಾಗಿದ್ದು, ಅದರಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ.
- ಕ್ಲಬ್‌ಗಳಿಗೆ ನೀಡಿರುವ ಸರ್ಕಾರಿ ಜಮೀನುಗಳಲ್ಲಿ ಅನೇಕ ಕಾಂಕ್ರೀಟ್ ಕಟ್ಟಡಗಳು ಬಂದಿದ್ದು, ಕ್ಲಬ್‌ಗಳಿಗೆ ನಿರ್ದಿಷ್ಟ ಉದ್ದೇಶಕ್ಕಾಗಿ ಸರ್ಕಾರವು ಪರವಾನಿಗೆಯನ್ನು ನೀಡಿರುತ್ತದೆ. ಆದರೆ, ಅವುಗಳನ್ನು ಉಲ್ಲಂಘಿಸಿರುವ ಅನೇಕ ಕ್ಲಬ್‌ಗಳು ಶಾಪಿಂಗ್ ಕಾಂಪ್ಲೆಕ್ಸ್, ಬ್ಯೂಟಿಪಾರ್ಲರ್, ಹೋಟೆಲ್, ಜಿಮ್ ಇನ್ನಿತರೆ ಕಾರ್ಯಚಟುವಟಿಗಳನ್ನು ನಡೆಸುತ್ತಿದ್ದು, ಈ ವಿಷಯದ ಬಗ್ಗೆ ಇಲಾಖಾಧಿಕಾರಿಗಳಿಗೆ ಮಾಹಿತಿ ಇದ್ದರೂ ಸಹ ಯಾವುದೇ ಕ್ರಮ ಜರುಗಿಸದೇ ಅಧಿಕಾರಿಗಳು ನಿರ್ಲಕ್ಷತೆ ತೋರಿಸಿರುವುದಲ್ಲದೆ, ಅವುಗಳಿಗೆ ಅಧಿಕಾರಿಗಳ ಕುಮ್ಮಕ್ಕು ಇರುವುದು ಕಂಡು ಬರುತ್ತದೆ.
- ಸರ್ಕಾರದಿಂದ ಬೆಂಗಳೂರು ಗಾಲ್ಫ್ ಕ್ಲಬ್‌ನವರಿಗೆ ನೀಡಲಾಗಿರುವ ಜಾಗದಲ್ಲಿ ಸುಮಾರು 1500 ಚದರ ಮೀಟರ್ ಜಾಗವನ್ನು ಮೆ:ಟೂಷ ಗಾಲ್ಫ್ ಪ್ರೈ ಲಿ., ರವರಿಗೆ ಸಬ್ ಲೀಸ್ ಮಾಡಿ ಬಾಡಿಗೆ ಪಡೆಯುತ್ತಿದ್ದು, ಇದು ಸರ್ಕಾರದೊಂದಿಗೆ ಮಾಡಿಕೊಂಡಿರುವ ಕರಾರು ಒಪ್ಪಂದದ ಷರತ್ತು 8 (ಕರಾರು ಒಪ್ಪಂದದ ಕ್ರಮ ಸಂಖ್ಯೆ 8 ರಲ್ಲಿ ಕ್ಲಬ್‌ನವರು ಉಪ ಬಾಡಿಗೆ ನೀಡಬಾರದೆಂದು ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ)ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಇದೇ ರೀತಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಸಂಸ್ಥೆಯವರು ಸಹ ಇತರೆ ಸಂಸ್ಥೆ/ಮಳಿಗೆಗಳಿಗೆ ಕಟ್ಟಡ

ಕಟ್ಟಿಕೊಳ್ಳಲು ಪರವಾನಿಗೆ ನೀಡಿ ಉಪ ಬಾಡಿಗೆಯನ್ನು ಪಡೆಯುತ್ತಿದ್ದು, ಇದನ್ನು ಸಮಿತಿಯು ಆಕ್ಷೇಪಿಸಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮವನ್ನು ಜರುಗಿಸಬೇಕೆಂದು ಸಮಿತಿಯು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿತ್ತು.

- ಬೌರಿಂಗ್ ಇನ್‌ಸ್ಟಿಟ್ಯೂಟ್ ಕ್ಲಬ್‌ಗೆ ಅಕ್ರಮವಾಗಿ ಸದಸ್ಯತ್ವ ನೀಡಿರುವುದು ಹಾಗೂ 10 ರಿಂದ 15 ಲಕ್ಷ ರೂಪಾಯಿಗಳನ್ನು ಸದಸ್ಯತ್ವ ಶುಲ್ಕವನ್ನಾಗಿ ಪಡೆದಿರುವ ಬಗ್ಗೆ ಸಮಿತಿಯು ತನ್ನ ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸಿತು.

- **ಕ್ಲಬ್‌ಗಳು ಯಾವ ಉದ್ದೇಶಕ್ಕಾಗಿ ನೋಂದಣಿಯಾಗಿರುತ್ತವೆಯೋ ಆ ಉದ್ದೇಶದ ಉಲ್ಲಂಘನೆಯನ್ನು ಅನೇಕ ಕ್ಲಬ್‌ಗಳು ಮಾಡಿರುತ್ತವೆ. ಜನಸಾಮಾನ್ಯರಿಗೆ ದುಬಾರಿ ಎನಿಸುವಂತಹ ರೀತಿಯಲ್ಲಿ ಸದಸ್ಯತ್ವ ಶುಲ್ಕವನ್ನು ನಿಗದಿಪಡಿಸಿರುತ್ತಾರೆ, ಹಣಕಾಸು ವ್ಯವಹಾರಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಇಟ್ಟಿರುವುದಿಲ್ಲ. ಕೆಲವು ಕ್ಲಬ್‌ಗಳಲ್ಲಿ ಜೂಜಾಟ ಮತ್ತು ಇತರೆ ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿವೆ. ಈ ಎಲ್ಲಾ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಉನ್ನತ ಅಧಿಕಾರಿಗಳ ಕಾವಲು ಸಮಿತಿ ರಚಿಸಿ ಕ್ಲಬ್‌ಗಳ ಕಾರ್ಯವೈಖರಿಯನ್ನು ನಿಯಮಾವಳಿಯಂತೆ ನಡೆಸಿಕೊಂಡು ಬರುವಂತೆ ಅಂಕುಶ ಹಾಕುವುದು ಅತ್ಯವಶ್ಯವೆಂದು ಸಮಿತಿಯು ಅಭಿಪ್ರಾಯಪಟ್ಟಿತು.**

**ಸದನ ಸಮಿತಿಯು ತನ್ನ ಮಧ್ಯಂತರ ವರದಿಯಲ್ಲಿ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿತ್ತು.**

1. ರಾಜ್ಯದ ಯಾವುದೇ ಕ್ಲಬ್‌ಗಳು ವಸ್ತ್ರ ಸಂಹಿತೆಯನ್ನು ಹೊಂದಿರದೆ ಸಾಮಾನ್ಯ ನಾಗರೀಕ ಮರ್ಯಾದತ್ತವಾಗಿ ತೊಡುವ ಉಡುಗೆ ಧರಿಸಿ ಕ್ಲಬ್‌ಗಳಿಗೆ ಪ್ರವೇಶಿಸುವ ಅವಕಾಶ ಹೊಂದಿರುವಂತಹ ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಎಲ್ಲಾ ಕ್ಲಬ್‌ಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.
2. ಯಾವ ಯಾವ ಚಟುವಟಿಕೆಗಾಗಿ ಕ್ಲಬ್‌ಗಳು ಸರ್ಕಾರದಿಂದ ಮಾನ್ಯತೆ ಪಡೆದುಕೊಂಡಿರುತ್ತವೆಯೋ ಅಂತಹ ಚಟುವಟಿಯನ್ನು ಮಾತ್ರ ನಡೆಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ಸರ್ಕಾರವು ಸೂಕ್ತ ಮೇಲುಸ್ತುವಾರಿ ಸಮಿತಿಯನ್ನು ರಚಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

3. ಸದಸ್ಯತ್ವ ಶುಲ್ಕ ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಕ್ಲಬ್‌ಗಳಿಗೆ ಸರ್ಕಾರವು ಸೂಕ್ತ ಮಾನದಂಡ ಅಳವಡಿಸಬೇಕೆಂದು ಮತ್ತು ಪ್ರತಿಯೊಂದು ಕ್ಲಬ್‌ಗಳು ಶುಲ್ಕ ನಿಗದಿಪಡಿಸುವುದರ ಕುರಿತಂತೆ ಸರ್ಕಾರದಿಂದ ಕಡ್ಡಾಯವಾಗಿ ಅನುಮತಿ ಪಡೆಯತಕ್ಕದ್ದೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.
4. ರಾಜ್ಯದ ಯಾವುದೇ ಕ್ಲಬ್‌ಗಳು ಸರ್ಕಾರಿ ನಿವೇಶನದಲ್ಲಿ ಅನಧಿಕೃತ ಕಟ್ಟಡ ಕಟ್ಟಿಕೊಂಡಿದ್ದಲ್ಲಿ ಅಥವಾ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಕೊಂಡಿದ್ದಲ್ಲಿ, ಸರ್ಕಾರವು ಅವುಗಳನ್ನು ಕೂಡಲೇ ವಶಪಡಿಸಿಕೊಳ್ಳುವುದರ ಜೊತೆಗೆ ಅಂತಹ ಕ್ಲಬ್‌ಗಳ ಮಾನ್ಯತೆಯನ್ನು ರದ್ದುಪಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.
5. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಿಗೆ ವಿಶೇಷ ಹಕ್ಕು ಮತ್ತು ವಿನಾಯಿತಿ ಇರುವ ಹಿನ್ನೆಲೆಯಲ್ಲಿ ಆಯಾ ಪ್ರದೇಶವಾರು ಜನಪ್ರತಿನಿಧಿಗಳು (ಎಂ.ಪಿ. ಎಂ.ಎಲ್.ಎ. ಎಂ.ಎಲ್.ಸಿ) ಕ್ಲಬ್‌ಗಳಲ್ಲಿ ಸದಸ್ಯರಾಗಬಯಸಿದಲ್ಲಿ ಅಂತಹ ಜನಪ್ರತಿನಿಧಿಗಳಿಗೆ ಗೌರವ ಸದಸ್ಯತ್ವ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.
6. ವಿಧಾನಸಭೆಯ ಹಾಲಿ ಮತ್ತು ಮಾಜಿ ಸದಸ್ಯರುಗಳ ಉಪಯೋಗಕ್ಕಾಗಿ ಸ್ಥಾಪಿಸಲಾಗಿರುವ ಸಂವಿಧಾನಿಕ ಕ್ಲಬ್ ಜರೂರಾಗಿ ಕಾರ್ಯ-ನಿರ್ವಹಿಸುವುದಕ್ಕಾಗಿ ಸ್ಥಳಾವಕಾಶವೂ ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನ ತುರ್ತಾಗಿ ಒದಗಿಸಿ, ಪ್ರಸ್ತುತ ವರ್ಷದಿಂದಲೇ ಅದು ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.
7. ಕ್ಲಬ್ ರಿಕ್ರಿಯೇಷನ್ ಆಕ್ಟ್ ಎಂದು ಹೊಸದಾಗಿ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಮತ್ತು ಆ ಕಾಯ್ದೆಯಡಿಯಲ್ಲಿ ರಾಷ್ಟ್ರದ/ರಾಜ್ಯದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದವರು, ಕ್ರೀಡಾ ರಂಗದಲ್ಲಿ ಮಹೋನ್ನತ ಸಾಧನೆ ಮಾಡಿದವರನ್ನು, ಮಾಜಿ ಸೈನಿಕರನ್ನು ಮತ್ತು ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಅಗ್ರಗಣ್ಯ ನಾಯಕರನ್ನು ಆಯಾ ಪ್ರದೇಶಗಳಲ್ಲಿ ಅಥವಾ ಅವರುಗಳು ಬಯಸಿದ ಕ್ಲಬ್‌ಗಳಲ್ಲಿ ಗೌರವ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳವ ಬಗ್ಗೆ ಕ್ಲಬ್ ರಿಕ್ರಿಯೇಷನ್ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.
8. ಹದಿಮೂರನೇ ವಿಧಾನಸಭೆಯ ಅವಧಿ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ರಚಿತವಾಗಿರುವ ಸದನ ಸಮಿತಿಯು ಬೆಂಗಳೂರು ಮಹಾನಗರವೂ ಸೇರಿದಂತೆ ರಾಜ್ಯದ ಎಲ್ಲಾ ಕ್ಲಬ್‌ಗಳ ಪರಿವೀಕ್ಷಣೆ ಮಾಡಿ ಮತ್ತು ಅವುಗಳಿಂದ ಸಮಗ್ರವಾದ ಮಾಹಿತಿಯನ್ನು ಕಲೆ ಹಾಕಿ ವಿಸ್ತೃತವಾದ ವರದಿಯನ್ನು ಸಲ್ಲಿಸಲು ಸಮಯಾವಕಾಶದ ಅಭಾವದಿಂದ ಸಾಧ್ಯವಾಗಿರುವುದಿಲ್ಲ. ಅದುದರಿಂದ,

ಸಮಿತಿಯು ಇದೀಗ ಮಧ್ಯಂತರ ವರದಿಯನ್ನು ಮಾತ್ರ ಸಲ್ಲಿಸುತ್ತಿದ್ದು, ಸಂಪೂರ್ಣ ವರದಿಯನ್ನು ಸಲ್ಲಿಸುವ ಸಲುವಾಗಿ ಮುಂಬರುವ ವಿಧಾನಸಭೆಯಲ್ಲಿಯೂ ಸಹ ಇನ್ನೊಂದು ಸದನ ಸಮಿತಿಯನ್ನು ರಚಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

13ನೇ ವಿಧಾನ ಸಭೆಯ ಅವಧಿಯಲ್ಲಿ ದಿನಾಂಕ 01.08.2012ರಂದು ಶ್ರೀ ಎ.ಮಂಜು, ಮಾನ್ಯ ವಿಧಾನಸಭಾ ಸದಸ್ಯರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 305ರಲ್ಲಿ ರಾಜ್ಯದಲ್ಲಿರುವ ಕ್ಲಬ್‌ಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್/ ಸಂಸ್ಥೆಗಳಾದ ಬೆಂಗಳೂರು ಕ್ಲಬ್, ಬೌರಿಂಗ್ ಇನ್‌ಸ್ಟಿಟ್ಯೂಟ್, ಕರ್ನಾಟಕ ಲಾನ್ ಟೆನಿಸ್ ಅಸೋಸಿಯೇಷನ್, ಕೋರಮಂಗಲ ಕ್ಲಬ್, ಕರ್ನಾಟಕ ಗಾಲ್ಫ್ ಅಸೋಸಿಯೇಷನ್, ಕಾಸ್ಮೋಪಾಲಿಟನ್ ಕ್ಲಬ್, ಕೋರಮಂಗಲ ಕ್ಲಬ್ ಹಾಗೂ ಬೆಂಗಳೂರು ಟರ್ಫ್ ಕ್ಲಬ್ ಇವುಗಳಿಗೆ ಎಲ್ಲೆಲ್ಲಿ ಎಷ್ಟು ವಿಸ್ತೀರ್ಣದ ಜಾಗವನ್ನು ನೀಡಲಾಗಿದೆ ಎಂದು ಕೇಳಿದ್ದ ಪ್ರಶ್ನೆಗೆ ಸಹಕಾರ ಸಚಿವರು ಉತ್ತರವನ್ನು ನೀಡಿರುತ್ತಾರೆ. **(ಅನುಬಂಧ – 1 ರಲ್ಲಿ ತೋರಿಸಲಾಗಿದೆ).**

ಅಲ್ಲದೆ ಕ್ಲಬ್‌ಗಳ ಬೈಲಾ, ವಸ್ತ್ರ ಸಂಹಿತೆ, ನಿಯಮಗಳ ಉಲ್ಲಂಘನೆ, ಕ್ಲಬ್‌ಗಳ ಸದಸ್ಯತ್ವ, ಸದಸ್ಯತ್ವದ ಶುಲ್ಕ ನಿಗದಿ ಈ ಎಲ್ಲಾ ವಿಚಾರಗಳ ಬಗ್ಗೆ ಸದನದಲ್ಲಿ ವಿಸ್ತೃತವಾಗಿ ಚರ್ಚೆ ನಡೆಯಿತು. ಹಾಗೂ ಸದರಿ ವಿಷಯಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಲು ಒಂದು ಸದನ ಸಮಿತಿಯನ್ನು ರಚಿಸಬೇಕೆಂದು ಒತ್ತಾಯಿಸಿದರು.

ಈ ಹಿನ್ನಲೆಯಲ್ಲಿ ಮಾನ್ಯ ಸಹಕಾರ ಸಚಿವರು, ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು ತಮ್ಮ ಆದೇಶದಂತೆ ಒಂದು ಸದನ ಸಮಿತಿ ರಚನೆ ಮಾಡುವುದಕ್ಕೆ ಸರ್ಕಾರ ಒಪ್ಪುತ್ತದೆ, ಸಮಿತಿ ವರದಿ ಕೊಟ್ಟ ಮೇಲೆ ಅದಕ್ಕೆ ಸೂಕ್ತ ತಿದ್ದುಪಡಿಯನ್ನು ಸಹ ತರುವುದಕ್ಕೆ ಸರ್ಕಾರದಿಂದ ಖಂಡಿತ ಒಪ್ಪಿಗೆ ಇದೆ ಎಂದು ಸದನದಲ್ಲಿ ಉತ್ತರಿಸಿದರು.

ಮುಂದುವರೆದು, ಸನ್ಮಾನ್ಯ ಸಭಾಧ್ಯಕ್ಷರು ಪ್ರಶ್ನೆ ಸಂಖ್ಯೆ 305ಕ್ಕೆ ಸಂಬಂಧಿಸಿದಂತೆ ಶ್ರೀ ಎ. ಮಂಜು, ಮಾನ್ಯ ಸದಸ್ಯರು ಹೇಳಿದ ಹಲವಾರು ವಿಷಯಗಳ ಬಗ್ಗೆ ವಿರೋಧ ಪಕ್ಷದವರು ಮತ್ತು ಸರ್ಕಾರದ ಉತ್ತರವನ್ನು ಪರಿಶೀಲಿಸಿ ಎಲ್ಲಾ ಗೌರವಾನ್ವಿತ ಸದಸ್ಯರ

ಅಪೇಕ್ಷೆಯಂತೆ ತಕ್ಷಣ ಸದನ ಸಮಿತಿಯನ್ನು ರಚನೆ ಮಾಡಿ ಎಲ್ಲಾ ಕ್ಲಬ್‌ಗಳ ಚಟುವಟಿಕೆಗಳ ಬಗ್ಗೆ ಗಮನಹರಿಸಿ ವರದಿಯನ್ನು ತರಿಸಲಾಗುವುದು ಎಂದು ಸದನದಲ್ಲಿ ಪ್ರಕಟಿಸಿದರು.

ಅದರಂತೆ, ಸೋಮವಾರ, ದಿನಾಂಕ 05ನೇ ಜನವರಿ, 2015ರಂದು (ಲಘು ಪ್ರಕಟಣೆ ಸಂಖ್ಯೆ 128) ಶ್ರೀ ಎ. ಮಂಜು, ಮಾನ್ಯ ವಿಧಾನಸಭಾ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿರುವ ಕ್ಲಬ್‌ಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳಿಗೆ ಸಂಬಂಧಿಸಿದಂತೆ ಅವುಗಳ ಕಾರ್ಯವೈಖರಿ ಮತ್ತು ಸಮಸ್ಯೆಗಳು ಸೇರಿದಂತೆ ಸಮಗ್ರವಾಗಿ ವಿಚಾರಣೆ ನಡೆಸಿ ಸಲಹೆ ಸೂಚನೆಗಳೊಂದಿಗೆ ವರದಿಯನ್ನು ಸಲ್ಲಿಸಲು ಸದನ ಸಮಿತಿಯನ್ನು ರಚಿಸಲಾಯಿತು.

ಶ್ರೀ ಮಂಜು, ಇವರು ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ, ಇದರಿಂದ ತೆರವಾದ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಸದರಿ ಸಮಿತಿಯ ಸದಸ್ಯರಾಗಿದ್ದ, ಶ್ರೀ ಎನ್.ಎ. ಹ್ಯಾರಿಸ್ ರವರನ್ನು ಅಧ್ಯಕ್ಷರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನೇಮಕ ಮಾಡಿರುತ್ತಾರೆ.

ಸಮಿತಿಯು ಒಟ್ಟಾರೆಯಾಗಿ 28 ಸಭೆಗಳನ್ನು ನಡೆಸಿರುತ್ತದೆ. ಹಾಗೂ ಅವಧಿ ವಿಸ್ತರಣೆಗೆ ಸಂಬಂಧಿಸಿದಂತೆ ಆಗಿಂದಾಗ್ಗೆ ಲಘು ಪ್ರಕಟಣೆಗಳನ್ನು ಹೊರಡಿಸಲಾಗಿರುತ್ತದೆ. (ಅನುಬಂಧ-2)

## ಸದನ ಸಮಿತಿಯು ಈ ಕೆಳಕಂಡ ಪರಿಶೀಲನಾಂಶಗಳನ್ನು ಒಳಗೊಂಡಿರುತ್ತದೆ.

1. ರಾಜ್ಯದಲ್ಲಿರುವ ಕ್ಲಬ್‌ಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್/ಸಂಸ್ಥೆಗಳಿಗೆ ಎಲ್ಲೆಲ್ಲಿ ಎಷ್ಟು ಜಾಗವನ್ನು ಯಾವ ಉದ್ದೇಶಕ್ಕಾಗಿ ಯಾವ ಆಧಾರದ ಮೇಲೆ ನೀಡಲಾಗಿದೆ ಹಾಗೂ ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳನ್ನು ಯಾವ ಕಾಯ್ದೆಯನ್ವಯ ನೋಂದಣಿ ಮಾಡಲಾಗುತ್ತಿದೆ ಎಂಬುದನ್ನು ಪರಿಶೀಲಿಸುವುದು.

2. ಆ ರೀತಿ ಪ್ರಾರಂಭವಾಗಿರುವ ಕ್ಲಬ್‌ಗಳು ಯಾವ ಉದ್ದೇಶಕ್ಕಾಗಿ ಅನುಮತಿ ಪಡೆದಿವೆಯೋ, ಅದೇ ಕಾರ್ಯ ನಿರ್ವಹಿಸುತ್ತಿವೆಯೇ ಹಾಗೂ ಬೈಲಾ ಪ್ರಕಾರ ಕಾರ್ಯನಿರ್ವಹಿಸುತ್ತಿವೆಯೇ ಅಥವಾ ದುರುಪಯೋಗ ಮಾಡಿಕೊಂಡಿವೆಯೇ ಎಂಬುದನ್ನು ಪರಿಶೀಲಿಸುವುದು

3. ಕ್ಲಬ್‌ಗಳ ಸದಸ್ಯತ್ವವನ್ನು ಯಾವ ರೀತಿ ನೀಡಲಾಗುತ್ತಿದೆ ಹಾಗೂ ಯಾವ ರೀತಿ ನಾಮನಿರ್ದೇಶನ ಮಾಡಲಾಗುತ್ತಿದೆ. ಸದಸ್ಯರಿಗೆ ಸಮರ್ಪಕ ಸೇವೆಯನ್ನು ನೀಡಲಾಗುತ್ತಿದೆಯೇ, ಸದಸ್ಯರಿಂದ ಪಡೆಯಲಾಗುತ್ತಿರುವ ಸದಸ್ಯತ್ವ ಶುಲ್ಕ, ಮನರಂಜನಾ ಶುಲ್ಕ ಹಾಗೂ ಇನ್ನಿತರೆ ಶುಲ್ಕಗಳನ್ನು ಯಾವ ರೀತಿ ಭರಿಸಲಾಗುತ್ತಿದೆ ಹಾಗೂ ಈ ಹಣ ಬಳಕೆಯಲ್ಲಿ ದುರುಪಯೋಗವಾಗಿದೆಯೇ ಎಂಬುದನ್ನು ಪರಿಶೀಲಿಸುವುದು.

4. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳ ಲೆಕ್ಕಗಳನ್ನು ಆಡಿಟ್ ಮಾಡಲಾಗಿದೆಯೇ ಹಾಗೂ ಹಣ ದುರುಪಯೋಗವಾಗಿರುವುದು ಕಂಡುಬಂದಿದ್ದಲ್ಲಿ ಅಂತಹ ಸಂಸ್ಥೆಗಳ ಮೇಲೆ ಕೈಗೊಂಡಿರುವ ಕ್ರಮದ ಬಗ್ಗೆ ಪರಿಶೀಲಿಸುವುದು.

5. ರಾಜ್ಯದಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿಯನ್ನು, ನ್ಯೂನತೆಗಳನ್ನು ಸಮಗ್ರವಾಗಿ ಪರಿಶೀಲಿಸುವುದು ಹಾಗೂ ಸಂಬಂಧಪಟ್ಟ ಅಧಿನಿಯಮಕ್ಕೆ ಅಗತ್ಯವೆನಿಸುವ ತಿದ್ದುಪಡಿಗಳನ್ನು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

---

ದಿನಾಂಕ 21.01.2015ರಂದು ಸಮಿತಿಯು ತನ್ನ ಪ್ರಾರಂಭಿಕ ಸಭೆಯನ್ನು ನಡೆಸಿ, ಸಮಿತಿಯು ರಚನೆಯಾದ ಉದ್ದೇಶ ಹಾಗೂ ಸಮಿತಿಯ ಪರಿಶೀಲನಾಂಶಗಳಿಗೆ ಸೀಮಿತಗೊಂಡಂತೆ ವಿಚಾರಣೆ ನಡೆಸಿ, ಸಮಿತಿಯು ವರದಿಯನ್ನು ನೀಡಬೇಕಾಗಿರುತ್ತದೆ. ಅದಕ್ಕಾಗಿ ಸರ್ಕಾರದಿಂದ ಮಾಹಿತಿಗಳನ್ನು ಪಡೆದು, ಅವಶ್ಯವಿದ್ದಲ್ಲಿ ರಾಜ್ಯದಲ್ಲಿನ ಹಾಗೂ ಬೇರೆ ರಾಜ್ಯಗಳಲ್ಲಿರುವ ಕ್ಲಬ್‌ಗಳ ವೀಕ್ಷಣೆ ಮಾಡಿ, ಜೊತೆಗೆ ಈ ಹಿಂದೆ ಸಮಿತಿಯು ನೀಡಿದ್ದ ಶಿಫಾರಸ್ಸುಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ಮಾಹಿತಿ ತೆಗೆದುಕೊಂಡು ಸಮಗ್ರವಾಗಿ ಚರ್ಚಿಸಿ, ವರದಿಯನ್ನು ನೀಡುವಂತೆ ತೀರ್ಮಾನಿಸಿತು.

ಸಮಿತಿಯು ಈ ಹಿನ್ನೆಲೆಯಲ್ಲಿ ದಿನಾಂಕ 21.01.2015, 20.02.2015, 06.03.2015, 31.03.2015, 12.06.2015, 21.08.2015, 28.08.2015, 04.09.2015, 11.09.2015, 18.09.2015, 01.10.2015, 08.10.2015, 15.10.2015, 30.10.2015, 05.12.2015, 19.12.2015, 23.03.2016 ಮತ್ತು 23.04.2016 ರಂದು ಕಂದಾಯ ಇಲಾಖೆ, ಸಹಕಾರ ಇಲಾಖೆ, ವಿವಿಧ ಕ್ಲಬ್‌ಗಳ ಪದಾಧಿಕಾರಿಗಳು, ಆರ್ಥಿಕ ಇಲಾಖೆ, ಕಾನೂನು ಇಲಾಖೆ, ಅಬಕಾರಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಗೃಹ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗಳೊಂದಿಗೆ ಸಮಗ್ರವಾಗಿ ಚರ್ಚಿಸಿತು. ಸಮಿತಿಯು ಈ ಎಲ್ಲಾ ಇಲಾಖೆಗಳೊಂದಿಗೆ ಪ್ರಮುಖವಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ವಿಸ್ತೃತವಾಗಿ ಚರ್ಚಿಸಿತು.

1. ಹದಿಮೂರನೇ ವಿಧಾನಸಭೆಯ ಮಧ್ಯಂತರ ವರದಿಯಲ್ಲಿ ನೀಡಿರುವ ಶಿಫಾರಸ್ಸುಗಳ ಅನುಷ್ಠಾನದ ಬಗ್ಗೆ ಇಲಾಖೆಯವರು ಕೈಗೊಂಡಿರುವ ಕ್ರಮದ ಬಗ್ಗೆ.
2. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಿಗೆ ವಿಶೇಷ ಹಕ್ಕು ಮತ್ತು ವಿನಾಯಿತಿ ಇರುವ ಹಿನ್ನೆಲೆಯಲ್ಲಿ ಆಯಾ ಪ್ರದೇಶವಾರು ಜನಪ್ರತಿನಿಧಿಗಳು (ಎಂ.ಪಿ, ಎಂ.ಎಲ್.ಎ, ಎಂ.ಎಲ್.ಸಿ) ಕ್ಲಬ್‌ಗಳಲ್ಲಿ ಸದಸ್ಯರಾಗಲು ಬಯಸಿದಲ್ಲಿ ಅಂತಹ ಜನಪ್ರತಿನಿಧಿಗಳಿಗೆ ಗೌರವ ಸದಸ್ಯತ್ವ ನೀಡುವ ಬಗ್ಗೆ
3. ರಾಜ್ಯದ ಯಾವುದೇ ಕ್ಲಬ್‌ಗಳು ವಸ್ತ್ರ ಸಂಹಿತೆಯನ್ನು ಹೊಂದಿರದೆ, ಸಾಮಾನ್ಯ ನಾಗರೀಕ ಮರ್ಯಾದತ್ತವಾಗಿ ತೊಡುವ ಉಡುಗೆ ಧರಿಸಿ ಕ್ಲಬ್‌ಗಳಿಗೆ ಪ್ರವೇಶಿಸುವಂತೆ ನಿಯಮಗಳನ್ನು ರಚಿಸುವ ಬಗ್ಗೆ.
4. ರಾಜ್ಯದಲ್ಲಿರುವ ಕ್ಲಬ್‌ಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್/ಸಂಸ್ಥೆಗಳಿಗೆ ಎಲ್ಲೆಲ್ಲಿ ಎಷ್ಟು ಜಾಗವನ್ನು ಯಾವ ಉದ್ದೇಶಕ್ಕಾಗಿ ಅದು ಅದೇ ಉದ್ದೇಶಕ್ಕಾಗಿ ಬಳಸಲಾಗುತ್ತಿದೆಯೇ ಅಥವಾ ಬೇರೆ ಚಟುವಟಿಕೆಗಳು ನಡೆಯುತ್ತಿದೆಯೇ, ಹಾಗಿದ್ದಲ್ಲಿ ಇಲಾಖೆಯವರು ಕೈಗೊಂಡ ಕ್ರಮಗಳ ಬಗ್ಗೆ

5. ಕ್ಲಬ್‌ಗಳು ಯಾವ ಉದ್ದೇಶಕ್ಕಾಗಿ ಅನುಮತಿ ಪಡೆದಿವೆಯೋ ಅದೇ ರೀತ್ಯಾ ಕಾರ್ಯನಿರ್ವಹಿಸುತ್ತಿವೆಯೇ ಹಾಗೂ ಅವುಗಳ ಬೈಲಾ ಪ್ರಕಾರ ಕಾರ್ಯನಿರ್ವಹಿಸುತ್ತಿವೆಯೇ ಎಂಬುದರ ಬಗ್ಗೆ
6. ರಾಜ್ಯದಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿಯನ್ನು ಅವುಗಳಲ್ಲಿನ ನ್ಯೂನತೆಗಳನ್ನು ಸಮಗ್ರವಾಗಿ ಪರಿಶೀಲಿಸುವುದು ಹಾಗೂ ಸಂಬಂಧಪಟ್ಟ ಅಧಿನಿಯಮಕ್ಕೆ ಅಗತ್ಯವೆನಿಸುವ ತಿದ್ದುಪಡಿಗಳನ್ನು ತರುವ ಬಗ್ಗೆ

## ಅಧ್ಯಾಯ-1

### ಹದಿಮೂರನೇ ವಿಧಾನಸಭೆಯ ಮದ್ಯಂತರ ವರದಿಯಲ್ಲಿ ನೀಡಿರುವ ಶಿಫಾರಸ್ಸುಗಳ ಅನುಷ್ಠಾನದ ಬಗ್ಗೆ ಇಲಾಖೆಯವರು ಕೈಗೊಂಡಿರುವ ಕ್ರಮದ ಬಗ್ಗೆ.

ದಿನಾಂಕ 20.02.2015ರಂದು ನಡೆದ ಸಮಿತಿ ಸಭೆಯಲ್ಲಿ ಸಮಿತಿಯು ನೀಡಿರುವ ಮಧ್ಯಂತರ ವರದಿಯಲ್ಲಿನ ಶಿಫಾರಸ್ಸುಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಇಲಾಖೆಯು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುವಂತೆ ಸಮಿತಿಯು ಸೂಚಿಸಿತು.

ಕಂದಾಯ ಇಲಾಖೆಯ ಅಧಿಕಾರಿಗಳು ಬಿ.ಬಿ.ಎಂ.ಪಿ, ಬಿಡಿಎ, ಲೋಕೋಪಯೋಗಿ ಹಾಗೂ ಇತರೆ ಇಲಾಖೆಗಳೊಂದಿಗೆ ಸಭೆ ನಡೆಸಿ, ಈ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಲು ಸೂಚನೆಯನ್ನು ನೀಡಲಾಗಿದ್ದು, ಸಂಪೂರ್ಣ ಮಾಹಿತಿ ಲಭ್ಯವಾಗಿರುವುದಿಲ್ಲವೆಂದು ತಿಳಿಸಿದರು.

ಮಧ್ಯಂತರ ವರದಿಯಲ್ಲಿ 8 ಶಿಫಾರಸ್ಸುಗಳನ್ನು ನೀಡಿದ್ದು, ಅವುಗಳ ಅನುಷ್ಠಾನವನ್ನು ಕಂದಾಯ ಇಲಾಖೆಯು ಮಾಡಬೇಕಾಗಿರುತ್ತದೆ. ಶಿಫಾರಸ್ಸುಗಳ ಪೈಕಿ ಪ್ರಮುಖವಾಗಿ ಕ್ಲಬ್‌ಗಳಲ್ಲಿ ವಸ್ತ್ರ ಸಂಹಿತೆ ಬಗ್ಗೆ ನೀಡಿರುವ ಶಿಫಾರಸ್ಸನ್ನು ಜಾರಿಗೊಳಿಸಲು ಯಾವ ಕ್ರಮಕೈಗೊಳ್ಳಲಾಗಿದೆ ಎಂಬ ಮಾಹಿತಿಯನ್ನು ನೀಡಲು ಸಮಿತಿಯು ಸೂಚಿಸಿತು.

ಎಲ್ಲಾ ಕ್ಲಬ್‌ಗಳಿಗೆ ಸಾಮಾನ್ಯ ಬೈಲಾ ರೂಪಿಸುವ ಸಂಬಂಧದ ವಿಷಯವು ಸಚಿವ ಸಂಪುಟದ ಮುಂದಿದ್ದು, ಅದರ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗುವುದೆಂದು ಅಧಿಕಾರಿಗಳು ತಿಳಿಸಿದರು. ಇನ್ನು ಮುಂದೆ ಕ್ಲಬ್‌ಗಳು ನವೀಕರಣಕ್ಕೆ ಬಂದ ಸಂದರ್ಭದಲ್ಲಿ ಕ್ಲಬ್‌ನ ಬೈಲಾ ನಿಯಮಾನುಸಾರ ಇದೆಯೇ ಎಂಬ ಬಗ್ಗೆ ಕಟ್ಟುನಿಟ್ಟಾಗಿ ಪರಿಶೀಲಿಸಬೇಕೆಂದು ಸಮಿತಿಯು ಇಲಾಖಾಧಿಕಾರಿಗಳಿಗೆ ಸೂಚಿಸಿತು.

ಪ್ರಸ್ತುತ ಕ್ಲಬ್‌ಗಳ ನವೀಕರಣದ ಅವಧಿಯು ಐದು ವರ್ಷಗಳವರೆಗೆ ಇದೆಯೆಂಬ ಮಾಹಿತಿಯನ್ನು ಇಲಾಖಾಧಿಕಾರಿಗಳು ನೀಡಿದ್ದು, ಇನ್ನೂ ಮುಂದೆ ಅಂದರೆ, ಕ್ಲಬ್‌ಗಳು ಪ್ರತಿ ವರ್ಷ ನವೀಕರಣ ಮಾಡಬೇಕೆಂದು ಕಾನೂನಿಗೆ ತಿದ್ದುಪಡಿ ತರುವಂತೆ ಸೂಚಿಸಿತು.

ಇಲಾಖೆಯವರು ವಸ್ತ್ರ ಸಂಹಿತೆ ಬಗ್ಗೆ ಕ್ರಮ ಕೈಗೊಳ್ಳಲು ಪ್ರಸ್ತುತ ಇರುವ ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ, ಸದರಿ ಕಾಯ್ದೆಗೆ ತಿದ್ದುಪಡಿ ತರಬೇಕಾಗುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಸಮಿತಿಯು, ಸದನದಲ್ಲಿ ಅಂಗೀಕಾರವಾದ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸದಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಾ, ಕಾಯ್ದೆಯಲ್ಲಿ ಕ್ಲಬ್‌ಗಳಿಗೆ ಇಂತಹುದೇ ನಿರ್ದಿಷ್ಟ ವಸ್ತ್ರಗಳನ್ನು ಧರಿಸಬೇಕೆಂದು ಎಲ್ಲೂ ಉಲ್ಲೇಖಿಸಿರುವುದಿಲ್ಲ. ಕೇವಲ ಬೈಲಾದ ಮೂಲಕ ವಸ್ತ್ರ ಸಂಹಿತೆಯನ್ನು ಕೆಲವು ಕ್ಲಬ್‌ಗಳು ಅಳವಡಿಸಿಕೊಂಡಿರುವುದರಿಂದ, ಕ್ಲಬ್‌ಗಳಿಗೆ ಸಮಿತಿಯ ಶಿಫಾರಸ್ಸಿನಂತೆ ಸೂಚನೆಯನ್ನು ನೀಡುವಂತೆ ಸೂಚಿಸಿತು.

ಮುಂದುವರೆದಂತೆ, ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಕಾಯ್ದೆಯಡಿ ವಸ್ತ್ರ ಸಂಹಿತೆ ಬಗ್ಗೆ ನಿರ್ದಿಷ್ಟವಾಗಿಲದ ಕಾರಣ, ಎಲ್ಲಾ ಕ್ಲಬ್‌ಗಳಿಗೆ ಈ ರೀತಿ ಸೂಚನೆಯನ್ನು ನೀಡಬಹುದಾಗಿರುತ್ತದೆ. ಆದರೆ ಸೂಚನೆಯನ್ನು ನೀಡುವ ಮೊದಲು ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಿ ಈ ಬಗ್ಗೆ ಒಂದು ಕಡತವನ್ನು ತಯಾರಿಸಲಾಗುವುದು. ಇಲಾಖೆಯ ಪ್ರಸ್ತಾವನೆಯನ್ನು ಸಮಿತಿಯು ಒಪ್ಪಿ

ತಿದ್ದುಪಡಿ ತರಲು ಕರಡು ವಿಧೇಯಕ ತಂದ ನಂತರ ಸಮಿತಿಯು ಅಂತಿಮವಾಗಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿತು.

ಮುಂದುವರೆದಂತೆ, ಕ್ಲಬ್‌ಗಳಲ್ಲಿ ಸದಸ್ಯತ್ವ ಶುಲ್ಕ ವಸೂಲಾತಿಯಲ್ಲಿ ಸಮಾನತೆ ಇರುವುದಿಲ್ಲ, ಈ ಬಗ್ಗೆ ಕಂದಾಯ ಇಲಾಖೆಯಿಂದ ಸ್ಪಷ್ಟೀಕರಣ ನೀಡುವಂತೆ ಸೂಚಿಸಿತು. ಇಲಾಖೆಯು ಕ್ಲಬ್‌ಗಳ ಸದಸ್ಯತ್ವ ಶುಲ್ಕ ಪಾವತಿಯಲ್ಲಿ ಅಗಾಧವಾದ ವ್ಯತ್ಯಾಸಗಳಿದ್ದು, ಅವುಗಳ ಸಮಾನತೆಗಾಗಿ ಕಾನೂನಿನಲ್ಲಿ ತಿದ್ದುಪಡಿ ಅವಶ್ಯಕವಾಗಿರುತ್ತದೆಯೆಂದು ಸಮಿತಿಯು ಅಭಿಪ್ರಾಯಪಟ್ಟಿತು.

**ದಿನಾಂಕ 06.03.2015ರಂದು ನಡೆದ ಸಭೆಯಲ್ಲಿ ಹದಿಮೂರನೇ ವಿಧಾನಸಭೆಯಲ್ಲಿ ಸಮಿತಿ ನೀಡಿದ ಮಧ್ಯಂತರ ವರದಿಯ ಶಿಫಾರಸ್ಸುಗಳ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.**

**ಶಿಫಾರಸ್ಸು ಸಂಖ್ಯೆ 1, 3, 5 ಮತ್ತು 7ನ್ನು ಅನುಷ್ಠಾನಗೊಳಿಸುವ ಕುರಿತು ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆಂದು ತಿಳಿಸಿದರು.**

**"ಸದನ ಸಮಿತಿಯು ಮಾಡಿರುವ ಶಿಫಾರಸ್ಸುಗಳ ಅಂಶಗಳನ್ನು ಅನುಷ್ಠಾನಗೊಳಿಸುವ ಕುರಿತು ಕರ್ನಾಟಕ ಸಹಕಾರಿ ನೋಂದಣಿ ಕಾಯ್ದೆ 1960 ಹಾಗೂ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಸದನ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಒಂದು ಮಾರ್ಗಸೂಚಿಗಳನ್ನಾಗಿ ಪರಿಗಣಿಸಿ, ಸಂಘಗಳ ನೋಂದಣಿ ಸಮಯದಲ್ಲಿ ಅಂತಹ ಸಂಘಗಳ ಬೈಲಾ ಅಥವಾ ಮೆಮೊರಾಂಡಂ ಆಫ್ ಅಸೋಸಿಯೇಷನ್‌ನಲ್ಲಿ ಈ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವಂತೆ ಸೂಚಿಸಬಹುದಾಗಿರುತ್ತದೆ. ಈ ಮಾರ್ಗಸೂಚಿಗಳನ್ನು ಕ.ಸಂ.ನೋ. ಕಾಯಿದೆ 1960ರ ಕಲಂ 30ರಲ್ಲಿ ಲಭ್ಯವಿರುವ ಅವಕಾಶದನ್ವಯ ನಿಯಮಗಳನ್ನು ರಚಿಸುವ ಅಥವಾ ತಿದ್ದುಪಡಿ ಮಾಡುವುದರ ಮೂಲಕ ಸದನ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು ಕ್ರಮ ಕೈಗೊಳ್ಳಬಹುದಾಗಿರುತ್ತದೆ."**

ಕಾನೂನು ಇಲಾಖೆಯ ಅಭಿಪ್ರಾಯದನ್ವಯ ಸದನ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು ಕರ್ನಾಟಕ ಸಂಘಗಳ ನೋಂದಣಿ ನಿಯಮಗಳು 1961ರಲ್ಲಿ ನಿಯಮಗಳನ್ನು ರಚಿಸುವ ಅಥವಾ ತಿದ್ದುಪಡಿ ಮಾಡುವ ಬಗ್ಗೆ ಕೂಡಲೇ ಪ್ರಸ್ತಾವನೆ ಸಲ್ಲಿಸುವಂತೆ ನೋಂದಣಿ

ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರಿಗೆ ತಿಳಿಸಲಾಗಿದೆ. ಈ ಬಗ್ಗೆ ಕರಡು ನಿಯಮ/ತಿದ್ದುಪಡಿ ರಚಿಸಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಅಭಿಪ್ರಾಯ ಪಡೆದು ಮಾನ್ಯ ಕಂದಾಯ ಸಚಿವರ ಅನುಮೋದನೆ ಪಡೆಯಲು ಸಮಯಾವಕಾಶದ ಅವಶ್ಯಕತೆಯಿದೆಯೆಂದು ಸಮಿತಿಗೆ ಇಲಾಖೆಯವರು ತಿಳಿಸಿದರು.

ಶಿಫಾರಸ್ಸು ಸಂಖ್ಯೆ ೨ ಹಾಗೂ ೪ರ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಂಡು ವರದಿ ಸಲ್ಲಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ/ಆಯುಕ್ತರು, ಬಿಡಿಎ/ಆಯುಕ್ತರು, ಬಿಬಿಎಂಪಿ/ಆಯುಕ್ತರು, ಅಬಕಾರಿ ಇಲಾಖೆ ಮತ್ತು ಮುಖ್ಯ ಅಭಿಯಂತರರು, ಲೋ.ಇ.ಸಂಪರ್ಕ ಮತ್ತು ಕಟ್ಟಡ(ದ) ಇವರುಗಳಿಗೆ ಹಾಗೂ ಸಂಬಂಧಿಸಿದ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಪತ್ರಗಳಲ್ಲಿ ಸೂಚಿಸಲಾಗಿದೆಯೆಂದು ಸಮಿತಿಗೆ ತಿಳಿಸಿದರು.

ಸಮಿತಿಯು ಶಿಫಾರಸ್ಸು ಮಾಡಿ 2 ವರ್ಷಗಳಾದರೂ ಯಾವುದೇ ಕ್ರಮಕೈಗೊಂಡಿರದ ಬಗ್ಗೆ ಸಮಿತಿಯು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

ದಿನಾಂಕ 19.12.2015ರ ಸಭೆಯಲ್ಲಿ ಸಮಿತಿಯು ಮಧ್ಯಂತರ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರಿಸಲು ಸಮಿತಿಯು ಸೂಚಿಸಿತು.

ಕಂದಾಯ ಇಲಾಖೆಯ ಉಪಕಾರ್ಯದರ್ಶಿಯವರು ಮಧ್ಯಂತರ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ನಿಯಮಾವಳಿಗಳಲ್ಲಿ ಅಳವಡಿಸುವ ಸಂಬಂಧ ಕಾನೂನು ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಂಡು ಕರಡು ನಿಯಮಗಳನ್ನು ರಚನೆ ಮಾಡಿ, ಐಜಿಆರ್, ರಿಜಿಸ್ಟ್ರೇಷನ್ ಇಲಾಖೆಗೆ ಕಳುಹಿಸಿದ್ದಾರೆಂದು ತಿಳಿಸಿದರು.

ಡಿಐಜಿ ರಿಜಿಸ್ಟ್ರೇಷನ್ ಅವರು, ಕರಡು ವಿಧೇಯಕವನ್ನು ತಯಾರಿಸಿ, ಸಂಸದೀಯ ವ್ಯವಹಾರಗಳ ಇಲಾಖೆಗೆ ಕಳುಹಿಸಲಾಗಿದೆಯೆಂದು ತಿಳಿಸಿದರು.

ಸಂಸದೀಯ ವ್ಯವಹಾರಗಳ ಇಲಾಖೆಗಳ ವಿಶೇಷ ಕಾರ್ಯದರ್ಶಿಯವರು ಕರಡು ವಿಧೇಯಕವನ್ನು ಪರಿಶೀಲಿಸಿ ಕಳುಹಿಸಲಾಗಿದೆಯೆಂದು ತಿಳಿಸಿದ ಹಿನ್ನೆಲೆಯಲ್ಲಿ, ಕಂದಾಯ ಇಲಾಖೆಯ ಉಪಕಾರ್ಯದರ್ಶಿಯವರು, ವಿಧೇಯಕವನ್ನು ಕಂದಾಯ ಸಚಿವರ ಅನುಮೋದನೆ ಪಡೆದು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಸಮಿತಿಯು ಶಿಫಾರಸ್ಸು ಮಾಡಿ ಎರಡೂವರೆ ವರ್ಷ ಕಳೆದರೂ ಅದರ ಅನುಷ್ಠಾನಗೊಳಸಲು ವಿಳಂಬ ನೀತಿ ಅನುಸರಿಸುತ್ತಿರುವುದು ಸರಿಯಾದ ಕ್ರಮವಲ್ಲವೆಂದು ಆಕ್ಷೇಪಿಸಿ ವಿಧೇಯಕವನ್ನು ಆದಷ್ಟು ಬೇಗ ಅಂತಿಮಗೊಳಸಲು ಸಮಿತಿಯು ಸೂಚಿಸಿತು.

## ಅಧ್ಯಾಯ-2

1. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಿಗೆ ವಿಶೇಷ ಹಕ್ಕು ಮತ್ತು ವಿನಾಯಿತಿ ಇರುವ ಹಿನ್ನೆಲೆಯಲ್ಲಿ ಆಯಾ ಪ್ರದೇಶವಾರು ಜನಪ್ರತಿನಿಧಿಗಳು (ಎಂ.ಪಿ, ಎಂ.ಎಲ್.ಎ, ಎಂ.ಎಲ್.ಸಿ) ಕ್ಲಬ್‌ಗಳಲ್ಲಿ ಸದಸ್ಯರಾಗಲು ಬಯಸಿದಲ್ಲಿ ಅಂತಹ ಜನಪ್ರತಿನಿಧಿಗಳಿಗೆ ಗೌರವ ಸದಸ್ಯತ್ವ ನೀಡುವ ಬಗ್ಗೆ

ದಿನಾಂಕ 31.03.2015ರಂದು ಸಮಿತಿಯು ಕ್ಲಬ್ ಅಸೋಸಿಯೇಷನ್ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ಕ್ಲಬ್‌ಗಳ ಬೈಲಾಗಳಲ್ಲಿ ಸಿವಿಲ್ ಸರ್ವೆಂಟ್ಸ್ ಐಎಎಸ್/ಕೆಎಎಸ್ ಅಧಿಕಾರಿಗಳಿಗೆ ಕ್ಲಬ್‌ಗಳಿಗೆ ಸದಸ್ಯತ್ವ ನೀಡಲು ಅವಕಾಶ ಮಾಡಲಾಗಿರುತ್ತದೆ. ಆದರೆ ಒಬ್ಬ ಜನ ಪ್ರತಿನಿಧಿಗಳಿಗೆ ಅವಕಾಶ ನೀಡಿರುವುದಿಲ್ಲ, ಜನಪ್ರತಿನಿಧಿಗಳು ಗಣ್ಯವ್ಯಕ್ತಿಗಳಾಗಿರುವುದರಿಂದ, ಅವರಿಗೂ ಈ ಅವಕಾಶವನ್ನು ಕಲ್ಪಿಸಬೇಕೆಂದು ಸಮಿತಿಯು ಸೂಚಿಸಿತು.

2. ರಾಜ್ಯದ ಯಾವುದೇ ಕ್ಲಬ್‌ಗಳು ವಸ್ತ್ರ ಸಂಹಿತೆಯನ್ನು ಹೊಂದಿರದೆ, ಸಾಮಾನ್ಯ ನಾಗರೀಕೆ ಮರ್ಯಾದಸ್ಥವಾಗಿ ತೊಡುವ ಉಡುಗೆ ಧರಿಸಿ ಕ್ಲಬ್‌ಗಳಿಗೆ ಪ್ರವೇಶಿಸುವಂತೆ ನಿಯಮಗಳನ್ನು ರಚಿಸುವ ಬಗ್ಗೆ.

ದಿನಾಂಕ 31.03.2015ರ ಸಭೆಗೆ ಈ ಕೆಳಕಂಡ ಕ್ಲಬ್ ಅಸೋಸಿಯೇಷನ್ ಪದಾಧಿಕಾರಿಗಳನ್ನು ಆಹ್ವಾನಿಸಲಾದಿತ್ತು.

1. ಅಧ್ಯಕ್ಷರು, ಫೆಡರೇಷನ್ ಆಫ್ ಕ್ಲಬ್
2. ಕಾರ್ಯದರ್ಶಿ, ಸದಾಶಿವನಗರ ಕ್ಲಬ್
3. ಕಾರ್ಯದರ್ಶಿ, ವಿಜಯನಗರ ಕ್ಲಬ್
4. ಕಾರ್ಯದರ್ಶಿ, ಬೌರಿಂಗ್ ಇನ್‌ಸ್ಟಿಟ್ಯೂಟ್
5. ಮಲ್ಲೇಶ್ವರಂ ಅಸೋಸಿಯೇಷನ್

163

6. ಅಧ್ಯಕ್ಷರು, ಬೆಂಗಳೂರು ಕ್ಲಬ್

7. ಪ್ರೆಸಿಡೆಂಟ್, ಬೌರಿಂಗ್ ಇನ್‌ಸ್ಟಿಟ್ಯೂಟ್

ಸಮಿತಿಯು ಪದಾಧಿಕಾರಿಗಳಿಗೆ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ಕ್ಲಬ್‌ಗಳಿಗೆ ಕಳುಹಿಸಿಕೊಡಲಾಗಿತ್ತು. ಶಿಫಾರಸ್ಸಿನಲ್ಲಿ ಪ್ರಮುಖವಾಗಿ ವಸ್ತ್ರ ಸಂಹಿತೆ ಬಗ್ಗೆ ಒಂದು ಶಿಫಾರಸ್ಸನ್ನು ಮಾಡಲಾಗಿದೆ. ಸಮಿತಿಗೆ ತಿಳಿದಿರುವಂತೆ ಕೆಲವು ಕ್ಲಬ್‌ಗಳು ಧೋತಿ ಪಂಚೆ ಧರಿಸುವವರನ್ನು, ಶೂ ಹಾಕದಿರುವವರನ್ನು ವಸ್ತ್ರ ಸಂಹಿತೆ ಕಾರಣದಿಂದ ಕ್ಲಬ್‌ಗಳಿಗೆ ಪ್ರವೇಶವನ್ನು ನಿರಾಕರಿಸುತ್ತಾರೆ. ಧೋತಿ ವಸ್ತ್ರಗಳು ನಮ್ಮ ರಾಷ್ಟ್ರೀಯ ವಸ್ತ್ರವಾಗಿದ್ದು, ಅದಕ್ಕೆ ಗೌರವ ನೀಡದಿದ್ದರೆ ಹೇಗೆ ಎಂಬುದಾಗಿ ಕ್ಲಬ್ ಅಸೋಸಿಯೇಷನ್ ಪದಾಧಿಕಾರಿಗಳಿಗೆ ಪ್ರಶ್ನಿಸಿತು ಹಾಗೂ ಶಿಫಾರಸ್ಸನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸುವಂತೆ ಸೂಚಿಸಿತು.

ಬೌರಿಂಗ್ ಇನ್‌ಸ್ಟಿಟ್ಯೂಟ್‌ನ ಕಾರ್ಯದರ್ಶಿಯವರು ವರದಿಯ ಪ್ರತಿ ತಮಗೆ ತಲುಪಿಲ್ಲ. ಅದನ್ನು ಒದಗಿಸಿದಲ್ಲಿ ಫೆಡರೇಷನ್‌ನಲ್ಲಿಟ್ಟು ಚರ್ಚಿಸಿ ಈ ಬಗ್ಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ಸಮಿತಿಯು ಕ್ಲಬ್‌ಗಳ ಬೈಲಾಗಳಲ್ಲಿ ಸಿವಿಲ್ ಸರ್ವೆಂಟ್ ಐಎಎಸ್/ಕೆಎಎಸ್ ಅಧಿಕಾರಿಗಳಿಗೆ ಕ್ಲಬ್‌ಗಳಿಗೆ ಸದಸ್ಯತ್ವ ನೀಡಲು ಅವಕಾಶ ಮಾಡಲಾಗಿರುತ್ತದೆ. ಆದರೆ ಜನ ಪ್ರತಿನಿಧಿಗಳಿಗೆ ಅವಕಾಶ ನೀಡಿರುವುದಿಲ್ಲ. ಜನಪ್ರತಿನಿಧಿಗಳು ಗಣ್ಯವ್ಯಕ್ತಿಗಳಾಗಿರುವುದರಿಂದ, ಅವರಿಗೂ ಈ ಅವಕಾಶವನ್ನು ಕಲ್ಪಿಸಬೇಕೆಂದು ಸೂಚಿಸಿತು.

ಫೆಡರೇಷನ್ ಆಫ್ ಕ್ಲಬ್ ನ ಅಧ್ಯಕ್ಷರು ಸಮಿತಿಯ ಶಿಫಾರಸ್ಸುಗಳನ್ನು ಫೆಡರೇಷನ್‌ನಲ್ಲಿ ಚರ್ಚಿಸಿ ಅದನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುವುದು ಎಂದು ಭರವಸೆಯನ್ನು ನೀಡಿದರು ಹಾಗೆಯೇ ಜನಪ್ರತಿನಿಧಿಗಳಿಗೆ ಕ್ಲಬ್‌ಗಳಲ್ಲಿ ಸದಸ್ಯತ್ವ ನೀಡುವ ಬಗ್ಗೆಯೂ ಸಹ ಅವಕಾಶ ಮಾಡಿಕೊಡುವ ಬಗ್ಗೆ ಹಾಗೂ ವಸ್ತ್ರ ಸಂಹಿತೆ ಬಗ್ಗೆ ಚರ್ಚಿಸಿ ಕ್ರಮಕೈಗೊಳ್ಳಲಾಗುವುದಾಗಿ ತಿಳಿಸಿದರು.

## ಅಧ್ಯಾಯ-3

**ರಾಜ್ಯದಲ್ಲಿರುವ ಕ್ಲಬ್‌ಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್/ಸಂಸ್ಥೆಗಳಿಗೆ ಎಲ್ಲೆಲ್ಲಿ ಎಷ್ಟು ಜಾಗವನ್ನು ಯಾವ ಉದ್ದೇಶಕ್ಕಾಗಿ ಅದು ಅದೇ ಉದ್ದೇಶಕ್ಕಾಗಿ ಬಳಸಲಾಗುತ್ತಿದೆಯೇ ಅಥವಾ ಬೇರೆ ಚಟುವಟಿಕೆಗಳು ನಡೆಯುತ್ತಿದೆಯೇ, ಹಾಗಿದ್ದಲ್ಲಿ ಇಲಾಖೆಯವರು ಕೈಗೊಂಡ ಕ್ರಮಗಳ ಬಗ್ಗೆ**

ದಿನಾಂಕ 04.09.2015ರ ಸಭೆಯಲ್ಲಿ, ಭೂ ಕಂದಾಯ ಕಾಯ್ದೆಯಡಿ ಕ್ಲಬ್‌ಗಳಿಗೆ ಜಾಗ ಮಂಜೂರು ಮಾಡುವ ಸಂದರ್ಭದಲ್ಲಿ ಕೆಲವು ಷರತ್ತುಗಳನ್ನು ಹಾಕಲಾಗಿದ್ದು, ಆ ಷರತ್ತುಗಳು ಉಲ್ಲಂಘನೆಯಾದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹಲವಾರು ಬಾರಿ ಸೂಚಿಸಿದ್ದರೂ ಈ ಬಗ್ಗೆ ಇಲಾಖೆಯವರ ಬೇಜವಾಬ್ದಾರಿತನವನ್ನು ಸಮಿತಿಯು ತೀವ್ರವಾಗಿ ಪರಿಗಣಿಸಿದೆ.

ಲ್ಯಾಂಡ್ ಗ್ರಾಂಟ್ಸ್ ರೂಲ್ಸ್ 19ರಲ್ಲಿ ಲೀಸ್ ನೀಡುವ ಅವಕಾಶವಿದ್ದು, ಅದರನ್ವಯ 10% ಗೈಡೆನ್ಸ್ ವ್ಯಾಲ್ಯೂ ಅನ್ನು ರೆಂಟ್ ಎಂದು ಸಂಗ್ರಹಿಸಬೇಕೆಂದಿದೆ. ಇವುಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸುತ್ತಿಲ್ಲ, ಇವುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕೆಂದು ಸಮಿತಿಯು ಸೂಚಿಸಿತು.

ದಿನಾಂಕ 18.09.2015ರಂದು ನಡೆದ ಸಭೆಯಲ್ಲಿ, ಕ್ಲಬ್‌ಗಳಿಗೆ ಲೈಸೆನ್ಸ್ ಕೊಡುವಂತಹ ಸಂದರ್ಭದಲ್ಲಿ ಅವರು ಸರಿಯಾಗಿ ನಡೆದುಕೊಳ್ಳುತ್ತಾರೆಯೇ ಎನ್ನುವುದನ್ನು ನೋಡಬೇಕು. ಸಮಿತಿಯ ಉದ್ದೇಶ ಇಡೀ ರಾಜ್ಯದಲ್ಲಿ ಬರುವ ಎಲ್ಲಾ ಕ್ಲಬ್‌ಗಳಿಗೆ ಏಕರೂಪ ನಿಯಮ ತರಬೇಕೆನ್ನುವುದು.

ಸಮಿತಿಯಿಂದ ನೀಡಿರುವ ನಮೂನೆಯಲ್ಲಿ ಎಲ್ಲಾ ಕ್ಲಬ್‌ಗಳ ವಿವರಗಳನ್ನು ಕೇಳಲಾಗಿತ್ತು. ಅವರ ಪ್ರಕಾರ ಮಾಹಿತಿಯನ್ನು ಬಿಡಿಎ ಒದಗಿಸಿದ್ದು, ಆ ಸಂಬಂಧ ಕೂಲಂಕುಷವಾಗಿ ಚರ್ಚಿಸಲಾಯಿತು. ಬಿಡಿಎ ವತಿಯಿಂದ 17 ಕ್ಲಬ್‌ಗಳಿಗೆ ಜಾಗವನ್ನು ಕೊಡಲಾಗಿದೆ. ಹಾಗೂ ಕರಾರು ಮಾಡಿಕೊಳ್ಳುವ ಸಂದರ್ಭದಲ್ಲಿ 07 ಷರತ್ತು ಮತ್ತು ನಿಭಂದನೆಗಳು ಇದ್ದು, ಅದರಲ್ಲಿ ಒಂದು ಅಂಶ ಉಲ್ಲಂಘನೆ ಮಾಡಿದ್ದರೂ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆಯೆಂದು ಸಮಿತಿಗೆ ವಿವರಿಸಿದರು.

ಕ್ಲಬ್‌ಗಳಿಗೆ ನೀಡಿರುವ ಜಾಗವನ್ನು ಯಾವ ಉದ್ದೇಶಕ್ಕೆ ನೀಡಲಾಗಿದೆ ಅದನ್ನು ಹೊರತುಪಡಿಸಿ ಬೇರೆ ಉದ್ದೇಶಕ್ಕೆ ಬಳಸಿದಲ್ಲಿ ಗೃಹ ಇಲಾಖೆ ಕೈಗೊಳ್ಳುವ ಕ್ರಮದ ಬಗ್ಗೆ ಸಮಿತಿಯು ವಿವರಣೆ ಪಡೆಯಿತು.

ಕ್ಲಬ್‌ಗಳು ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ದೈನಂದಿನ ಚಟುವಟಿಗಳು ಆಕ್ಟ್ ಪ್ರಕಾರವೇ ನಡೆಯುತ್ತಿರುತ್ತವೆ. ಬಾರ್ ಲೈಸೆನ್ಸ್ ಇತರ ಕಾರ್ಯಗಳಿಗೆ ಸಂಬಂಧಿಸಿದಂತೆ ಬೇರೆ ರೀತಿಯ ನಿಯಮಗಳಿದ್ದು, ಲೈಸೆನ್ಸ್ ಕೊಡುವ ಬಗ್ಗೆ ಶಿಫಾರಸ್ಸು ಮಾಡುತ್ತೇವೆ. ಈವರೆಗೆ ಗಂಭೀರವಾಗಿ ಗ್ಯಾಂಬ್ಲಿಂಗ್ ಪ್ರಕರಣ ಮತ್ತು ಯಾವುದೇ ಉಲ್ಲಂಘನೆ ಕಂಡುಬಂದಲ್ಲಿ ಆಕ್ಟ್ ಪ್ರಕಾರ ಕ್ಲಬ್‌ನ್ನು ನಿಯಂತ್ರಿಸಲು ಒಳಾಡಳಿತ ಇಲಾಖೆಯ ವತಿಯಿಂದ ನಿಯಮ ಜಾರಿ ಮಾಡಿದ್ದೆವು. ಇದನ್ನು ಪ್ರಶ್ನಿಸಿ ಕೆಲವು ಕ್ಲಬ್‌ನವರು ಕೋರ್ಟಿಗೆ ಹೋಗಿದ್ದು, ನ್ಯಾಯಲಯವು ಕರ್ನಾಟಕ ಪೋಲೀಸ್ ಕಾಯ್ದೆಯಡಿ ಪೋಲೀಸ್ ಕಮೀಷನರ್ ಅಥವಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರು ಮಾತ್ರ ಕ್ಲಬ್‌ಗಳನ್ನು ನಿಯಂತ್ರಣ ಮಾಡಬಹುದು. ಗೇಮ್ ಆಫ್ ಸ್ಕಿಲ್ ಇರುವಾಗ ನಾವು ಕ್ರಮ ತೆಗೆದುಕೊಳ್ಳಲು ಆಗುವುದಿಲ್ಲ. ಆದರೆ ಗೇಮ್ ಆಫ್ ಚಾನ್ಸ್ ನಡೆದರೆ ನಾವು ಪ್ರಕರಣ ದಾಖಲು ಮಾಡಬಹುದೆಂದು ಗೃಹ ಇಲಾಖೆಯವರು ವಿವರಿಸಿದರು.

ಸಮಿತಿಯು ಗುಲ್ಬರ್ಗಾ, ಬೀದರ್ ಭಾಗದಲ್ಲಿ ಬೆಟ್ಟಿಂಗ್/ಗ್ಯಾಂಬ್ಲಿಂಗ್ ಗೆ ನಿರ್ಬಂಧ ಮಾಡಿರುವುದರಿಂದ ಆ ಭಾಗದಲ್ಲಿ ಗ್ಯಾಂಬ್ಲಿಂಗ್ ಕಡಿಮೆಯಾಗಿದೆ, ಅದೇ ಮಾದರಿಯಲ್ಲಿ ಬೆಂಗಳೂರಿನಲ್ಲಿಯೂ ಸಹ ನಿರ್ಬಂದ ಮಾಡಿದಲ್ಲಿ ಸಮಸ್ಯೆ ಬರುವುದಿಲ್ಲವೆಂದು ಸೂಚಿಸಿತು.

ಟ್ರೇಡ್ ಲೈಸೆನ್ಸ್ ಮಂಜೂರಾತಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿರುವ ವಿವರಗಳನ್ನು ಸಮಿತಿಯಿಂದ ನಿರ್ದಿಷ್ಟವಾದ ನಮೂನೆಯಲ್ಲಿ ಮಾಹಿತಿಗಳನ್ನು ಒದಗಿಸುವಂತೆ ಸೂಚಿಸಲಾಗಿತ್ತು, (ಅನುಬಂಧ-3) ಅದರಂತೆ, ಬಿಬಿಎಂಪಿ ವ್ಯಾಪ್ತಿಯ 9 ಕ್ಲಬ್‌ಗಳ ಪೈಕಿ 2 ಕ್ಲಬ್ ಜಾಗವನ್ನು ವಾಪಸ್ಸು ಪಡೆಯುತ್ತಿದ್ದು, ಉಳಿದ ಕ್ಲಬ್ ಜಾಗವನ್ನು ನವೀಕರಿಸಲು ಕ್ರಮ ತೆಗೆದುಕೊಳ್ಳುತ್ತಿರುವುದಾಗಿ ಕಂದಾಯ ಇಲಾಖೆಯವರು ವಿವರಿಸಿದರು.

ದಿನಾಂಕ 01.10.2015ರ ಸಭೆಯಲ್ಲಿ, ಕ್ಲಬ್‌ಗಳಿಗೆ ಮಂಜೂರಾಗಿರುವ ಜಮೀನುಗಳನ್ನು ಕ್ಲಬ್‌ಗಳು ಸದುದ್ದೇಶಕ್ಕಾಗಿ ಬಳಸಲಾಗುತ್ತಿರುವ ಬಗ್ಗೆ ಬಿ.ಬಿ.ಎಂ.ಪಿ. ರವರು ವಿವರಿಸಿದರು. ಬಿ.ಬಿ.ಎಂ.ಪಿ. ವತಿಯಿಂದ 9 ಕ್ಲಬ್‌ಗಳಿಗೆ

ನಿವೇಶನ ಮಂಜೂರು ಮಾಡಿದ್ದು, ಅದರಲ್ಲಿ ಎರಡು ವಾಪಸ್ ತೆಗೆದುಕೊಂಡಿದ್ದೇವೆ. ಕ್ರ.ಸಂ.4 ರಲ್ಲಿ ಇರುವಂತೆ Blue Football Association ಗೆ ನೀಡಿದ್ದ ಜಾಗವನ್ನು ವಾಪಸ್ ತೆಗೆದುಕೊಂಡಿದ್ದೇವೆ. ಕ್ರ.ಸಂ.2, 3, 5, 6 ರಲ್ಲಿ ತೋರಿಸಿರುವಂತೆ Diabetes Club, Bengalee Association, ಕರ್ನಾಟಕ ರಾಜ್ಯ ಬ್ಯಾಟ್‌ಮಿಂಟನ್ ಅಸೋಸಿಯೇಷನ್, ಕರ್ನಾಟಕ ಬಿಲಿಯರ್ಡ್ಸ್ ಅಸೋಸಿಯೇಷನ್ ನವರು ಯಾವುದೇ ಷರತ್ತುಗಳನ್ನು ಉಲ್ಲಂಘನೆ ಮಾಡಿಲ್ಲ. ಜಾಯಿಂಟ್ ಕಮಿಷನರ್ ಕಡೆಯಿಂದ ನಾವು ಸ್ಥಳ ಪರಿಶೀಲನೆ ಮಾಡಿಸಿದ್ದೇವೆ. ಇಂದಿರಾ ನಗರ ಕ್ಲಬ್, ಕರ್ನಾಟಕ ಹಾಕಿ ಅಸೋಸಿಯೇಷನ್ ಮತ್ತು ಇಂಡಿಯನ್ ಜಿಮ್ಖಾನ ಕ್ಲಬ್ ಈ ಮೂರು ಕ್ಲಬ್‌ಗಳಲ್ಲಿ 23ನೇ ತಾರೀಕು ನಮ್ಮ ಜಂಟಿ ಆಯುಕ್ತರು ಪರಿಶೀಲನೆ ಮಾಡಿದಾಗ Bar & Restaurant ನಡೆಸುತ್ತಿದ್ದು ಕಂಡೀಷನ್ ಉಲ್ಲಂಘನೆ ಮಾಡಿದ್ದು Karnataka Public Premisis Eviction of Unauthorised Occupants Act, 1974ರ Section 4 ಅಡಿಯಲ್ಲಿ ನೋಟೀಸ್ ಜಾರಿ ಮಾಡಿದ್ದೇವೆ. ಕ್ಲಬ್‌ಗಳಿಗೆ ನಾವು ಕೊಟ್ಟಿರುವ trade licence ವಿವರ ನೋಡಿದಾಗ ಒಟ್ಟು 52 ಕ್ಲಬ್‌ಗಳಿಗೆ ನಾವು trade licence ಕೊಟ್ಟಿದ್ದೇವೆ. 3, 4 ಮತ್ತು 52, 53 ಈ ನಾಲ್ಕು ಕ್ಲಬ್‌ಗಳು ಅನುಮತಿ ತೆಗೆಕೊಂಡಿಲ್ಲ. ಇವರಿಗೆ ನೋಟಿಸ್ ಜಾರಿ ಮಾಡಿದ್ದೇವೆ ಎಂದು ವಿವರಿಸಿದರು.

Trade licence ಉಲ್ಲಂಘನೆಯಾಗಿದ್ದರೂ ಲೈಸೆನ್ಸ್ ನವೀಕರಣ ಮಾಡಿರುವುದಕ್ಕೆ ಸಮಿತಿಯು ಆಕ್ಷೇಪ ವ್ಯಕ್ತಪಡಿಸಿತು. ಜಿಮ್ಖಾನ ಕ್ಲಬ್‌ಗೆ ಎಷ್ಟು ಎಕರೆ ನೀಡಲಾಗಿದೆ. ಸರ್ಕಾರವು ಆಟದ ಮೈದಾನಕ್ಕೆಂದು ಒಂದು ಎಕರೆ ಕೊಟ್ಟಿರುತ್ತದೆ. ಆದರೆ 4 ಎಕರೆ 28 ಗುಂಟೆ ಎಂದು ಹೇಗೆ ಮಾಹಿತಿ ನೀಡುತ್ತೀರಿ ಎಂದು ಸಮಿತಿಯು ವಿವರಣೆ ಬಯಸಿತು. 4 ಎಕರೆ 28 ಗುಂಟೆ ಜಾಗ ಕೊಟ್ಟಿದ್ದು, ದಿನಾಂಕ:19.09.2015 ರಂದು ಸರ್ಕಾರ ಆದೇಶ ಹೊರಡಿಸಿ 1 ಎಕರೆ 10 ಗುಂಟೆ ಮಾತ್ರ ಗುತ್ತಿಗೆ ಕೊಡುವುದಕ್ಕೆ ಒಪ್ಪಿಗೆ ನೀಡಿದೆ. ಇನ್ನುಳಿದ ಜಾಗವನ್ನು ವಾಪಸ್ಸು ಪಡೆಯಲಾಗಿದೆ ಎಂದು ಸಮಿತಿಗೆ ತಿಳಿಸಿದರು.

ಜಿಮ್ಖಾನಾ ಕ್ಲಬ್ ಜಾಗವನ್ನು ನವೀಕರಣ ಮಾಡುವಾಗ ಗೈಡೆನ್ಸ್ ವ್ಯಾಲ್ಯೂ ನಿಗದಿ ಮಾಡುವುದು ಸರ್ಕಾರದ ನಿಯಮವಾಗಿದೆ. ಆದರೆ 4 ಎಕರೆ 28 ಗುಂಟೆಗೆ ರೂ.2,71,500/-ಗಳನ್ನು ನಿಗದಿ ಮಾಡಿರುತ್ತೀರಿ. 2008 ರಲ್ಲಿ 1 ಎಕರೆಗೆ ರೂ.60,000/- ಎಂದು ಲೀಸ್ ಡೀಡ್ ಮಾಡಲಾಗಿದ್ದು, ಇದು ನಿಯಮಬಾಹಿರವಾಗಿರುತ್ತದೆ. ರೆವಿನ್ಯೂ ಜಾಗ ಒಬ್ಬರಿಗೆ ಲೀಸ್ ಕೊಡಬೇಕಾದರೆ ಕನಿಷ್ಠ 10% ಗೈಡೆನ್ಸ್ ವ್ಯಾಲ್ಯೂ ಇರಬೇಕಾಗುತ್ತದೆ. ಅದಕ್ಕಿಂತ ಕಡಿಮೆ

ನಿಗದಿಮಾಡಬೇಕಾದಲ್ಲಿ ಕ್ಯಾಬಿನೇಟ್ ನಲ್ಲಿ ನಿರ್ಧರಿಸಬೇಕಾಗಿರುತ್ತದೆ. ಆದರ ಈ ಪ್ರಕರಣದಲ್ಲಿ ಏಕಾಏಕಿ ನಿಯಮಬಾಹಿರವಾಗಿ ಧರ ನಿಗದಿ ಮಾಡಿರುವುದನ್ನು ಸಮಿತಿಯು ತೀವ್ರವಾಗಿ ಆಕ್ಷೇಪಿಸಿ ಈ ಕುರಿತು ತನಿಖೆ ನಡೆಸಿ ಸಮಿತಿಗೆ ವರದಿ ಮಾಡುವಂತೆ ಸೂಚಿಸಿತು.

ಮುಂದುವರೆದಂತೆ, ಇಂದಿರಾನಗರದಲ್ಲಿರುವ ಬಾರ್ ಆಂಡ್ ರೆಸ್ಟೋರೆಂಟ್ ನವರು ನಿಯಾಮಾವಳಿ ಉಲ್ಲಂಘನೆ ಮಾಡಿರುತ್ತಾರೆಂದು ತಿಳಿಸಿದ್ದು, ರಿಕ್ರಿಯೇಷನ್ ಉದ್ದೇಶಕ್ಕಾಗಿ ಅನುಮತಿ ಪಡೆದು ಬಾರ್ ಆಂಡ್ ರೆಸ್ಟೋರೆಂಟ್ ನಡೆಸಬಾರದು ಎಂದು ಕಾನೂನು ಇಲಾಖೆಯಿಂದ ಮೌಖಿಕವಾಗಿ ಅಭಿಪ್ರಾಯ ಪಡೆದಿರುವುದಾಗಿ ತಿಳಿಸಿದ್ದು, ಅದನ್ನು ಲಿಖಿತವಾಗಿ ಪಡೆಯುವಂತೆ ಸಮಿತಿಯು ಸೂಚಿಸಿ ಎಲ್ಲಾ ಕ್ಲಬ್‌ಗಳಿಗೂ ಯಾವ ಉದ್ದೇಶಕ್ಕಾಗಿ ಕ್ಲಬ್ ನಡೆಸಲು ಅನುಮತಿ ಪಡೆಯಲಾಗಿದೆಯೋ ಅದನ್ನು ಉಲ್ಲಂಘನೆ ಮಾಡದಂತೆ ನೋಟೀಸನ್ನು ಜಾರಿ ಮಾಡಲು ಹಾಗೂ ಕಾನೂನು ಬಾಹಿರವಾಗಿ ಬಾರ್ ಆಂಡ್ ರೆಸ್ಟೋರೆಂಟ್ ನಡೆಸಲು ಅನುಮತಿಯನ್ನು ಕೊಟ್ಟಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ಸಮಿತಿಗೆ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿತು.

ಮುಂದುವರೆದಂತೆ, ಬೆಂಗಳೂರು ಕ್ಲಬ್ ಹಾಗೂ ಮಾಹಿತಿ ನೀಡಿರುವ 9 ಕ್ಲಬ್‌ಗಳಲ್ಲಿ ಏನೇನು ಉಲ್ಲಂಘನೆಯಾಗಿರುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಮಿತಿಗೆ ಒದಗಿಸಲು ಸೂಚಿಸಿತು.

ಬಿ.ಡಿ.ಎ. ವ್ಯಾಪ್ತಿಗೆ ಒಳಪಡುವ ಕ್ಲಬ್‌ಗಳ ಬಗ್ಗೆ ನೀಡಿರುವ ಮಾಹಿತಿಗಳನ್ನು ಸಮಿತಿಯು ಪರಿಶೀಲಿಸಿತು. (ಅನುಬಂಧ-4) ಬಿ.ಡಿ.ಎ ವ್ಯಾಪ್ತಿಯಲ್ಲಿ 17 ಕ್ಲಬ್‌ಗಳ ಪೈಕಿ 12 ಕ್ಲಬ್‌ಗಳು ಯಾವುದೇ ಉಲ್ಲಂಘನೆ ಮಾಡಿರುವುದಿಲ್ಲ. ಉಳಿದ 5 ಕ್ಲಬ್‌ಗಳಲ್ಲಿ ನಿಯಮ ಉಲ್ಲಂಘನೆ ಆಗಿರುವುದಾಗಿ ಬಿ.ಡಿ.ಎ. ಸಮಿತಿಗೆ ಮಾಹಿತಿಯನ್ನು ನೀಡಿರುತ್ತದೆ.

ಜಯನಗರ ಕ್ಲಬ್ ಲೀಸ್ ಪಡೆದ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಿ ಅದನ್ನು ರಿಲಯನ್ಸ್ ರವರಿಗೆ ಬಾಡಿಗೆಗೆ ಕೊಟ್ಟಿರುವುದು ಮೇಲ್ನೋಟಕ್ಕೆ ನಿಯಮಾವಳಿಗಳ ಉಲ್ಲಂಘನೆಯಾಗಿರುವುದು ಕಂಡುಬರುತ್ತದೆ. ಆದರೆ ಬಿ.ಡಿ.ಎ. ಇಂಜಿನಿಯರ್ ನೀಡಿರುವ ವರದಿಯಲ್ಲಿ ಯಾವುದೇ ಉಲ್ಲಂಘನೆಯಾಗಿರುವುದಿಲ್ಲವೆಂದು ತಪ್ಪು ಮಾಹಿತಿ ನೀಡಿರುವುದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿ ಬಿ.ಡಿ.ಎ. ವ್ಯಾಪ್ತಿಗೆ ಬರುವ 12 ಕ್ಲಬ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿ ಸಮಗ್ರ ವರದಿ ನೀಡುವಂತೆ ಹಾಗೂ ಒಟ್ಟಾರೆಯಾಗಿ 17 ಕ್ಲಬ್‌ಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ಬಗ್ಗೆ ಸಮಿತಿಗೆ ಅನುಸರಣಾ ವರದಿಯನ್ನು ನೀಡಲು ಸಮಿತಿಯು ಸೂಚಿಸಿತು.

ಬಿ.ಡಿ.ಎ. ನೀಡಿರುವ ಮಾಹಿತಿಯಲ್ಲಿ ಲೀಸ್ ಅವಧಿ ಮುಗಿದ ಕ್ಲಬ್‌ಗಳು ನವೀಕರಣವಾಗಿರುವುದಿಲ್ಲ. ಆದರೂ ಅಂತಹ ಕ್ಲಬ್‌ಗಳಿಗೆ trade licence ಅನ್ನು ನವೀಕರಿಸಲಾಗಿರುತ್ತದೆ. ಇದನ್ನು ಸಮಿತಿಯು ಆಕ್ಷೇಪಿಸಿ trade licence ನವೀಕರಿಸುವಾಗ ಲೀಸ್ ಅವಧಿ ಮುಗಿದಿರುವ ಬಗ್ಗೆ ಏಕೆ ಪರಿಶೀಲಿಸಲಾಗಿರುವುದಿಲ್ಲ ಎಂದು ಪ್ರಶ್ನಿಸಿ, trade licence ಅನ್ನು ಆನ್ ಲೈನ್ ಮುಖಾಂತರ ನವೀಕರಿಸುವುದು ಸೂಕ್ತವೆಂದು, ಆನ್ ಲೈನ್ ನಲ್ಲಿ ಲೀಸ್ ಅವಧಿಯ ಬಗ್ಗೆ ಸಾಫ್ಟ್‌ವೇರ್ ಡೆವಲಪ್ ಮಾಡಿ ನವೀಕರಿಸುವುದು ಒಳ್ಳೆಯದೆಂದು ಸಮಿತಿಯು ಅಭಿಪ್ರಾಯ ಪಟ್ಟಿತು

ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದಲ್ಲಿ ನಡೆಸುತ್ತಿರುವ ಎಲ್ಲಾ ಕ್ಲಬ್‌ಗಳಿಗೆ ಲೈಸೆನ್ಸ್ ಕೊಟ್ಟಿರುವುದರಲ್ಲಿ ಯಾವ ಕ್ಲಬ್ ಗಳು ಉಲ್ಲಂಘನೆ ಮಾಡಿವೆ. ಎಂಬ ಬಗ್ಗೆ ಮಾಹಿತಿಯನ್ನು ಸಮಿತಿಗೆ ಒದಗಿಸಲು ಸೂಚಿಸಿತು. ನಗರಾಭಿವೃದ್ಧಿ ಇಲಾಖೆಯ ಮಾಹಿತಿ ಸಂಗ್ರಹಿಸಿದ್ದೇವೆ. 230 ಮುನ್ಸಿಪಾಲಿಟಿಗಳಲ್ಲಿ 56 ಮುನ್ಸಿಪಾಲಿಟಿಗಳನ್ನು upgrade ಮಾಡುತ್ತಿದ್ದೇವೆ. ಅದರಲ್ಲಿ ನಾವು 14 ಪ್ರಕರಣಗಳಲ್ಲಿ land ಕೊಟ್ಟಿರುವುದಿದೆ. ಅದರಲ್ಲಿ ವರದಿ ಕೊಟ್ಟಿರುವ ಪ್ರಕಾರ ಎರಡು ಪ್ರಕರಣಗಳಲ್ಲಿ ಉಲ್ಲಂಘನೆಯಾಗಿದೆ. ಒಂದು ಬೆಳಗಾಂ ಕೇಸ್, ಇನ್ನೊಂದು ಟಿ.ನರಸೀಪುರದಲ್ಲಿ ಆಗಿದೆ. ಗುಲ್ಬರ್ಗದಿಂದ ನಮಗೆ ಇನ್ನೂ ಏನು ಮಾಹಿತಿ ಬಂದಿಲ್ಲ, ಮಾಹಿತಿಯನ್ನು ಅವರಿಂದ ಪಡೆದುಕೊಂಡು ಕೊಡಬೇಕಾಗುತ್ತದೆ. ಟಿ.ನರಸೀಪುರದ ಕ್ಲಬ್ ವಿಚಾರದಲ್ಲಿ ಕೇಸ್ ಹಾಕಿದ್ದೇವೆ. ಅದರ documents ತರಿಸುತ್ತೇವೆ. ಇನ್ನು ಬೆಳಗಾವಿ ಕ್ಲಬ್‌ಗೆ ಸಂಬಂಧಪಟ್ಟಿರುವುದು peculiar case ಇದ್ದು, 1928ರಲ್ಲಿ permanent lease ಎಂದು ಕೊಟ್ಟಿದ್ದಾರೆ. ಅದರ documents ಅನ್ನು ತೆಗೆದುಕೊಂಡು, ಏಕೆ license renewal ಆಗಿಲ್ಲವೆಂದು ಕೇಳಬೇಕು. ಅವರು renewal ಮಾಡಿಲ್ಲವೆಂದು ಮಾಹಿತಿ ಕೊಟ್ಟಿದ್ದಾರೆ. ಅದರ ಬಗ್ಗೆ ನಾವು examine ಮಾಡಿ ಮಾಹಿತಿ ಕೊಡುತ್ತೇವೆಂದು. ಅಧಿಕಾರಿಗಳು ತಿಳಿಸಿದರು.

ಸಮಿತಿಯು ಯಾವ ಕ್ಲಬ್‌ಗಳು ನಿಯಾಮಾವಳಿಗಳನ್ನು ಉಲ್ಲಂಘನೆ ಮಾಡಿರುವುದನ್ನು ಪತ್ತೆಹಚ್ಚಲು ಕಡಿವಾಣ ಹಾಕಲು ಇಲಾಖೆಯವರಿಗೆ ಸೂಚಿಸಿತು.

ಮಹಾನಗರ ಪಾಲಿಕೆ ಹಾಗೂ ನಗರಸಭೆಗಳು ಮತ್ತು ಅರಣ್ಯ ಇಲಾಖೆಯವರು ಯಾವ್ಯಾವ ಕ್ಲಬ್‌ಗಳಿಗೆ ಜಾಗ ನೀಡಲಾಗಿದೆ, ಅವು ಸದ್ಬಳಕೆಯಾಗುತ್ತಿದೆಯೇ; ಮತ್ತು

ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಜಿಮ್‌ಖಾನ ಕ್ಲಬ್, ಇಂದಿರಾನಗರ ಹಾಗೂ ವಿಜಯನಗರ ಕ್ಲಬ್ ಬಗ್ಗೆ ದೂರಿದ್ದು, ಸ್ಥಳಕ್ಕೆ ಭೇಟಿ ನೀಡಿ ವರದಿ ಕೊಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದರ ಬಗ್ಗೆ ದಿನಾಂಕ 30.10.2015ರ ಸಭೆಯಲ್ಲಿ ಚರ್ಚಿಸಲಾಯಿತು.

ಮೊದಲಿಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರತಕ್ಕಂತಹ 9 ಕ್ಲಬ್‌ಗಳಿಗೆ ಜಾಗ ನೀಡಲಾಗಿದೆ. ಇವು ಕಾನೂನು ಉಲ್ಲಂಘನೆ ಮಾಡಿರುವ ಬಗ್ಗೆ ಪರಿಶೀಲನೆ ಮಾಡಿ ವರದಿ ನೀಡಲು ಸಮಿತಿಯು ಸೂಚಿಸಿದ್ದರ ಮೇರೆಗೆ ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿರುವ 5 ಕ್ಲಬ್‌ಗಳಿಗೆ ಕೆ.ಪಿ.ಪಿ ಆಕ್ಟ್‌ನ ಸೆಕ್ಷನ್ 4(1) ಅಡಿ ನೋಟೀಸ್ ನೀಡಿದ್ದೇವೆಂದು ಬಿಬಿಎಂಪಿಯ ಅಪರ ಆಯುಕ್ತರು (ಆಡಳಿತ) ಸಮಿತಿಗೆ ತಿಳಿಸಿದರು.

**ಇಂಡಿಯನ್ ಜಿಮ್‌ಖಾನಾ ಕ್ಲಬ್:**

2009ರಲ್ಲಿ ಬಿಬಿಎಂಪಿಯ ಅಂದಿನ ಆಡಳಿತಗಾರರು ಇಂಡಿಯನ್ ಜಿಮ್‌ಖಾನ ಕ್ಲಬ್‌ಗೆ ಒಂದು ವರ್ಷಕ್ಕೆ 1 ಕೋಟಿ 46 ಲಕ್ಷ ರೂ.ಗಳನ್ನು ಗುತ್ತಿಗೆ ದರವನ್ನು ನಿಗದಿ ಪಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಸರ್ಕಾರದ ಸಚಿವ ಸಂಪುಟದ ಮುಂದೆ ಪ್ರಸ್ತಾವನೆ ಬಂದಾಗ ಒಂದು ಎಕರೆಗೆ 60 ಸಾವಿರ ರೂ.ಗಳಂತೆ ನಿಗದಿಪಡಿಸುವಂತೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಯಿತು. ಮತ್ತೆ 2015ರಲ್ಲಿ ಪರಿಷ್ಕರಣೆ ಮಾಡಿ ಹೆಚ್ಚು ಮಾಡಬೇಕೆಂದು ಹೇಳಲಾಗಿತ್ತು. ಸರ್ಕಾರ ಮಾಡಿರುವ ತೀರ್ಮಾನದಲ್ಲಿ 2008ರಿಂದ ಗೈಡೆನ್ಸ್ ವ್ಯಾಲ್ಯು ಪ್ರಕಾರ ಚದರ ಅಡಿಗೆ 2800/- ರೂ.ಗಳಂತೆ ಲೆಕ್ಕ ಹಾಕಿ ವಾರ್ಷಿಕ ಗುತ್ತಿಗೆ ಮೊತ್ತದ ಬಾಕಿಯೆಂದು 11 ಕೋಟಿ 51 ಲಕ್ಷ ರೂ.ಗಳನ್ನು ಕಟ್ಟಬೇಕೆಂದು ಮತ್ತು 3 ಎಕರೆ 18 ಗುಂಟೆ ಜಮೀನನ್ನು ಬಿಬಿಎಂಪಿ ವಾಪಸ್ ತೆಗೆದುಕೊಳ್ಳಬೇಕೆಂದು ಸರ್ಕಾರಿ ಆದೇಶವಾಗಿದೆ. ಆ ಪ್ರಕಾರ ದಿನಾಂಕ 09.10.2015ರಂದು ಸರ್ಕಾರಿ ಆದೇಶವಾಗಿದೆ. ಇಂಡಿಯನ್ ಜಿಮ್‌ಖಾನಾ ಕ್ಲಬ್‌ನವರು ಈ ಆದೇಶವನ್ನು ಪ್ರಶ್ನಿಸಿ ಕೋರ್ಟ್‌ನಲ್ಲಿ ದಿನಾಂಕ 15.10.2015ರಂದು ಕೇಸ್ ಹಾಕಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿದೆಯೆಂದು ಅಪರ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಇವರು ಸಮಿತಿಗೆ ವಿವರಿಸಿದರು.

ತಡೆಯಾಜ್ಞೆ ಯಾವ ವಿಷಯಕ್ಕೆ ತೆಗೆದುಕೊಂಡಿದ್ದಾರೆ ಮತ್ತು ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮದ ಬಗ್ಗೆ ವಿವರಯನ್ನು ಸಮಿತಿಯು ಕೋರಿತು.

ಸರ್ಕಾರಿ ಆದೇಶದಲ್ಲಿ 2008ರಿಂದ ಅನ್ವಯವಾಗುವಂತೆ ಚದರ ಅಡಿಗೆ 2800/-ರಂತೆ ಒಟ್ಟು 11ಕೋಟಿ 51ಲಕ್ಷ ರೂ.ಗಳನ್ನು ಇಂಡಿಯನ್ ಜಿಮ್‌ಖಾನಾ ಕ್ಲಬ್‌ನಿಂದ ಕಟ್ಟಿಸಿಕೊಳ್ಳಬೇಕೆಂದು ಹೇಳಲಾಗಿತ್ತು. ಇದಲ್ಲದೆ 3 ಎಕರೆ 18 ಗುಂಟೆ ಭೂಮಿಯನ್ನು

ವಾಪಸ್ ಪಡೆದುಕೊಳ್ಳಲು ಸರ್ಕಾರಿ ಆದೇಶವಾಗಿತ್ತು. ಈ ಆದೇಶವನ್ನು ಜಿಮ್‌ಖಾನ ಕ್ಲಬ್‌ನವರು ಕೋರ್ಟ್‌ನಲ್ಲಿ ಪ್ರಶ್ನಿಸಿ ಸರ್ಕಾರದ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದಾರೆ. ಮಾನ್ಯ ಉಚ್ಛನ್ಯಾಯಾಲಯ ನೀಡಿರುವ ತಡೆಯಾಜ್ಞೆಯಲ್ಲಿ ಜಿಮ್‌ಖಾನ ಕ್ಲಬ್ ಕೂಡ ಯಾವುದೇ ನಿರ್ಮಾಣ ಕಾರ್ಯವನ್ನು ಮಾಡದೆ ಯಥಾಸ್ಥಿತಿ ಇರುವಂತೆ ನೋಡಿಕೊಳ್ಳಬೇಕೆಂದು ಹೇಳಲಾಗಿದೆ. ಮಾನ್ಯ ಉಚ್ಛನ್ಯಾಯಾಲಯ ನೀಡಿರುವ ತಡೆಯಾಜ್ಞೆ ತೆರವುಗೊಳಸುವುದಕ್ಕಾಗಿ ಸರ್ಕಾರದ ಪರವಾಗಿ ಸರ್ಕಾರಿ ವಕೀಲರನ್ನು ನೇಮಕ ಮಾಡಿ ದಿನಾಂಕ 19.10.2015ರಂದು ಆದೇಶ ಹೊರಡಿಸಲಾಗಿದೆ. ದೋಷಾರೋಪಣಾ ಪಟ್ಟಿಯನ್ನು ಕಂಡಿಕೆವಾರು ಉತ್ತರ ಕೊಟ್ಟು ಬಿಬಿಎಂಪಿ ವಕೀಲರ ಮೂಲಕ ಕೋರ್ಟ್‌ಗೆ ಸಲ್ಲಿಸಿ ಮಾನ್ಯ ಉಚ್ಛ ನ್ಯಾಯಾಲಯ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಸುವುದಕ್ಕೆ ಅಗತ್ಯ ಕ್ರಮಕೈಗೊಳ್ಳುತ್ತಿರುವುದಾಗಿ ಅಪರ ಕಾರ್ಯದರ್ಶಿ, ಬಿಬಿಎಂಪಿ ಇವರು ಸಮಿತಿಗೆ ವಿವರಿಸಿದರು.

**ಜಿಮ್‌ಖಾನಾ ಕ್ಲಬ್‌ನಿಂದ 11 ಕೋಟಿ 51 ಲಕ್ಷ ರೂ.ಗಳ ಗುತ್ತಿಗೆ ಮೊತ್ತದ ಬಾಕಿ ಮತ್ತು 3 ಎಕರೆ 18 ಗುಂಟೆ ಭೂಮಿಯನ್ನು ವಾಪಸ್ ತೆಗೆದುಕೊಳ್ಳಲು ವಿಳಂಬ ಮಾಡದೆ, ಆದಷ್ಟು ಶೀಘ್ರವಾಗಿ ಕ್ರಮ ತೆಗೆದುಕೊಂಡು ಸಮಿತಿಗೆ ಈ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಸಮಿತಿಯು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿತು.**

**<u>ಬೆಂಗಳೂರು ಕ್ಲಬ್ :</u>**

**ಬೆಂಗಳೂರು ಕ್ಲಬ್‌ಗೆ ಕಂದಾಯ ಇಲಾಖೆ ಭೂಮಿಯನ್ನು ನೀಡಿದೆ. ಬಿಬಿಎಂಪಿ ವತಿಯಿಂದ ಕ್ಲಬ್‌ಗೆ ಅಗತ್ಯವಾದ ಖಾತೆಯನ್ನು ಮಾಡಿಕೊಟ್ಟಿದೆ. ಕಾಲಕಾಲಕ್ಕೆ ಅವರು ತೆರಿಗೆಯನ್ನು ಕಟ್ಟುತ್ತಿದ್ದಾರೆ. ಬೆಂಗಳೂರು ಕ್ಲಬ್ ಅಸ್ತಿ ರೆಸಿಡೆನ್ಸಿ ರಸ್ತೆಯಲ್ಲಿ ವಾರ್ಡ್ ನಂ 76ರ ರಿಚ್‌ಮಂಡ್ ಟೌನ್ ನಲ್ಲಿ 4,80,384 ಚದರ ಅಡಿಯಿದೆ. ಅಲ್ಲಿ ಕಟ್ಟಿರುವ ಕಟ್ಟಡದ ಮಾಲೀಕತ್ವ ಬೆಂಗಳೂರು ಕ್ಲಬ್‌ನ ಹೆಸರಿನಲ್ಲಿದೆ. ವರ್ಷಕ್ಕೆ 18 ಲಕ್ಷ ರೂ.ಗಳಷ್ಟು ತೆರಿಗೆಯನ್ನು ವಸೂಲು ಮಾಡಲಾಗುತ್ತಿದೆಯೆಂದು ಅಪರ ಆಯುಕ್ತರು ಬೆಂಗಳೂರು ಕ್ಲಬ್ ಬಗ್ಗೆ ಸಮಿತಿಗೆ ವಿವರಿಸಿದರು.**

ಸಮಿತಿಯು ಬೆಂಗಳೂರು ಕ್ಲಬ್‌ನವರಿಗೆ ನೀಡಿರುವ ಭೂಮಿ ಸರ್ಕಾರದ್ದು ಎಂದು **ಹೇಳಿ, ಕಂದಾಯ ಇಲಾಖೆ ಕೋರ್ಟಿನಲ್ಲಿ ಕೇಸ್ ಹಾಕಿರುವ ಬಗ್ಗೆ ಹಾಗೂ ಕೇಸ್ ಯಾವ ಹಂತದಲ್ಲಿದೆ ಎನ್ನುವುದರ ಬಗ್ಗೆ ಮಾಹಿತಿ ನೀಡಲು ಸೂಚಿಸಿತು.**

ಬೆಂಗಳೂರು ಕ್ಲಬ್‌ಅನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವ ಸಲುವಾಗಿ **ಹಿಂದಿನ ಎ.ಸಿ ಅವರು ಆದೇಶ ಹೊರಡಿಸಿದ್ದರು, ಅದರ ವಿರುದ್ಧ ಕ್ಲಬ್ ನವರು ಕೇಸ್ ಹಾಕಿದ್ದಾರೆ.** ಕಂದಾಯ ಇಲಾಖೆಯಿಂದ ಬೆಂಗಳೂರು ಕ್ಲಬ್‌ಗೆ ಭೂಮಿ ಮಂಜೂರಾಗಿರುವುದಕ್ಕೆ ಸಂಬಂಧಪಟ್ಟಂತೆ ಬೆಂಗಳೂರು ಕ್ಲಬ್‌ನವರ ಹತ್ತಿರ ಯಾವುದೇ

ದಾಖಲೆ ಇರುವುದಿಲ್ಲ. ಕಂದಾಯ ಇಲಾಖೆಯಲ್ಲಿಯೂ ಸಹ ಭೂಮಿಯನ್ನು ಲೀಸ್ ಕೊಟ್ಟಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಆದರೆ ಭೂಮಿಗೆ ಸಂಬಂಧಪಟ್ಟಂತೆ ಬಿಬಿಎಂಪಿ ಅವರು ಬೆಂಗಳೂರು ಕ್ಲಬ್ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಭೂಮಿ ಒಡೆತನದ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲದಿರುವುದರಿಂದ, ಬಿಬಿಎಂಪಿ ವತಿಯಿಂದ ಕ್ಲಬ್‌ಗೆ ನೀಡಿರುವ ಖಾತಾವನ್ನು ರದ್ದುಪಡಿಸಲು ಬಿಬಿಎಂಪಿಯುವರಿಗೆ ಸೂಕ್ತ ನಿರ್ದೇಶನ ನೀಡಲು ಸಮಿತಿಯು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿತು.

ದಿನಾಂಕ:18.01.2017 ರಂದು ಸಭೆ ಸೇರಿ ಕಂದಾಯ ಇಲಾಖೆ, ಕಾನೂನು ಇಲಾಖೆ, ಸಹಕಾರ ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆಯ ಅಧಿಕಾರಿಗಳು ಹಾಗೂ ಬೆಂಗಳೂರು ಕ್ಲಬ್‌ನ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಅವರುಗಳೊಂದಿಗೆ ಬೆಂಗಳೂರು ಕ್ಲಬ್‌ನ ಜಾಗದ ಒಡೆತನದ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಚರ್ಚಿಸಲಾಯಿತು. ದಾಖಲೆಗಳನ್ನು ಪರಿಶೀಲಿಸಿದ ಸಮಿತಿಯು ಸರ್ಕಾರಿ ಆದೇಶದ ಅನ್ವಯ ಜಮೀನನ್ನು ಕ್ಲಬ್ ಚಟುವಟಿಕೆಗಳಿಗೆ ಮಾತ್ರ ಬಳಸುವಂತೆ ಹಾಗೂ ಸರ್ಕಾರದ ಪೂರ್ವಾನುಮತಿಯಿಲ್ಲದೆ ಸದರಿ ಜಮೀನನ್ನು ಯಾರಿಗೂ ಮಾರಾಟ ಮಾಡದಂತೆ ಎರಡು ಷರತ್ತುಗಳನ್ನು ವಿಧಿಸಿ, ಬೆಂಗಳೂರು ಕ್ಲಬ್‌ಗೆ ನಾಲ್ಕು ಎಕರೆ ಜಮೀನನ್ನು ಲ್ಯಾಂಡ್ ಸೀಲಿಂಗ್ ಆಕ್ಟ್ ಅಡಿ ನೀಡಿರುವುದನ್ನು ಸಮಿತಿಯು ಗಮನಿಸಿತು. (ಅನುಬಂಧ-5)

ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಕಂದಾಯ ಇಲಾಖೆಗೆ ಸಂಬಂಧಿಸಿದ ಕರ್ನಾಟಕ ಗಾಲ್ಫ್ ಕ್ಲಬ್ ಅಸೋಸಿಯೇಷನ್ ಬಗ್ಗೆ ಸಮಿತಿಯು ಕೋರಿದ್ದ ಮಾಹಿತಿಯನ್ನು ಒದಗಿಸಿದರು. ಕಂದಾಯ ಇಲಾಖೆಯಿಂದ ಕೆ.ಎಸ್.ಟಿ.ಡಿ.ಸಿ.ಗೆ ಜಾಗವನ್ನು ಕೊಟ್ಟಿದೆ, 2013ರಲ್ಲಿ ಕ್ಯಾಬಿನೆಟ್‌ನಲ್ಲಿ ಅನುಮತಿ ಪಡೆದು ಈಗಾಗಲೇ ಲೀಸ್ ಅವಧಿಯನ್ನು ನವೀಕರಿಸಲಾಗಿದೆ. 10 ಗುಂಟೆ ಕಾಂಪೌಂಡ್ ಜಾಗವನ್ನು ಒಡೆದು ಹಾಕಿ ಜಾಗವನ್ನು ತೆಗೆದುಕೊಂಡಿರುವುದರಿಂದ ಈ ವಿಷಯವು ಡಿಸ್ಪ್ಯೂಟ್ ಆಗಿದೆ. ಅದಕ್ಕೆ ಕೋರ್ಟಿನಲ್ಲಿ ತಡೆಯಾಜ್ಞೆ ತೆಗೆದುಕೊಂಡಿದ್ದರು. ಒತ್ತುವರಿಯಾಗಿರುವ ಬಗ್ಗೆ ಸರ್ವೇ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡುತ್ತಿದ್ದೇವೆಂದು ಸಮಿತಿಗೆ ಮಾಹಿತಿಯನ್ನು ಒದಗಿಸಿದರು.

ಮುಂದುವರೆದು, ಪ್ರವಾಸೋದ್ಯಮ ಇಲಾಖೆಯ ಎಂ.ಡಿ ಅವರು ಕರ್ನಾಟಕ ಗಾಲ್ಫ್ ಕ್ಲಬ್ ಅಸೋಸಿಯೇಷನ್‌ಗೆ ವಾರ್ಷಿಕವಾಗಿ ಬರುವ ಒಟ್ಟು ಆದಾಯದಲ್ಲಿ ಶೇಕಡ 2ರಷ್ಟು ಕಲೆಕ್ಟ್ ಮಾಡಿ ಬಾಡಿಗೆ ರೂಪದಲ್ಲಿ ಕೊಡಬೇಕೆಂದು ಕ್ಯಾಬಿನೆಟ್‌ನಲ್ಲಿ ಫಿಕ್ಸ್ ಮಾಡಿದೆ, ಕಳೆದ ಆರ್ಥಿಕ ವರ್ಷದಲ್ಲಿ 32 ಲಕ್ಷ ರೂಪಾಯಿ ಸರ್ಕಾರಕ್ಕೆ ಬಂದಿದೆಯೆಂದು ಸಮಿತಿಗೆ ವಿವರಿಸಿದರು.

ಸಮಿತಿಯು ಕರ್ನಾಟಕ ಗಾಲ್ಫ್ ಕ್ಲಬ್ ಜಾಗವು ಹೃದಯಭಾಗದಲ್ಲಿರುವುದರಿಂದ ಆಸ್ತಿಯ ಮಾರ್ಕೆಟ್ ವ್ಯಾಲ್ಯೂವಿನ 10% ರಷ್ಟು ನಿಗದಿ ಮಾಡಬೇಕೆಂದು ಸಮಿತಿಯು ಇಲಾಖೆಗೆ ಸೂಚಿಸಿತು.

**ಇಂದಿರಾ ನಗರ ಕ್ಲಬ್:**

1981ರಲ್ಲಿ 50 ವರ್ಷದ ಅವಧಿಗೆ ಗುತ್ತಿಗೆಯನ್ನು ನೀಡಿ ಅಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಬಿಟ್ಟು ಬೇರೆ ಚಟುವಟಿಕೆ ನಡೆಸಿದರೆ ಅದನ್ನು ರದ್ದುಪಡಿಸಲಾಗುವುದು ಎನ್ನುವ ಷರತ್ತನ್ನು ಹಾಕಲಾಗಿದೆ. ಈಗ ಅಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದುರ ಜೊತೆಗೆ ಬಾರ್ ಅಂಡ ರೆಸ್ಟೋರೆಂಟ್ ನಡೆಸುತ್ತಿದ್ದಾರೆ. ಷರತ್ತನ್ನು ಉಲ್ಲಂಘನೆ ಮಾಡಿರುವುದರಿಂದ ಕೆಪಿಪಿ ಆಕ್ಟ್‌ನ ಸೆಕ್ಷನ್ 4(1) ಪ್ರಕಾರ ಇಂದಿರಾ ನಗರ ಕ್ಲಬ್‌ನವರಿಗೆ ನೋಟಿಸ್ ಕೊಡಲಾಗಿದೆ. ಈ ನೋಟಿಸ್‌ಗೆ ಇಂದಿರಾ ನಗರ ಕ್ಲಬ್‌ನವರು ದಿನಾಂಕ 20-10-2015 ರಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದೆಂದು ಬಿ.ಬಿ.ಎಂ.ಪಿ.ಯ ಅಪರ ಆಯುಕ್ತರು ಸಮಿತಿ ತಿಳಿಸಿದರು.

ಇಂದಿರಾ ಕ್ಲಬ್‌ನವರು ಬಾರ್ ಅಂಡ್ ರೆಸ್ಟೋರೆಂಟ್ ನಡೆಸುವ ಮೂಲಕ ಲೀಸ್‌ನಲ್ಲಿ ಹಾಕಿದ್ದ ಷರತ್ತನ್ನು ಉಲ್ಲಂಘನೆ ಮಾಡಿರುತ್ತಾರೆ ಯಾವ ಉದ್ದೇಶಕ್ಕಾಗಿ ಜಾಗವನ್ನು ನೀಡಲಾಗಿದೆ ಎಂಬುದನ್ನು ಪರಿಶೀಲನೆ ಮಾಡದೆ ಅಬಕಾರಿ ಇಲಾಖೆಯವರು ಬಾರ್ ಅಂಡ್ ರೆಸ್ಟೋರೆಂಟ್ ನಡೆಸುವುದಕ್ಕೆ ಲೈಸೆನ್ಸ್ ನೀಡಿರುವುದು ತಪ್ಪು ಎಂದು ಸಮಿತಿಯು ಆಕ್ಷೇಪ ವ್ಯಕ್ತಪಡಿಸಿತು.

ನಗರಾಭಿವೃದ್ಧಿಯ ಅಪರ ಮುಖ್ಯ ಕಾರ್ಯದರ್ಶಿಯವರು ಇಂದಿರಾ ನಗರ ಕ್ಲಬ್‌ನವರು ದಿನಾಂಕ 20.10.2015ರಂದು ನೀಡಿರುವ ಹೇಳಿಕೆಯನ್ನು ಪರಿಶೀಲನೆ ಮಾಡಿ ಅಂತಿಮ ಸೂಚನೆಯನ್ನು ಕ್ಲಬ್‌ನವರಿಗೆ ನೀಡಲಾಗುವುದೆಂದು ಸಮಿತಿಗೆ ತಿಳಿಸಿದರು.

**ವಿಜಯನಗರ ಕ್ಲಬ್:**

ವಿಜಯನಗರ ಕ್ಲಬ್‌ಗೆ ದಿನಾಂಕ 03.08.1984 ರಂದು 30 ವರ್ಷದ ಅವಧಿಗೆ ಲೀಸ್ ಕೊಡಲಾಗಿದೆ. ದಿನಾಂಕ 02.08.2014ರಂದು ಲೀಸ್ ಅವಧಿ ಮುಗಿದಿದೆ. ಈಗ ವಿಜಯನಗರ ಕ್ಲಬ್‌ನವರು ಲೀಸ್ ಅವಧಿ ನವೀಕರಣ ಮಾಡಬೇಕೆಂದು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಕ್ರಿಯೆ ನಡೆಯುತ್ತಿದೆ ಎಂದು ಬಿ.ಡಿ.ಎ. ಯ ಉಪಕಾರ್ಯದರ್ಶಿಯವರು ವಿಜಯನಗರ ಕ್ಲಬ್ ಬಗ್ಗೆ ಸಮಿತಿಗೆ ವಿವರಣೆ ನೀಡಿದರು.

2014ರಲ್ಲಿ ವಿಜಯನಗರ ಕ್ಲಬ್‌ಗೆ ನೀಡಲಾಗಿರುವ ಲೀಸ್‌ನ ಅವಧಿ ಮುಗಿದಿದ್ದು, ಸದರಿ ಕ್ಲಬ್‌ನ ಲೀಸ್ ಅವಧಿಯನ್ನು ನವೀಕರಿಸುವ ಬಗ್ಗೆ ಈವರೆವಿಗೂ ಯಾವುದೇ

153 (3

ಕ್ರಮವನ್ನು ತೆಗೆದು ಕೊಳ್ಳದೆ ಇರುವ ಕಾರಣ ಸರ್ಕಾರಕ್ಕೆ ನಿಯಮಾನುಸಾರ ಸಂದಾಯವಾಗಬೇಕಾಗಿದ್ದ ಬಾಡಿಗೆಯು ಸಂದಾಯವಾಗಿರುವುದಿಲ್ಲ. ಇದರಿಂದ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಆದುದರಿಂದ, ತಪ್ಪಿತಸ್ಥರ ಮೇಲೆ ಶಿಸ್ತು ಕ್ರಮವನ್ನು ಜರುಗಿಸಬೇಕೆಂದು ಹಾಗೂ ಈ ಸಂಬಂಧ ಮಾಹಿತಿಯನ್ನು ನೀಡಬೇಕೆಂದು ನಗರಾಭಿವೃದ್ಧಿ ಇಲಾಖೆಯವರಿಗೆ ಸಮಿತಿಯು ಸೂಚನೆ ನೀಡಿತು.

ಬಿ.ಡಿ.ಎ. ವ್ಯಾಪ್ತಿಗೆ ಒಳಪಡುವ ಕ್ಲಬ್‌ಗಳಿಗೆ ನೀಡಲಾಗಿರುವ ಜಾಗಗಳು ಸದ್ಬಳಕೆಯಾಗಿದೆಯೇ ಎಂಬ ಬಗ್ಗೆ ಮಾಹಿತಿ ನೀಡಬೇಕೆಂದು ಸಮಿತಿಯು ಸೂಚಿಸಿದ ಹಿನ್ನೆಲೆಯಲ್ಲಿ ಬಿ.ಡಿ.ಎ ಯ ಉಪಕಾರ್ಯದರ್ಶಿಯವರು, ಬಿ.ಡಿ.ಎ.ಗೆ ಸಂಬಂಧ ಪಟ್ಟಂತೆ ಒಟ್ಟು 17 ಕ್ಲಬ್‌ಗಳಿವೆ. ಅದರಲ್ಲಿ 11 ಕ್ಲಬ್‌ಗಳ ಲೀಸ್ ಅವಧಿ ಮುಗಿದಿಲ್ಲ. 4 ಕ್ಲಬ್‌ಗಳ ಲೀಸ್ ಅವಧಿ ನವೀಕರಣಗೊಂಡಿದ್ದು, ಇನ್ನು 3 ಕ್ಲಬ್‌ಗಳಿಗೆ ಸಂಬಂಧಿಸಿದಂತೆ ನವೀಕರಣದ ಪ್ರಕ್ರಿಯೆ ಚಾಲ್ತಿಯಲ್ಲಿದೆಯೆಂದು ಸಮಿತಿಗೆ ತಿಳಿಸಿದರು.

## ಅಧ್ಯಾಯ-4

### ಕ್ಲಬ್‌ಗಳು ಯಾವ ಉದ್ದೇಶಕ್ಕಾಗಿ ಅನುಮತಿ ಪಡೆದಿವೆಯೋ ಅದೇ ರೀತ್ಯಾ ಕಾರ್ಯನಿರ್ವಹಿಸುತ್ತಿವೆಯೇ ಹಾಗೂ ಅವುಗಳ ಬೈಲಾ ಪ್ರಕಾರ ಕಾರ್ಯನಿರ್ವಹಿಸುತ್ತಿವೆಯೇ ಎಂಬುದರ ಬಗ್ಗೆ

ದಿನಾಂಕ 08.10.2015ರ ಸಭೆಯಲ್ಲಿ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿನ ವಿವಿಧ ಸ್ವರೂಪದ ಎಷ್ಟು ಕ್ಲಬ್‌ಗಳಿಗೆ ಅಬಕಾರಿ ಪರವಾನಗಿ ನೀಡಲಾಗಿದೆ, ಅಬಕಾರಿ ಪರವಾನಗಿಯ ಷರತ್ತುಗಳನ್ನು ಉಲ್ಲಂಘಿಸಿದ ಕ್ಲಬ್‌ಗಳ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ಆರ್ಥಿಕ (ಅಬಕಾರಿ) ಇಲಾಖೆಯು ನೀಡಿರುವ ಮಾಹಿತಿಯನ್ನು ಸಮಿತಿಯು ಸಮಗ್ರವಾಗಿ ಪರಿಶೀಲಿಸಿತು. (ಅನುಬಂಧ-6)

ಸಮಿತಿಯು ಕೋರಿದ್ದ ಮಾಹಿತಿಗಳಲ್ಲಿ ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ ಒಟ್ಟು 75 ಕ್ಲಬ್‌ಗಳಿಗೆ ಈ ಕ್ಲಬ್‌ಗಳು ಅಬಕಾರಿ ಲೈಸೆನ್ಸ್ ಸಿ.ಎಲ್.4 ಪಡೆದಿರುತ್ತವೆ. ಇಡೀ ರಾಜ್ಯದಲ್ಲಿ ಸಿ.ಎಲ್.4 ಲೈಸೆನ್ಸ್ ಪಡೆದಿರುವ ಕ್ಲಬ್ ಗಳ ಸಂಖ್ಯೆ:206 ಎಂದು ಸಮಿತಿಗೆ ಅಬಕಾರಿ ಆಯುಕ್ತರು ಮಾಹಿತಿಯನ್ನು ನೀಡಿದರು. ಅಲ್ಲದೆ ಸಿ.ಎಲ್.4 ಲೈಸೆನ್ಸ್ ಅನ್ನು ಯಾವ ಕ್ಲಬ್‌ಗಳಿಗೆ ನೀಡಬಹುದು ಸಿ.ಎಲ್.4 ಮತ್ತು ಸಿ.ಎಲ್.9 ಲೈಸೆನ್ಸ್ ನಡುವೆ ಇರುವ ಸಾಮಾನ್ಯ ವ್ಯತ್ಯಾಸಗಳಾದ ಸಿ.ಎಲ್.9 ಬಾರ್ ಎಂಡ್ ರೆಸ್ಟೋರೆಂಟ್ ಲೈಸೆನ್ಸ್ ನಲ್ಲಿ 11.30ರ ವರೆಗೆ ಕ್ಲಬ್‌ನ್ನು ತೆರೆಯಬಹುದು. ಸಿ.ಎಲ್.4 ರಲ್ಲಿ 12.00 ಗಂಟೆಯವರೆಗೆ ತೆರೆಯಬಹುದು. ಸಿ.ಎಲ್.4 ನವೀಕರಣ ಶುಲ್ಕ ರೂ.5ಲಕ್ಷ ಹಾಗೂ ಸಿ.ಎಲ್.9 ರಲ್ಲಿ ರೂ.6ಲಕ್ಷ ಕಟ್ಟಬೇಕಾಗುತ್ತದೆ.

ಸಿ.ಎಲ್.4 ರಲ್ಲಿ ಸೌಲಭ್ಯಗಳು ಜಾಸ್ತಿ ಇರುತ್ತದೆಂದು ಸಮಿತಿಗೆ ವಿವರಿಸಿದರು. ಜೊತೆಗೆ ವಿವಿಧ ಮಾದರಿಯ ಲೈಸೆನ್ಸ್ ಗಳ ಅಂದರೆ ಸಿ.ಎಲ್.2, ಸಿ.ಎಲ್.7 ಬಗ್ಗೆ ತಿಳಿಸಿದರು.

ಬೆಂಗಳೂರು ಕ್ಲಬ್ ಲೈಸೆನ್ಸ್ ನವೀಕರಣ ಮಾಡುವಾಗ ದಾಖಲೆಗಳ ಪರಿಶೀಲನೆ ಮಾಡದೇ ನವೀಕರಣ ಮಾಡುವುದು ಸಮಂಜಸವಲ್ಲ ಎಂದು ಸಮಿತಿಯು ಅಭಿಪ್ರಾಯಪಟ್ಟಿತು. ಅಲ್ಲದೆ ಈ ರೀತಿ ನವೀಕರಣ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಮಿತಿಯು ಸೂಚಿಸಿತು. ಈ ಬಗ್ಗೆ ಇಲಾಖೆ ಅಧಿಕಾರಿಯವರು ಇಲಾಖೆ ಗಮನಕ್ಕೆ ಬಂದ ನಂತರ ನವೀಕರಿಸದೇ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದು, ರೂ.50,000/-ಗಳ ದಂಡ ವಿಧಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದ ಸಮಿತಿಯು ಲೈಸೆನ್ಸ್ ನವೀಕರಿಸುವಲ್ಲಿ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಜಾಗದ ಒಡೆತನವು ಯಾರ ಹೆಸರಿನಲ್ಲಿದೆ ಎಂಬುದು ಪ್ರಮುಖವಾಗುತ್ತದೆ. ಇದೆಲ್ಲವನ್ನೂ ಪರಿಶೀಲಿಸಿ ನಂತರ ಲೈಸೆನ್ಸ್ ನವೀಕರಿಸುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಪಟ್ಟಿತು.

ಟರ್ಫ ಕ್ಲಬ್‌ನವರು ಕಂಪನೀಸ್ ಆಕ್ಟ ಅಡಿಯಲ್ಲಿ ಲೈಸೆನ್ಸ್ ಪಡೆದಿದ್ದಾರೆ, ಡೆಪ್ಯುಟಿ ಕಮಿಷನರ್ ಅವರು ಪರವಾನಗಿ ನೀಡುವ ಪ್ರಾಧಿಕಾರವಾಗಿರುವುದರಿಂದ ಅವರು ತನಿಖೆ ಮಾಡಬೇಕಾಗುತ್ತದೆ. ಸಿಎಲ್ 4 ಪರವಾನಗಿಯನ್ನು ನೀಡಲಾಗಿದೆ. ಈ ಕ್ಲಬ್ 150 ವರ್ಷಗಳಿಗಿಂತ ಹಳೆಯ ಕ್ಲಬ್, ಹಿಂದೆ ಬೇರೆ ಲೈಸೆನ್ಸ್ ತೆಗೆದುಕೊಂಡಿದ್ದರು 1999ರಿಂದ ಸಿಎಲ್ 4 ಲೈಸೆನ್ಸ್ ಪಡೆದಿದ್ದಾರೆ. ಕಂಪನೀಸ್ ಆಕ್ಟ್ ಅಡಿ ನೋಂದಣಿಯಾಗಿರುವುದರಿಂದ ಸದರಿ ಕ್ಲಬ್‌ಗೆ ಸಿಎಲ್ 4 ಕೊಡುವುದಕ್ಕೆ ಬರುವುದಿಲ್ಲ ಸಿಎಲ್ 7 ಅಥವಾ 9 ಕೊಡಬಹುದು ಎಂದು ಆಯುಕ್ತರು ಅಬಕಾರಿ ಇಲಾಖೆಯವರು ವಿವರಿಸಿದರು.

ಬೆಂಗಳೂರು ಕ್ಲಬ್ ಹಾಗೂ ಟರ್ಫ ಕ್ಲಬ್ ಎರಡೂ ಕ್ಲಬ್‌ಗಳದ್ದು ಒಂದೇ ರೀತಿಯ ಉಲ್ಲಂಘನೆಯಾಗಿದ್ದರೂ, ಬೆಂಗಳೂರು ಕ್ಲಬ್‌ನವರಿಗೆ ನೋಂದಣಿ ರದ್ದು ಮಾಡಿದ್ದು, ಟರ್ಫ ಕ್ಲಬ್‌ಗೆ ಏಕೆ ಮಾಡಿಲ್ಲ ಎಂಬ ಸಮಿತಿಯ ಪ್ರಶ್ನೆಗೆ ಆಯುಕ್ತರು ಕೇವಲ ಆರು ತಿಂಗಳ ಹಿಂದೆ ಟರ್ಫ ಕ್ಲಬ್‌ನ ಉಲ್ಲಂಘನೆ ಬಗ್ಗೆ ಮಾಹಿತಿ ದೊರೆತಿದೆ, ಇದರ ಬಗ್ಗೆ ಪ್ರಕ್ರಿಯೆ ಮುಕ್ತಾಯವಾಗಿದ್ದು, ಲೈಸೆನ್ಸ್‌ಅನ್ನು ಹಿಂಪಡೆಯಲಾಗುತ್ತಿದೆಯೆಂದು ವಿವರಣೆ ನೀಡಿದರು.

ಮುಂದುವರೆದಂತೆ, ರಿಕ್ರಿಯೇಷನ್ ಕ್ಲಬ್‌ಗಳಿಗೆ ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಲೈಸೆನ್ಸ್ ಕೊಡಬಾರದು ಎಂಬ ನಿರ್ಬಂದ ಇದ್ದರೂ ಇಲಾಖೆಯವರು ಲೈಸೆನ್ಸ್ ಕೊಟ್ಟಿರುತ್ತೀರಿ. ಜಿಮ್‌ಕಾನಾ ಕ್ಲಬ್ ಹಾಗೂ ಟೆನ್ನಿಸ್ ಕ್ಲಬ್‌ಗಳಿಗೆ ಯಾವ ಉದ್ದೇಶಕ್ಕಾಗಿ ಲೈಸೆನ್ಸ ನೀಡಲಾಗಿದೆಯೋ ಅದರೊಂದಿಗೆ ಸದರಿ ಕ್ಲಬ್‌ಗಳು ಇನ್ನಿತರೆ ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ಸಮಿತಿಯು ಆರೋಪಿಸಿತು

151 328

ಈ ವಿಚಾರವಾಗಿ ಅಬಕಾರಿ ಆಯುಕ್ತರು ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಸೊಸೈಟೀಸ್ ಆಕ್ಟ್ ಅಡಿಯಲ್ಲಿ ಕನಿಷ್ಟ 100 ಜನ ಸದಸ್ಯರಿರಬೇಕು, ಇನ್‌ಡೋರ್ ಔಟ್ ಡೋರ್ ಆಟಗಳಿಗೆ ಸೌಲಭ್ಯವಿರಬೇಕು, ಪುರುಷ ಮತ್ತು ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆ ಇರಬೇಕು, ಆಹಾರ ಸರಬರಾಜು ಮಾಡಬೇಕು ಈ ಷರತ್ತುಗಳನ್ನು ಪೂರೈಸಿದ್ದಲ್ಲಿ ಸಿಎಲ್ 4 ಲೈಸೆನ್ಸ್ ನೀಡಲಾಗುತ್ತದೆ. ಇದರಲ್ಲಿ ಯಾವುದಾದರೂ ಒಂದು ಉಲ್ಲಂಘನೆಯಾದರೂ ಕ್ರಮಕೈಗೊಳ್ಳಲಾಗುತ್ತದೆಯೆಂದು ವಿವರಿಸಿದರು.

ಸಮಿತಿಯು ಜಿಮ್‌ಕಾನಾ ಕ್ಲಬ್‌ಗೆ ಯಾವ ಉದ್ದೇಶಕ್ಕಾಗಿ ಲೈಸೆನ್ಸ್ ನೀಡಲಾಗಿದೆಯೋ ಅದಕ್ಕಲ್ಲದೆ ಇನ್ನಿತರೆ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದು, ನಿಯಮಾವಳಿ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಿತು. ನಿಯಮಗಳು ಎಲ್ಲಾ ಕ್ಲಬ್‌ಗಳಿಗೆ ಒಂದೇ ರೀತಿಯಲ್ಲಿರಬೇಕು, ಒಂದು ಕ್ಲಬ್‌ನ್ನು ಮುಚ್ಚಿಸುವುದು ಮತ್ತೊಂದನ್ನು ಮುಂದುವರೆಸುವುದು ಈ ರೀತಿಯಾಗಬಾರದೆಂದು ಸಮಿತಿಯು ಎಚ್ಚರಿಕೆಯನ್ನು ನೀಡಿತು. ಅಲ್ಲದೆ, ಜಿಮ್‌ಕಾನಾ ಕ್ಲಬ್ ಎನ್‌ಓಸಿ ಇರುವ ಬಗ್ಗೆ ಪರಿಶೀಲಿಸಿ ಸಮಿತಿಗೆ ವರದಿ ನೀಡುವಂತೆ ಸೂಚಿಸಿತು ಹಾಗೆಯೇ ಎಲ್ಲಾ ಕ್ಲಬ್‌ಗಳ ಬಗ್ಗೆಯೂ ಎನ್‌ಓಸಿ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿತು.

ಅಬಕಾರಿ ಆಯುಕ್ತರು ಎಲ್ಲಾ ಕ್ಲಬ್‌ಗಳ ನವೀಕರಣ ಚೆಕ್ ಮಾಡಲಾಗುವುದೆಂದು ತಿಳಿಸುತ್ತಾ, ಲೈಸೆನ್ಸ್ ಕೊಡುವಾಗ ಎನ್‌ಓಸಿ ಕೇಳಲಾಗುವುದು, ನವೀಕರಣದ ಸಮಯದಲ್ಲಿ ಎನ್‌ಓಸಿ ಕೇಳಬಾರದೆಂದು ಕೋರ್ಟಿನ ಆದೇಶವಿರುವುದರಿಂದ ಪ್ರತಿ ವರ್ಷ ಎನ್‌ಓಸಿ ತೆಗೆದುಕೊಳ್ಳುವುದಿಲ್ಲವೆಂದು ಸ್ಪಷ್ಟನೆ ನೀಡಿದರು.

ಇಲಾಖೆಯಿಂದ ಲೈಸೆನ್ಸ್ ಕೊಡುವಾಗ ಸೊಸೈಟೀಸ್ ಆಕ್ಟ್ ಅಡಿಯಲ್ಲಿ ಬರುವ ಕ್ಲಬ್‌ಗಳಿಗೆ ಲೈಸೆನ್ಸ್ ಕೊಡುತ್ತೀರಿ ಇಲ್ಲವಾದರೆ ಕೊಡುತ್ತಿಲ್ಲ, ಅದರ ಪ್ರಕಾರ ಇದ್ದರೆ ಯಾವುದಾದರೂ ಒಂದನ್ನು ರದ್ದು ಮಾಡಿದರೆ ಇನ್ನೊಂದನ್ನು ಕೂಡ ತಕ್ಷಣ ರದ್ದು ಮಾಡಬೇಕು, ಎಲ್ಲರಿಗೂ ಒಂದೇ ರೀತಿಯ ಕಾನೂನು ಇರಬೇಕು. ಸರ್ಕಾರಿ ಜಾಗದಲ್ಲಿ ಕ್ಲಬ್‌ಗಳು ರಿಕ್ರಿಯೇಷನ್ ಇಲ್ಲದಿರುವುದಕ್ಕೆ ಇಲಾಖೆಯು ಲೈಸೆನ್ಸ ಕೊಡುವಾಗ ಓನರ್ ಎನ್ ಓಸಿ ತೆಗೆದುಕೊಂಡಿದ್ದಾರೋ ಇಲ್ಲವೋ, ಪರಿಶೀಲಿಸಬೇಕು, ಸಮಿತಿಗೆ ಎನ್ ಓಸಿ ಪ್ರತಿಯನ್ನು ನೀಡಿ, ಯಾವ ಕ್ಲಬ್‌ಗಳಿಗೆ ಎನ್ ಓಸಿ ಇಲ್ಲ ಅವರುಗಳ ಪಟ್ಟಿಯನ್ನು ಸಮಿತಿಗೆ ಒದಗಿಸಿ, ಬಿಬಿಎಂಪಿಯವರೊಂದಿಗೆ ಅಬಕಾರಿ ಇಲಾಖೆಯವರು ಪರಿಶೀಲಿಸಿ ತಾಳೆ ಮಾಡಿ ರಿಕ್ರಿಯೇಷನ್ ಕ್ಲಬ್ ಕೊಡಬೇಕೋ ಬೇಡವೋ ಎಂಬ ಬಗ್ಗೆ ಸ್ಪಷ್ಟನೆ ಮಾಡಿ ಎಂದು ಸಮಿತಿಯು ಸೂಚಿಸಿತು.

ಜಿಲ್ಲಾವಾರು ಎಷ್ಟು ಕ್ಲಬ್‌ಗಳಿವೆ ಎಂಬ ಪ್ರಶ್ನೆಗೆ ಅಬಕಾರಿ ಆಯುಕ್ತರು ರಾಜ್ಯದಲ್ಲಿ ಒಟ್ಟು 206 ಕ್ಲಬ್‌ಗಳಿದ್ದು, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟಾರೆ 75 ಸಿಎಲ್ 4 ಸನ್ನದುಗಳು ಕಾರ್ಯ - ನಿರ್ವಹಿಸುತ್ತಿದೆಯೆಂದು ಸಮಿತಿಗೆ ತಿಳಿಸಿದರು, ಉಳಿದ ಕ್ಲಬ್‌ಗಳ ಬಗ್ಗೆ ಪರಿಶೀಲಿಸಿ ಪೂರ್ಣ ಪಟ್ಟಿ ಕೊಡಲು ಸೂಚಿಸಿತು.

ದಿನಾಂಕ 15.10.2015ರ ಸಭೆಯಲ್ಲಿ ಕ್ಲಬ್‌ಗಳು ನಿಯಮಗಳ ಉಲ್ಲಂಘನೆಯನ್ನು ನಿಯಂತ್ರಿಸುವ ಸಲುವಾಗಿ ಹೊಸ ತಿದ್ದುಪಡಿಗಾಗಿ ಏನೇನು ಮಾಡಬೇಕೆಂಬುದರ ಬಗ್ಗೆ ಇಲಾಖೆಯಿಂದ ಸಲಹೆಗಳಿದ್ದರೆ ತಿಳಿಸಲು ಸಮಿತಿಯು ಸೂಚಿಸಿತು. ಪ್ರಮುಖವಾಗಿ ಲೈಸೆನ್ಸ್ ನವೀಕರಣ ಮಾಡುವಾಗ ಕ್ಲಬ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದರೆ ಮೂಲ ಮಾಲೀಕರಿಂದ ಎನ್‌ಓಸಿ ತರಬೇಕು ಹಾಗೂ ಇತರೆ ಷರತ್ತುಗಳನ್ನು ಪೂರೈಸಿರಬೇಕೆಂದು ಹೇಳುತ್ತೀರಿ, ಲೈಸೆನ್ಸ್ ಕೊಡುವುದು ಜಾಗಕ್ಕೆ ಅಂಗಡಿಗೆ ಅಲ್ಲ, ಇದು ಎಷ್ಟರಮಟ್ಟಿಗೆ ಸರಿ. ಕ್ಲಬ್‌ಗಳಿಂದ ಸರ್ಕಾರಕ್ಕೆ ಸಾಕಷ್ಟು ಕಂದಾಯ ಬರುತ್ತದೆ, ಇದರಿಂದ ಕ್ಲಬ್‌ಗಳು ಸಾಕಷ್ಟು ಲಾಭವಾಗುತ್ತಿದ್ದು, ಸರ್ಕಾರಕ್ಕೆ ಲಾಭವಾಗುತ್ತಿಲ್ಲವೆಂದು ಸಮಿತಿಯು ಇಲಾಖೆಯವರಿಗೆ ಪ್ರಶ್ನಿಸಿತು.

ಅಬಕಾರಿ ಆಯುಕ್ತರು ಕ್ಲಬ್‌ಗಳಿಂದ ನಮಗೆ 80% ಕಂದಾಯ ಬರುತ್ತಿದೆಯೆಂದು ತಿಳಿಸಿದರು. ಸಮಿತಿಯು ವ್ಯಾಟ್ ಹಾಕುವ ಸಂಬಂಧದಲ್ಲಿರುವ ಗೊಂದಲದ ಬಗ್ಗೆ ಸ್ಪಷ್ಟೀಕರಣ ಕೋರಿತು.

ಅಬಕಾರಿ ಆಯುಕ್ತರು ಈ ಬಗ್ಗೆ ಸ್ಪಷ್ಟೀಕರಣ ನೀಡುತ್ತಾ, ಕೆ.ಎಸ್.ಬಿ.ಸಿ.ಎಲ್ ಮೂಲಕವೇ ಆಹಾರವನ್ನು ಸರಬರಾಜು ಆಗುವುದರಿಂದ, ಅಲ್ಲಿಯೇ ವ್ಯಾಟ್ ಹಾಕಲಿ, ಕ್ಲಬ್‌ಗಳಲ್ಲಿ ಹಾಕುವುದು ಬೇಡ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಬಳಿಯೂ ಚರ್ಚೆ ಮಾಡಲಾಗಿದೆ, ಇನ್ನೂ ಅಂತಿಮವಾಗಿ ತೀರ್ಮಾನವಾಗಿರುವುದಿಲ್ಲವೆಂದು ವಿವರಣೆ ನೀಡಿದರು.

ಮುಂದುವರೆದಂತೆ, ಸಮಿತಿಯು ಲೈಸೆನ್ಸ್ ನವೀಕರಣ ಮಾಡುವುದು ವರ್ಷಕ್ಕೆ ಒಂದು ಸಾರಿ ಮಾತ್ರ. ಲೈಸೆನ್ಸ್ ಪಡೆಯಲು ಒಂದು ಸ್ವಂತ ಜಾಗವಾಗಲಿ, ಜಾಗವನ್ನು ಲೀಸ್‌ಗಾಗಲಿ ಅಥವಾ ಬಾಡಿಗೆಗಾಗಲಿ ಹೊಂದಿರಬೇಕಾಗುತ್ತದೆ, ಲೈಸೆನ್ಸ್‌ಅನ್ನು ಇಲಾಖೆಯಿಂದ ಜಾಗಕ್ಕೆ ಮತ್ತು ಅಂಗಡಿಗೆ ನೀಡುತ್ತೀರಿ, ಹೀಗಿರುವಾಗ ಪುನ: ಅವರಿಂದ ಎನ್.ಓ.ಸಿ ತರಬೇಕು ಎನ್ನುವುದು ಎಷ್ಟರಮಟ್ಟಿಗೆ ಸರಿ ಎನ್ನುವ ಬಗ್ಗೆ ಸ್ಪಷ್ಟೀಕರಣ ಬಯಸಿತು.

ಆಯುಕ್ತರು, ಅಬಕಾರಿ ಇಲಾಖೆ ಇವರು, ವಿವಿಧ ಅಂಗಡಿ ಮತ್ತು ಬಾರ್‌ಗಳಿಗೆ ಸಂಬಂಧಪಟ್ಟಂತೆ ಇಷ್ಟು ವರ್ಷಗಳಿಗೆಂದು ಲೈಸೆನ್ಸ್ ನೀಡಲಾಗುತ್ತದೆ, ಮೊದಲ ಬಾರಿ

151

328

ಈ ವಿಚಾರವಾಗಿ ಅಬಕಾರಿ ಆಯುಕ್ತರು ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಸೊಸೈಟೀಸ್ ಆಕ್ಟ್ ಅಡಿಯಲ್ಲಿ ಕನಿಷ್ಟ 100 ಜನ ಸದಸ್ಯರಿರಬೇಕು, ಇನ್‌ಡೋರ್ ಔಟ್ ಡೋರ್ ಆಟಗಳಿಗೆ ಸೌಲಭ್ಯವಿರಬೇಕು, ಪುರುಷ ಮತ್ತು ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆ ಇರಬೇಕು, ಆಹಾರ ಸರಬರಾಜು ಮಾಡಬೇಕು ಈ ಷರತ್ತುಗಳನ್ನು ಪೂರೈಸಿದ್ದಲ್ಲಿ ಸಿಎಲ್ 4 ಲೈಸೆನ್ಸ್ ನೀಡಲಾಗುತ್ತದೆ. ಇದರಲ್ಲಿ ಯಾವುದಾದರೂ ಒಂದು ಉಲ್ಲಂಘನೆಯಾದರೂ ಕ್ರಮಕೈಗೊಳ್ಳಲಾಗುತ್ತದೆಯೆಂದು ವಿವರಿಸಿದರು.

ಸಮಿತಿಯು ಜಿಮ್‌ಕಾನಾ ಕ್ಲಬ್‌ಗೆ ಯಾವ ಉದ್ದೇಶಕ್ಕಾಗಿ ಲೈಸೆನ್ಸ್ ನೀಡಲಾಗಿದೆಯೋ ಅದಕ್ಕಲ್ಲದೆ ಇನ್ನಿತರೆ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದು, ನಿಯಮಾವಳಿ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಿತು. ನಿಯಮಗಳು ಎಲ್ಲಾ ಕ್ಲಬ್‌ಗಳಿಗೆ ಒಂದೇ ರೀತಿಯಲ್ಲಿರಬೇಕು. ಒಂದು ಕ್ಲಬ್‌ನ್ನು ಮುಚ್ಚಿಸುವುದು ಮತ್ತೊಂದನ್ನು ಮುಂದುವರೆಸುವುದು ಈ ರೀತಿಯಾಗಬಾರದೆಂದು ಸಮಿತಿಯು ಎಚ್ಚರಿಕೆಯನ್ನು ನೀಡಿತು. ಅಲ್ಲದೆ, ಜಿಮ್‌ಕಾನಾ ಕ್ಲಬ್ ಎನ್‌ಒಸಿ ಇರುವ ಬಗ್ಗೆ ಪರಿಶೀಲಿಸಿ ಸಮಿತಿಗೆ ವರದಿ ನೀಡುವಂತೆ ಸೂಚಿಸಿತು ಹಾಗೆಯೇ ಎಲ್ಲಾ ಕ್ಲಬ್‌ಗಳ ಬಗ್ಗೆಯೂ ಎನ್‌ಒಸಿ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿತು.

ಅಬಕಾರಿ ಆಯುಕ್ತರು ಎಲ್ಲಾ ಕ್ಲಬ್‌ಗಳ ನವೀಕರಣ ಚೆಕ್ ಮಾಡಲಾಗುವುದೆಂದು ತಿಳಿಸುತ್ತಾ, ಲೈಸೆನ್ಸ್ ಕೊಡುವಾಗ ಎನ್‌ಒಸಿ ಕೇಳಲಾಗುವುದು. ನವೀಕರಣದ ಸಮಯದಲ್ಲಿ ಎನ್‌ಒಸಿ ಕೇಳಬಾರದೆಂದು ಕೋರ್ಟಿನ ಆದೇಶವಿರುವುದರಿಂದ ಪ್ರತಿ ವರ್ಷ ಎನ್‌ಒಸಿ ತೆಗೆದುಕೊಳ್ಳುವುದಿಲ್ಲವೆಂದು ಸ್ಪಷ್ಟನೆ ನೀಡಿದರು.

ಇಲಾಖೆಯಿಂದ ಲೈಸೆನ್ಸ್ ಕೊಡುವಾಗ ಸೊಸೈಟೀಸ್ ಆಕ್ಟ್ ಅಡಿಯಲ್ಲಿ ಬರುವ ಕ್ಲಬ್‌ಗಳಿಗೆ ಲೈಸೆನ್ಸ್ ಕೊಡುತ್ತೀರಿ ಇಲ್ಲವಾದರೆ ಕೊಡುತ್ತಿಲ್ಲ. ಅದರ ಪ್ರಕಾರ ಇದ್ದರೆ ಯಾವುದಾದರೂ ಒಂದನ್ನು ರದ್ದು ಮಾಡಿದರೆ ಇನ್ನೊಂದನ್ನು ಕೂಡ ತಕ್ಷಣ ರದ್ದು ಮಾಡಬೇಕು. ಎಲ್ಲರಿಗೂ ಒಂದೇ ರೀತಿಯ ಕಾನೂನು ಇರಬೇಕು. ಸರ್ಕಾರಿ ಜಾಗದಲ್ಲಿ ಕ್ಲಬ್‌ಗಳು ರಿಕ್ರಿಯೇಷನ್ ಇಲ್ಲದಿರುವುದಕ್ಕೆ ಇಲಾಖೆಯು ಲೈಸೆನ್ಸ ಕೊಡುವಾಗ ಓನರ್ ಎನ್ ಒಸಿ ತೆಗೆದುಕೊಂಡಿದ್ದಾರೋ ಇಲ್ಲವೋ. ಪರಿಶೀಲಿಸಬೇಕು. ಸಮಿತಿಗೆ ಎನ್ ಒಸಿ ಪ್ರತಿಯನ್ನು ನೀಡಿ. ಯಾವ ಕ್ಲಬ್‌ಗಳಿಗೆ ಎನ್ ಒಸಿ ಇಲ್ಲ ಅವರುಗಳ ಪಟ್ಟಿಯನ್ನು ಸಮಿತಿಗೆ ಒದಗಿಸಿ. ~~ಬಿಬಿಎಂಪಿಯವರೊಂದಿಗೆ ಅಬಕಾರಿ ಇಲಾಖೆಯುವರು ಪರಿಶೀಲಿಸಿ ತಾಳೆ ಮಾಡಿ~~ ರಿಕ್ರಿಯೇಷನ್ ಕ್ಲಬ್ ಕೊಡಬೇಕೋ ಬೇಡವೋ ಎಂಬ ಬಗ್ಗೆ ಸ್ಪಷ್ಟನೆ ಮಾಡಿ ಎಂದು ಸಮಿತಿಯು ಸೂಚಿಸಿತು.

ಜಿಲ್ಲಾವಾರು ಎಷ್ಟು ಕ್ಲಬ್‌ಗಳಿವೆ ಎಂಬ ಪ್ರಶ್ನೆಗೆ ಅಬಕಾರಿ ಆಯುಕ್ತರು ರಾಜ್ಯದಲ್ಲಿ ಒಟ್ಟು 206 ಕ್ಲಬ್‌ಗಳಿದ್ದು, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟಾರೆ 75 ಸಿಎಲ್ 4 ಸನ್ನದುಗಳು ಕಾರ್ಯ - ನಿರ್ವಹಿಸುತ್ತಿದೆಯೆಂದು ಸಮಿತಿಗೆ ತಿಳಿಸಿದರು, ಉಳಿದ ಕ್ಲಬ್‌ಗಳ ಬಗ್ಗೆ ಪರಿಶೀಲಿಸಿ ಪೂರ್ಣ ಪಟ್ಟಿ ಕೊಡಲು ಸೂಚಿಸಿತು.

ದಿನಾಂಕ 15.10.2015ರ ಸಭೆಯಲ್ಲಿ ಕ್ಲಬ್‌ಗಳು ನಿಯಮಗಳ ಉಲ್ಲಂಘನೆಯನ್ನು ನಿಯಂತ್ರಿಸುವ ಸಲುವಾಗಿ ಹೊಸ ತಿದ್ದುಪಡಿಗಾಗಿ ಏನೇನು ಮಾಡಬೇಕೆಂಬುದರ ಬಗ್ಗೆ ಇಲಾಖೆಯಿಂದ ಸಲಹೆಗಳಿದ್ದರೆ ತಿಳಿಸಲು ಸಮಿತಿಯು ಸೂಚಿಸಿತು. ಪ್ರಮುಖವಾಗಿ ಲೈಸೆನ್ಸ್ ನವೀಕರಣ ಮಾಡುವಾಗ ಕ್ಲಬ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದರೆ ಮೂಲ ಮಾಲೀಕರಿಂದ ಎನ್‌ಓಸಿ ತರಬೇಕು ಹಾಗೂ ಇತರೆ ಷರತ್ತುಗಳನ್ನು ಪೂರೈಸಿರಬೇಕೆಂದು ಹೇಳುತ್ತೀರಿ, ಲೈಸೆನ್ಸ್ ಕೊಡುವುದು ಜಾಗಕ್ಕೆ ಅಂಗಡಿಗೆ ಅಲ್ಲ, ಇದು ಎಷ್ಟರಮಟ್ಟಿಗೆ ಸರಿ, ಕ್ಲಬ್‌ಗಳಿಂದ ಸರ್ಕಾರಕ್ಕೆ ಸಾಕಷ್ಟು ಕಂದಾಯ ಬರುತ್ತದೆ, ಇದರಿಂದ ಕ್ಲಬ್‌ಗಳು ಸಾಕಷ್ಟು ಲಾಭವಾಗುತ್ತಿದ್ದು, ಸರ್ಕಾರಕ್ಕೆ ಲಾಭವಾಗುತ್ತಿಲ್ಲವೆಂದು ಸಮಿತಿಯು ಇಲಾಖೆಯವರಿಗೆ ಪ್ರಶ್ನಿಸಿತು.

ಅಬಕಾರಿ ಆಯುಕ್ತರು ಕ್ಲಬ್‌ಗಳಿಂದ ನಮಗೆ 80% ಕಂದಾಯ ಬರುತ್ತಿದೆಯೆಂದು ತಿಳಿಸಿದರು. ಸಮಿತಿಯು ವ್ಯಾಟ್ ಹಾಕುವ ಸಂಬಂಧದಲ್ಲಿರುವ ಗೊಂದಲದ ಬಗ್ಗೆ ಸ್ಪಷ್ಟೀಕರಣ ಕೋರಿತು.

ಅಬಕಾರಿ ಆಯುಕ್ತರು ಈ ಬಗ್ಗೆ ಸ್ಪಷ್ಟೀಕರಣ ನೀಡುತ್ತಾ, ಕೆ.ಎಸ್.ಬಿ.ಸಿ.ಎಲ್ ಮೂಲಕವೇ ಆಹಾರವನ್ನು ಸರಬರಾಜು ಆಗುವುದರಿಂದ, ಅಲ್ಲಿಯೇ ವ್ಯಾಟ್ ಹಾಕಲಿ, ಕ್ಲಬ್‌ಗಳಲ್ಲಿ ಹಾಕುವುದು ಬೇಡ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಬಳಿಯೂ ಚರ್ಚೆ ಮಾಡಲಾಗಿದೆ, ಇನ್ನೂ ಅಂತಿಮವಾಗಿ ತೀರ್ಮಾನವಾಗಿರುವುದಿಲ್ಲವೆಂದು ವಿವರಣೆ ನೀಡಿದರು.

ಮುಂದುವರೆದಂತೆ, ಸಮಿತಿಯು ಲೈಸೆನ್ಸ್ ನವೀಕರಣ ಮಾಡುವುದು ವರ್ಷಕ್ಕೆ ಒಂದು ಸಾರಿ ಮಾತ್ರ. ಲೈಸೆನ್ಸ್ ಪಡೆಯಲು ಒಂದು ಸ್ವಂತ ಜಾಗವಾಗಲಿ, ಜಾಗವನ್ನು ಲೀಸ್‌ಗಾಗಲಿ ಅಥವಾ ಬಾಡಿಗೆಗಾಗಲಿ ಹೊಂದಿರಬೇಕಾಗುತ್ತದೆ, ಲೈಸೆನ್ಸ್‌ಅನ್ನು ಇಲಾಖೆಯಿಂದ ಜಾಗಕ್ಕೆ ಮತ್ತು ಅಂಗಡಿಗೆ ನೀಡುತ್ತೀರಿ, ಹೀಗಿರುವಾಗ ಪುನ: ಅವರಿಂದ ಎನ್.ಓ.ಸಿ ತರಬೇಕು ಎನ್ನುವುದು ಎಷ್ಟರಮಟ್ಟಿಗೆ ಸರಿ ಎನ್ನುವ ಬಗ್ಗೆ ಸ್ಪಷ್ಟೀಕರಣ ಬಯಸಿತು.

ಆಯುಕ್ತರು, ಅಬಕಾರಿ ಇಲಾಖೆ ಇವರು, ವಿವಿಧ ಅಂಗಡಿ ಮತ್ತು ಬಾರ್‌ಗಳಿಗೆ ಸಂಬಂಧಪಟ್ಟಂತೆ ಇಷ್ಟು ವರ್ಷಗಳಿಗೆಂದು ಲೈಸೆನ್ಸ್ ನೀಡಲಾಗುತ್ತದೆ, ಮೊದಲ ಬಾರಿ

ಈ ವಿಚಾರವಾಗಿ ಅಬಕಾರಿ ಆಯುಕ್ತರು ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಸೊಸೈಟೀಸ್ ಆಕ್ಟ್ ಅಡಿಯಲ್ಲಿ ಕನಿಷ್ಠ 100 ಜನ ಸದಸ್ಯರಿರಬೇಕು, ಇನ್‌ಡೋರ್ ಔಟ್ ಡೋರ್ ಆಟಗಳಿಗೆ ಸೌಲಭ್ಯವಿರಬೇಕು, ಪುರುಷ ಮತ್ತು ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆ ಇರಬೇಕು, ಆಹಾರ ಸರಬರಾಜು ಮಾಡಬೇಕು ಈ ಷರತ್ತುಗಳನ್ನು ಪೂರೈಸಿದ್ದಲ್ಲಿ ಸಿಎಲ್ 4 ಲೈಸೆನ್ಸ್ ನೀಡಲಾಗುತ್ತದೆ. ಇದರಲ್ಲಿ ಯಾವುದಾದರೂ ಒಂದು ಉಲ್ಲಂಘನೆಯಾದರೂ ಕ್ರಮಕೈಗೊಳ್ಳಲಾಗುತ್ತದೆಯೆಂದು ವಿವರಿಸಿದರು.

ಸಮಿತಿಯು ಜಿಮ್‌ಕಾನಾ ಕ್ಲಬ್‌ಗೆ ಯಾವ ಉದ್ದೇಶಕ್ಕಾಗಿ ಲೈಸೆನ್ಸ್ ನೀಡಲಾಗಿದೆಯೋ ಅದಕ್ಕಲ್ಲದೆ ಇನ್ನಿತರೆ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದು, ನಿಯಮಾವಳಿ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಿತು. ನಿಯಮಗಳು ಎಲ್ಲಾ ಕ್ಲಬ್‌ಗಳಿಗೆ ಒಂದೇ ರೀತಿಯಲ್ಲಿರಬೇಕು, ಒಂದು ಕ್ಲಬ್‌ನ್ನು ಮುಚ್ಚಿಸುವುದು ಮತ್ತೊಂದನ್ನು ಮುಂದುವರೆಸುವುದು ಈ ರೀತಿಯಾಗಬಾರದೆಂದು ಸಮಿತಿಯು ಎಚ್ಚರಿಕೆಯನ್ನು ನೀಡಿತು. ಅಲ್ಲದೆ, ಜಿಮ್‌ಕಾನಾ ಕ್ಲಬ್ ಎನ್‌ಒಸಿ ಇರುವ ಬಗ್ಗೆ ಪರಿಶೀಲಿಸಿ ಸಮಿತಿಗೆ ವರದಿ ನೀಡುವಂತೆ ಸೂಚಿಸಿತು ಹಾಗೆಯೇ ಎಲ್ಲಾ ಕ್ಲಬ್‌ಗಳ ಬಗ್ಗೆಯೂ ಎನ್‌ಒಸಿ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿತು.

ಅಬಕಾರಿ ಆಯುಕ್ತರು ಎಲ್ಲಾ ಕ್ಲಬ್‌ಗಳ ನವೀಕರಣ ಚೆಕ್ ಮಾಡಲಾಗುವುದೆಂದು ತಿಳಿಸುತ್ತಾ, ಲೈಸೆನ್ಸ್ ಕೊಡುವಾಗ ಎನ್‌ಒಸಿ ಕೇಳಲಾಗುವುದು, ನವೀಕರಣದ ಸಮಯದಲ್ಲಿ ಎನ್‌ಒಸಿ ಕೇಳಬಾರದೆಂದು ಕೋರ್ಟಿನ ಆದೇಶವಿರುವುದರಿಂದ ಪ್ರತಿ ವರ್ಷ ಎನ್‌ಒಸಿ ತೆಗೆದುಕೊಳ್ಳುವುದಿಲ್ಲವೆಂದು ಸ್ಪಷ್ಟನೆ ನೀಡಿದರು.

ಇಲಾಖೆಯಿಂದ ಲೈಸೆನ್ಸ್ ಕೊಡುವಾಗ ಸೊಸೈಟೀಸ್ ಆಕ್ಟ್ ಅಡಿಯಲ್ಲಿ ಬರುವ ಕ್ಲಬ್‌ಗಳಿಗೆ ಲೈಸೆನ್ಸ್ ಕೊಡುತ್ತೀರಿ ಇಲ್ಲವಾದರೆ ಕೊಡುತ್ತಿಲ್ಲ, ಅದರ ಪ್ರಕಾರ ಇದ್ದರೆ ಯಾವುದಾದರೂ ಒಂದನ್ನು ರದ್ದು ಮಾಡಿದರೆ ಇನ್ನೊಂದನ್ನು ಕೂಡ ತಕ್ಷಣ ರದ್ದು ಮಾಡಬೇಕು, ಎಲ್ಲರಿಗೂ ಒಂದೇ ರೀತಿಯ ಕಾನೂನು ಇರಬೇಕು. ಸರ್ಕಾರಿ ಜಾಗದಲ್ಲಿ ಕ್ಲಬ್‌ಗಳು ರಿಕ್ರಿಯೇಷನ್ ಇಲ್ಲದಿರುವುದಕ್ಕೆ ಇಲಾಖೆಯು ಲೈಸೆನ್ಸ್ ಕೊಡುವಾಗ ಓನರ್ ಎನ್ ಒಸಿ ತೆಗೆದುಕೊಂಡಿದ್ದಾರೋ ಇಲ್ಲವೋ, ಪರಿಶೀಲಿಸಬೇಕು, ಸಮಿತಿಗೆ ಎನ್ ಒಸಿ ಪ್ರತಿಯನ್ನು ನೀಡಿ, ಯಾವ ಕ್ಲಬ್‌ಗಳಿಗೆ ಎನ್ ಒಸಿ ಇಲ್ಲ ಅವರುಗಳ ಪಟ್ಟಿಯನ್ನು ಸಮಿತಿಗೆ ಒದಗಿಸಿ, ಬಿಬಿಎಂಪಿಯವರೊಂದಿಗೆ ಅಬಕಾರಿ ಇಲಾಖೆಯವರು ಪರಿಶೀಲಿಸಿ ತಾಳೆ ಮಾಡಿ ರಿಕ್ರಿಯೇಷನ್ ಕ್ಲಬ್ ಕೊಡಬೇಕೋ ಬೇಡವೋ ಎಂಬ ಬಗ್ಗೆ ಸ್ಪಷ್ಟನೆ ಮಾಡಿ ಎಂದು ಸಮಿತಿಯು ಸೂಚಿಸಿತು.

ಜಿಲ್ಲಾವಾರು ಎಷ್ಟು ಕ್ಲಬ್‌ಗಳಿವೆ ಎಂಬ ಪ್ರಶ್ನೆಗೆ ಅಬಕಾರಿ ಆಯುಕ್ತರು ರಾಜ್ಯದಲ್ಲಿ ಒಟ್ಟು 206 ಕ್ಲಬ್‌ಗಳಿದ್ದು, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟಾರೆ 75 ಸಿಎಲ್ 4 ಸನ್ನದುಗಳು ಕಾರ್ಯ - ನಿರ್ವಹಿಸುತ್ತಿದೆಯೆಂದು ಸಮಿತಿಗೆ ತಿಳಿಸಿದರು, ಉಳಿದ ಕ್ಲಬ್‌ಗಳ ಬಗ್ಗೆ ಪರಿಶೀಲಿಸಿ ಪೂರ್ಣ ಪಟ್ಟಿ ಕೊಡಲು ಸೂಚಿಸಿತು.

ದಿನಾಂಕ 15.10.2015ರ ಸಭೆಯಲ್ಲಿ ಕ್ಲಬ್‌ಗಳು ನಿಯಮಗಳ ಉಲ್ಲಂಘನೆಯನ್ನು ನಿಯಂತ್ರಿಸುವ ಸಲುವಾಗಿ ಹೊಸ ತಿದ್ದುಪಡಿಗಾಗಿ ಏನೇನು ಮಾಡಬೇಕೆಂಬುದರ ಬಗ್ಗೆ ಇಲಾಖೆಯಿಂದ ಸಲಹೆಗಳಿದ್ದರೆ ತಿಳಿಸಲು ಸಮಿತಿಯು ಸೂಚಿಸಿತು. ಪ್ರಮುಖವಾಗಿ ಲೈಸೆನ್ಸ್ ನವೀಕರಣ ಮಾಡುವಾಗ ಕ್ಲಬ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದರೆ ಮೂಲ ಮಾಲೀಕರಿಂದ ಎನ್‌ಓಸಿ ತರಬೇಕು ಹಾಗೂ ಇತರೆ ಷರತ್ತುಗಳನ್ನು ಪೂರೈಸಿರಬೇಕೆಂದು ಹೇಳುತ್ತೀರಿ, ಲೈಸೆನ್ಸ್ ಕೊಡುವುದು ಜಾಗಕ್ಕೆ ಅಂಗಡಿಗೆ ಅಲ್ಲ, ಇದು ಎಷ್ಟರಮಟ್ಟಿಗೆ ಸರಿ, ಕ್ಲಬ್‌ಗಳಿಂದ ಸರ್ಕಾರಕ್ಕೆ ಸಾಕಷ್ಟು ಕಂದಾಯ ಬರುತ್ತದೆ, ಇದರಿಂದ ಕ್ಲಬ್‌ಗಳು ಸಾಕಷ್ಟು ಲಾಭವಾಗುತ್ತಿದ್ದು, ಸರ್ಕಾರಕ್ಕೆ ಲಾಭವಾಗುತ್ತಿಲ್ಲವೆಂದು ಸಮಿತಿಯು ಇಲಾಖೆಯವರಿಗೆ ಪ್ರಶ್ನಿಸಿತು.

ಅಬಕಾರಿ ಆಯುಕ್ತರು ಕ್ಲಬ್‌ಗಳಿಂದ ನಮಗೆ 80% ಕಂದಾಯ ಬರುತ್ತಿದೆಯೆಂದು ತಿಳಿಸಿದರು. ಸಮಿತಿಯು ವ್ಯಾಟ್ ಹಾಕುವ ಸಂಬಂಧದಲ್ಲಿರುವ ಗೊಂದಲದ ಬಗ್ಗೆ ಸ್ಪಷ್ಟೀಕರಣ ಕೋರಿತು.

ಅಬಕಾರಿ ಆಯುಕ್ತರು ಈ ಬಗ್ಗೆ ಸ್ಪಷ್ಟೀಕರಣ ನೀಡುತ್ತಾ, ಕೆ.ಎಸ್.ಬಿ.ಸಿ.ಎಲ್ ಮೂಲಕವೇ ಆಹಾರವನ್ನು ಸರಬರಾಜು ಆಗುವುದರಿಂದ, ಅಲ್ಲಿಯೇ ವ್ಯಾಟ್ ಹಾಕಲಿ, ಕ್ಲಬ್‌ಗಳಲ್ಲಿ ಹಾಕುವುದು ಬೇಡ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಬಳಿಯೂ ಚರ್ಚೆ ಮಾಡಲಾಗಿದೆ, ಇನ್ನೂ ಅಂತಿಮವಾಗಿ ತೀರ್ಮಾನವಾಗಿರುವುದಿಲ್ಲವೆಂದು ವಿವರಣೆ ನೀಡಿದರು.

ಮುಂದುವರೆದಂತೆ, ಸಮಿತಿಯು ಲೈಸೆನ್ಸ್ ನವೀಕರಣ ಮಾಡುವುದು ವರ್ಷಕ್ಕೆ ಒಂದು ಸಾರಿ ಮಾತ್ರ. ಲೈಸೆನ್ಸ್ ಪಡೆಯಲು ಒಂದು ಸ್ವಂತ ಜಾಗವಾಗಲಿ, ಜಾಗವನ್ನು ಲೀಸ್‌ಗಾಗಲಿ ಅಥವಾ ಬಾಡಿಗೆಗಾಗಲಿ ಹೊಂದಿರಬೇಕಾಗುತ್ತದೆ, ಲೈಸೆನ್ಸ್‌ಅನ್ನು ಇಲಾಖೆಯಿಂದ ಜಾಗಕ್ಕೆ ಮತ್ತು ಅಂಗಡಿಗೆ ನೀಡುತ್ತೀರಿ, ಹೀಗಿರುವಾಗ ಪುನ: ಅವರಿಂದ ಎನ್.ಓ.ಸಿ ತರಬೇಕು ಎನ್ನುವುದು ಎಷ್ಟರಮಟ್ಟಿಗೆ ಸರಿ ಎನ್ನುವ ಬಗ್ಗೆ ಸ್ಪಷ್ಟೀಕರಣ ಬಯಸಿತು.

ಆಯುಕ್ತರು, ಅಬಕಾರಿ ಇಲಾಖೆ ಇವರು, ವಿವಿಧ ಅಂಗಡಿ ಮತ್ತು ಬಾರ್‌ಗಳಿಗೆ ಸಂಬಂಧಪಟ್ಟಂತೆ ಇಷ್ಟು ವರ್ಷಗಳಿಗೆಂದು ಲೈಸೆನ್ಸ್ ನೀಡಲಾಗುತ್ತದೆ, ಮೊದಲ ಬಾರಿ

CL9 326

ಲೈಸೆನ್ಸ್ ನೀಡುವ ಸಂದರ್ಭದಲ್ಲಿ ಜಾಗದ ಮಾಲೀಕರಿಂದ ಎನ್.ಓ.ಸಿ ತರಬೇಕು ಎಂದಿದೆ, ಆದರೆ, ಲೈಸೆನ್ಸ್ ನವೀಕರಣ ಮಾಡುವ ಸಂದರ್ಭದಲ್ಲಿ ಎನ್.ಓ.ಸಿ ಕೇಳುವುದಿಲ್ಲ, ಜಾಗದ ವಿಚಾರವಾಗಿ ಯಾವುದೇ ತಕರಾರು ಬಂದರೂ ಸಹ ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಕೇವಲ ಲೈಸೆನ್ಸ್ ಮಾತ್ರ ನಾವು ಕೊಡುತ್ತೇವೆ, ಈ ಬಗ್ಗೆ ರಿಟ್ ಪಿಟಿಷನ್ ಸಂಖ್ಯೆ 27070/1997 (ಬಿ.ಸಿ. ನರಸಿಂಹಮೂರ್ತಿ v/s ಕಮಿಷನರ್ ಆಫ್ ಎಕ್ಸೈಸ್ ಮತ್ತು ಇತರರು) ಉಚ್ಛ ನ್ಯಾಯಾಲಯದ ತೀರ್ಪು ಇದೆಯೆಂದು ಸಮಿತಿಗೆ ವಿವರಿಸಿದರು.

ಕ್ಲಬ್‌ಗಳು ಯಾವ ಜಾಗದಲ್ಲಿ ಸಿಎಲ್ 5 ಲೈಸೆನ್ಸ್ ನವೀಕರಣವಾಗಿರುತ್ತದೆ, ಅದೇ ಜಾಗದಲ್ಲಿ ಅಂಗಡಿ ಇರದೆ, ಬೇರೆ ಜಾಗದಲ್ಲಿ ಮಧ್ಯ ಮಾರಿದರೆ ಅದು ಕಾನೂನಿನ ಉಲ್ಲಂಘನೆಯಾಗುತ್ತದೆ, ಇಂತಹ ಪ್ರಕರಣಗಳಲ್ಲಿ ನಿಯಮಾವಳಿ ರೀತ್ಯಾ ದಂಡ ವಿಧಿಸಬೇಕಾಗುತ್ತದೆಯೆಂದು ಸಮಿತಿಯು ಅಬಕಾರಿ ಇಲಾಖೆಗೆ ಎಚ್ಚರಿಸಿತು, ಈ ವಿಷಯವಾಗಿ ಗರಿಷ್ಟ ಐವತ್ತು ಸಾವಿರ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ, ಇಲಾಖೆಯ ಗಮನಕ್ಕೆ ಬಂದ ಕೂಡಲೇ ಕ್ರಮಕೈಗೊಳ್ಳಲಾಗುವುದೆಂದು ಸಮಿತಿಗೆ ಆಯುಕ್ತರು ತಿಳಿಸಿದರು.

## ಅಧ್ಯಾಯ-5

### ರಾಜ್ಯದಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿಯನ್ನು ಅವುಗಳಲ್ಲಿನ ನ್ಯೂನತೆಗಳನ್ನು ಸಮಗ್ರವಾಗಿ ಪರಿಶೀಲಿಸುವುದು ಹಾಗೂ ಸಂಬಂಧಪಟ್ಟ ಅಧಿನಿಯಮಕ್ಕೆ ಅಗತ್ಯವೆನಿಸುವ ತಿದ್ದುಪಡಿಗಳನ್ನು ತರುವ ಬಗ್ಗೆ

12.06.2015ರ ಸಭೆಯಲ್ಲಿ ಸದನ ಸಮಿತಿ ನೀಡಿರುವ ನಮೂನೆಗಳಲ್ಲಿನ ವಿವರಗಳನ್ನು ಸಂಬಂಧಪಟ್ಟ ಕ್ಲಬ್‌ಗಳಿಂದ ಭರ್ತಿ ಮಾಡಿಸಿಕೊಂಡು, ಪರಿಶೀಲಿಸಿ ಮಾಹಿತಿಯನ್ನು ಒದಗಿಸಲು ಹಾಗೂ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ನಿಯಮಗಳನ್ನು ತಿದ್ದುಪಡಿ ಮಾಡಲು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಬೇರೆ ರಾಜ್ಯಗಳಲ್ಲಿರುವ ಉತ್ತಮ ಅಂಶಗಳನ್ನು ಪರಿಶೀಲಿಸಿ ತಿದ್ದುಪಡಿಯಲ್ಲಿ ಸೇರಿಸಲು ಕ್ರಮಕೈಗೊಳ್ಳಲು ಸಲಹೆ ನೀಡಲಾಗಿದ್ದು, ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ತಿಳಿಸಲು ಸಮಿತಿಯು ಸೂಚಿಸಿತು.

ಮುದ್ರಾಂಕ ಇಲಾಖೆಯವರು 19 ಜಿಲ್ಲೆಗಳ ಮಾಹಿಗಳನ್ನು ಕೊಟ್ಟಿದ್ದು, ಇನ್ನು 14 ಜಿಲ್ಲೆಗಳಿಂದ ಮಾಹಿತಿ ಬರಬೇಕೆಂದು ಹಾಗೂ ಒಂದು ವಾರದೊಳಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಕರ್ನಾಟಕ ಸಂಘಗಳ ಕಾಯ್ದೆ ನಿಯಮಾವಳಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಮಾಹಿತಿ ನೀಡಲು ಸಮಿತಿಯು ಸೂಚಿಸಿತು. ಕಂದಾಯ ಇಲಾಖೆಯವರು ಈ ವಿಷಯವನ್ನು ಸಚಿವ ಸಂಪುಟದ ಮುಂದೆ ಈಗಾಗಲೇ ಮಂಡಿಸಲಾಗಿದೆಯೆಂಬ ಮಾಹಿತಿಯನ್ನು ಸಮಿತಿಗೆ ಒದಗಿಸಿದರು.

ದಿನಾಂಕ 28.08.2015ರ ಸಭೆಯಲ್ಲಿ ಸಮಿತಿಯು, ಎಲ್ಲಾ ಕ್ಲಬ್‌ಗಳಿಗೂ ಅನ್ವಯುವಾಗುವಂತೆ ಒಂದೇ ವ್ಯವಸ್ಥೆಯನ್ನು ತರಬೇಕಾದ ಅಗತ್ಯತೆ ಇದ್ದು, ಕ್ಲಬ್‌ಗಳಿಗೆ ಜಾಗಗಳನ್ನು ಬಿಡಿಎ , ಕಾರ್ಪೋರೇಷನ್, ಕಂದಾಯ ಇಲಾಖೆಯವರುಗಳು ನೀಡಿದ್ದರೂ ಕೂಡ ಕ್ಲಬ್‌ಗಳಿಗೆ ಸಂಬಂಧಿಸಿದಂತೆ ಏಕರೂಪವಾದ ನಿಯಮಗಳನ್ನು ತರಬೇಕಾಗುತ್ತದೆ, ಈ ಹಿನ್ನಲೆಯಲ್ಲಿ ಸಂಸದೀಯ ವ್ಯವಹಾರಗಳ ಇಲಾಖೆಯ ಅಧಿಕಾರಿಗಳಿಗೆ ಸಲಹೆ ನೀಡುವಂತೆ ಸೂಚಿಸಿತು.

ವಿಶೇಷ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು, ಇವರು ಇದಕ್ಕೆ ಸಂಬಂಧಪಟ್ಟಂತೆ ಸೊಸೈಟಿಸ್ ರಿಜೇಸ್ಟ್ರೇಷನ್ ಆಕ್ಟ್‌ಗೆ ತಿದ್ದುಪಡಿ ತರಬೇಕಾಗಿದೆ ಈಗಾಗಲೇ ಕರಡು ವಿಧೇಯಕ ಮಾಡಿದ್ದೇವೆ ಅದನ್ನು ಸಚಿವ ಸಂಪುಟದ ಮುಂದೆ ಇಡಬೇಕಾಗಿದೆ.

ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆಯವರು ಸದನ ಸಮಿತಿಯ ಮಧ್ಯಂತರ ವರದಿಯ ಪ್ರಕಾರ ವಸ್ತ್ರ ಸಂಹಿತೆ ಇರಬಾರದು, ಫೀಸ್ ಲಿಮಿಟ್ ಇರಬೇಕೆಂದು ತಿದ್ದುಪಡಿ ಮಾಡಿ ಕಾನೂನು ಇಲಾಖೆಗೆ ಕಳುಹಿಸಿದ್ದೇವೆ ಅವರು ಪ್ರತ್ಯೇಕ ಶಾಸನ ತರಲು ಸೂಚಿಸಿ ವಾಪಸ್ಸು ಕಳುಹಿಸಿರುತ್ತಾರೆ, ಅದನ್ನು ನಾವು ಸಿದ್ಧಪಡಿಸಿದ್ದೇವೆ ಎಂದು ಸಮಿತಿಗೆ ತಿಳಿಸಿರುತ್ತಾರೆ.

ಸಂಸದೀಯ ವ್ಯವಹಾರಗಳ ವಿಶೇಷ ಕಾರ್ಯದರ್ಶಿಗಳು ಕಾಯ್ದೆ ಮಾಡುವಾಗ ಮೂಲಭೂತ ಹಕ್ಕುಗಳಿಗೆ ಅನುಗುಣವಾಗಿ ಕಾಯ್ದೆ ರಚನೆ ಮಾಡಬೇಕಾಗುತ್ತದೆ, ಅದರಂತೆ ಬೈಲಾ ಇರಬೇಕಾಗುತ್ತದೆ, ಅದರ ವಿರುದ್ಧವಾಗಿ ಬೈಲಾ ಮಾಡಿದರೆ ದಂಡ ವಿಧಿಸಬಹುದಾಗಿರುತ್ತದೆ ಎಂದು ಸಮಿತಿಗೆ ತಿಳಿಸಿರುತ್ತಾರೆ.

ಕಂದಾಯ ಇಲಾಖೆಯ ಕಾರ್ಯದರ್ಶಿಯವರು ಎಲ್ಲಾ ಇಲಾಖೆಯೊಂದಿಗೆ ಚರ್ಚೆ ಮಾಡಿ ಒಂದು ಕರಡನ್ನು ತಯಾರಿಸಿ ಸಾರ್ವಜನಿಕರ ಆಕ್ಷೇಪಣೆಯನ್ನು ಕೋರಿ ಅಂತರ್‌ಜಾಲದಲ್ಲಿ ಹಾಕಲಾಗುವುದೆಂದು ತಿಳಿಸಿರುತ್ತಾರೆ.

ದಿನಾಂಕ 04.09.2015ರ ಸಭೆಯಲ್ಲಿ, ಸಮಿತಿಯ ನಿರ್ದೇಶನದಂತೆ ಕರಡು ವಿಧೇಯಕವನ್ನು ಸಮಿತಿಯು ಪರಿಶೀಲನೆಗಾಗಿ ಕಂದಾಯ ಇಲಾಖೆಯವರು ಸಮಿತಿಯ

ಮುಂದೆ ಮಂಡಿಸಿದರು. ಸಭೆಯಲ್ಲಿ ಕರಡು ವಿಧೇಯಕದ ಬಗ್ಗೆ ಕಾನೂನು ಇಲಾಖೆ, ಕಂದಾಯ ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆಗಳೊಂದಿಗೆ ಚರ್ಚಿಸಲಾಯಿತು. ಕರಡು ವಿಧೇಯಕಗಳಿಗೆ ಕೆಲವು ತಿದ್ದುಪಡಿಗಳನ್ನು ಸೇರ್ಪಡೆಗೊಳಿಸಿ ಮತ್ತೊಂದು ಕಳಡನ್ನು ತಯಾರಿಸಿ ಸಮಿತಿಯ ಮುಂದಿಡಲು ಸಮಿತಿಯು ಸೂಚಿಸಿತು.

ಕರಡು ವಿಧೇಯಕವನ್ನು ತಯಾರಿಸುವ ಬಗ್ಗೆ ಅಭಿಪ್ರಾಯ ಪಡೆಯಲು ವಿವಿಧ ಕ್ಲಬ್‌ಗಳ ಪದಾಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ಶ್ರೀ ಎಂ.ಆರ್.ಕೃಷ್ಣಮೂರ್ತಿ, ಸೆಂಚುರಿ ಕ್ಲಬ್‌ನ ಕಾರ್ಯದರ್ಶಿ, ಇವರು ಸೆಂಚುರಿ ಕ್ಲಬ್‌ನಲ್ಲಿ ಯಾವುದೇ ರೀತಿಯ ವಸ್ತ್ರ ಸಂಹಿತೆ ಇರುವುದಿಲ್ಲ, ಈ ಬಗ್ಗೆ ನಾಲ್ಕು ವರ್ಷಗಳ ಹಿಂದೆಯೆ ತಿದ್ದುಪಡಿಯಾಗಿದೆ. ಸದಸ್ಯತ್ವ ಶುಲ್ಕ ಒಬ್ಬರಿಗೆ ರೂ. 1 ಲಕ್ಷ ಇರುತ್ತದೆ. ಪ್ರಮುಖವಾಗಿ ಸ್ಥಳೀಯ ಶಾಸಕರು, ಸಂಸದರು, ವಿಧಾನ ಪರಿಷತ್ತಿನ ಸದಸ್ಯರು ಇವರುಗಳಿಗೆ ಸದಸ್ಯತ್ವ ನೀಡುವ ಬಗ್ಗೆ ತಮ್ಮ ಯಾವುದೇ ಆಕ್ಷೇಪಣೆ ಇರುವುದಿಲ್ಲ ಆದರೆ, ಈ ವಿಷಯವನ್ನು ಏಕಾಏಕಿ ನಿರ್ಧಾರ ತೆಗೆದುಕೊಳ್ಳಲು ನಮಗೆ ಅಧಿಕಾರವಿಲ್ಲವೆಂದು, ಇದು ಸರ್ವ ಸದಸ್ಯರ ಸಭೆಯಲ್ಲಿ ನಿರ್ಧಾರವಾಗಬೇಕಾಗಿರುವ ವಿಷಯವಾಗಿರುತ್ತದೆಂದು ಸಮಿತಿಗೆ ತಿಳಿಸಿದರು.

ಶ್ರೀ ವಿಜಯರಾಘವರೆಡ್ಡಿ, ಅಧ್ಯಕ್ಷ, ಎನ್. ಜಿ. ವಿ, ಇವರು ವಸ್ತ್ರ ಸಂಹಿತೆ ಬಗ್ಗೆ ಯಾವುದೇ ನಿರ್ಬಂಧ ಇರುವುದಿಲ್ಲ, ಆದರೆ, ಸದಸ್ಯತ್ವ, ಸದಸ್ಯತ್ವ ಶುಲ್ಕ ಹಾಗೂ ಇತರ ವಿಷಯಗಳ ಬಗ್ಗೆ ಎ.ಜಿ.ಎಂ ನಲ್ಲಿ ತೀರ್ಮಾನವಾಗುತ್ತದೆ, ಮ್ಯಾನೇಜ್‌ಮೆಂಟ್‌ನವರು ಕೇವಲ ಎ.ಜಿ.ಎಂ ನ ತೀರ್ಮಾನಗಳನ್ನು ಪಾಲನೆ ಮಾಡುತ್ತೇವೆ. ಆದುದರಿಂದ, ಕರಡು ವಿಧೇಯಕದ ಬಗ್ಗೆ ಎ.ಜಿ.ಎಂ. ನಲ್ಲಿಟ್ಟು ಅದರಲ್ಲಿ ಕೈಗೊಳ್ಳಲಾಗುವ ತೀರ್ಮಾನವನ್ನು ತಿಳಿಸುವುದಾಗಿ ಸಮಿತಿಗೆ ಮಾಹಿತಿಯನ್ನು ನೀಡಿದರು.

ಶ್ರೀ ಕೆ.ಸುಕುಮಾರ್, ಕಾರ್ಯದರ್ಶಿ, ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್, ಇವರು ತಮ್ಮ ಕ್ಲಬ್ ಸುಮಾರು ಮೂವತ್ತು ವರ್ಷಗಳ ಹಳೆಯ ಕ್ಲಬ್ ಆಗಿದ್ದು, ಕೋಆಪ್‌ರೇಟಿವ್ ಸೊಸೈಟೀಸ್ ಆಕ್ಟ್ ಅಡಿ ಕಾರ್ಯನಿರ್ವಹಿಸುತ್ತಿದೆ. ಸಮಿತಿಯು ತರಲಿಚ್ಛಿಸಿರುವ ವಿಧೇಯಕವು ಕ್ಲಬ್‌ಗಳ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಹೇರಲಾಗುತ್ತಿದೆ. ಈಗಾಗಲೇ ತಮ್ಮ ಕ್ಲಬ್‌ನಲ್ಲಿ ಚುನಾಯಿತ ಪ್ರತಿನಿಧಿಗಳಿಗೆ/ ಬರಹಗಾರರು/ಕಲಾವಿದರುಗಳಿಗೆ ಆದ್ಯತೆಯ ಮೇರೆಗೆ ಗೌರವ ಸದಸ್ಯತ್ವವನ್ನು ನೀಡಲಾಗುತ್ತಿದೆ. ಅದಲ್ಲದೇ ನಮ್ಮ ಕ್ಲಬ್‌ನಲ್ಲಿ ವಸ್ತ್ರ ಸಂಹಿತೆಯ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧವಿರುವುದಿಲ್ಲ. ಯಾವುದೇ ವಸ್ತ್ರ ಧರಿಸಿದರೂ ಸದಸ್ಯರಿಗೆ ನೀಡುವ ಗೌರವದಲ್ಲಿ ವ್ಯತ್ಯಾಸವಿರುವುದಿಲ್ಲ. ಆದುದರಿಂದ, ಕ್ಲಬ್‌ಗಳಿಗೆ

ಸಂಬಂಧಿಸಿದಂತೆ ಹೊಸ ಕಾಯ್ದೆ ತರುವುದರಿಂದ ಸಮಾಜದಲ್ಲಿ ದೊಡ್ಡ ಪ್ರಮಾಣದ ಬದಲಾವಣೆಯಾಗುವುದಿಲ್ಲವೆಂಬ ಅಭಿಪ್ರಾಯವನ್ನು ಸಮಿತಿಗೆ ತಿಳಿಸಿದರು.

ಶ್ರೀ ಎಸ್. ನಿರ್ಮಲ್ ಪ್ರಸಾದ್, ಬೆಂಗಳೂರು ಟರ್ಫ್ ಕ್ಲಬ್‌ನ ಕಾರ್ಯದರ್ಶಿಯವ ರು, ಬೆಂಗಳೂರು ಟರ್ಫ್ ಕ್ಲಬ್ ಕಂಪನೀಸ್ ಆಕ್ಟ್ ಅಡಿಯಲ್ಲಿ ನೋಂದಾಯಿಸಲ್ಪಟ್ಟು, ನಮ್ಮದೇ ಆದ ನಿಯಮಗಳಿಂದ ನಿಯಂತ್ರಿಸ್ಪಡುವುದರ ಜೊತೆಗೆ ಕರ್ನಾಟಕ ಸರ್ಕಾರವು ಕೂಡ ಸ್ವಲ್ಪಮಟ್ಟಿಗೆ ನಮ್ಮ ಕ್ಲಬ್ ಅನ್ನು ನಿಯಂತ್ರಿಸುತ್ತದೆ. ಸರ್ಕಾರವು ನಿಗದಿಪಡಿಸಿದಂತೆ ನಮ್ಮಲ್ಲಿ 350 ಸದಸ್ಯರಿರುತ್ತಾರೆ. ಸದಸ್ಯರ ನಿವೃತ್ತಿ ಅಥವಾ ನಿಧನದಿಂದ ತೆರವಾಗಿ ಸದಸ್ಯ ಸ್ಥಾನವನ್ನು ಪ್ರಜಾಪ್ರಭುತ್ವದ ರೀತಿಯಲ್ಲಿ ಭರ್ತಿ ಮಾಡಲಾಗುತ್ತದೆ. ಕರ್ನಾಟಕದಲ್ಲಿರುವ ಎಲ್ಲಾ ವ್ಯಕ್ತಿಗಳಿಗೂ ಕ್ಲಬ್‌ನಲ್ಲಿ ಸದಸ್ಯತ್ವ ನೀಡಲಾಗುತ್ತದೆ. ಡ್ರೆಸ್ ಕೋಡ್ ಬಗ್ಗೆ ನಮ್ಮಲ್ಲಿ ಯಾವುದೇ ನಿರ್ಬಂಧ ಇರುವುದಿಲ್ಲ. ನಾವು ವಾರ್ಷಿಕವಾಗಿ ಎಂಟ್ರಿ ಫೀ ಆಗಿ 2500/- ರೂಪಾಯಿಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯಂತೆ ಪಡೆಯುತ್ತೇವೆ. ನಮ್ಮ ಕ್ಲಬ್ 150 ಕೋಟಿ ರೂಪಾಯಿಗಳ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸುತ್ತಿದ್ದೇವೆಂದು ತಮ್ಮ ಕ್ಲಬ್ ಬಗ್ಗೆ ವಿವರಿಸಿ, ಕರಡು ವಿಧೇಯಕದ ಪ್ರತಿಯನ್ನು ಕ್ಲಬ್ ನ ಕಮಿಟಿ ಮೆಂಬರ್ಸ್ ಮುಂದಿಟ್ಟು ಚರ್ಚಿಸಿ, ನಂತರ ಸಮಿತಿಗೆ ತಮ್ಮ ಅಭಿಪ್ರಾಯವನ್ನು ತಿಳಿಸುವುದಾಗಿ ಕೋರಿಕೆ ಸಲ್ಲಿಸಿದರು.

ಶ್ರೀ ಹೆಚ್. ವಿಶ್ವನಾಥ್, ಕ್ಯಾಪ್ಟನ್, ಬೆಂಗಳೂರು ಗಾಲ್ಫ್ ಕ್ಲಬ್, ಇವರು ಗಾಲ್ಫ್ ಕ್ಲಬ್ 139 ವರ್ಷ ಹಳೆಯ ಕ್ಲಬ್ ಆಗಿದ್ದು, 2000 ಜನರು ಸದಸ್ಯತ್ವಕ್ಕಾಗಿ ಕಳೆದ 20 ವರ್ಷಗಳಿಂದ ಕಾಯುತ್ತಿದ್ದಾರೆ. ನಾವು ಜನ ಪ್ರತಿನಿಧಿಗಳಿಗೆ ಸದಸ್ಯತ್ವ ನೀಡುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ, ಈಗಾಗಲೇ ನಮ್ಮಲ್ಲಿ ಹಲವರು ಸಚಿವರು, ಎಂ.ಎಲ್.ಎ ಮತ್ತು ಎಂ.ಎಲ್.ಸಿ ಗಳು ಸದಸ್ಯರಾಗಿರುತ್ತಾರೆ. ಆದರೆ ಹೊಸ ಸದಸ್ಯತ್ವ ನೀಡುವಾಗ ನಾವು ಈಗಾಗಲೇ 20 ವರ್ಷಗಳಿಂದ ಕಾಯುತ್ತಿರುವವರಿಗೆ ಆದ್ಯತೆಯನ್ನು ನೀಡಬೇಕಾಗುತ್ತದೆ. ಡ್ರೆಸ್ ಕೋಡ್ ಬಗ್ಗೆ ಹೇಳುವುದಾದರೆ, ಗಾಲ್ಫ್ ಕ್ರೀಡೆಯನ್ನು ಧೋತಿ ಹಾಕಿಕೊಂಡು ಆಡಲು ಸಾಧ್ಯವಾಗುವುದಿಲ್ಲ, ದಂಡ ವಿಧಿಸುವ ವಿಷಯದಲ್ಲಿ ಕ್ಲಬ್‌ನವರನ್ನು ಕ್ರಿಮಿನಲ್‌ಗಳಂತೆ ನೋಡಿದಂತಾಗುತ್ತದೆ, ವಿಧೇಯಕದ ಪ್ರತಿ ನಮಗೆ ಈಗ ತಲುಪಿರುವುದರಿಂದ, ಇದನ್ನು ನಮ್ಮ ಎಜಿಎಂ ನಲ್ಲಿಟ್ಟು ಚರ್ಚಿಸಿ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆಂದು ಕಾಲಾವಕಾಶ ಕೋರಿದರು.

ಶ್ರೀ ವಿ.ಟಿ.ಶಂಕರನಾರಾಯಣ ರೆಡ್ಡಿ, ಕಾರ್ಯದರ್ಶಿ, ಹೆಚ್.ಎಸ್.ಆರ್. ಕ್ಲಬ್ ಇವರು ಜನಪ್ರತಿನಿಧಿಗಳಿಗೆ ಸದಸ್ಯತ್ವ ನೀಡುವ ವಿಚಾರದಲ್ಲಿ, ಕ್ಲಬ್ ಇರುವ ಪ್ರದೇಶದ ವ್ಯಾಪ್ತಿಯಲ್ಲಿರುವವರಿಗೆ ಸದಸ್ಯತ್ವವನ್ನು ನೀಡುತ್ತೇವೆಂದು. ನಮ್ಮಲ್ಲಿ ಯಾವುದೇ ಡ್ರೆಸ್

ಕೋಡನ್ನು ಪಾಲಿಸುತ್ತಿಲ್ಲವೆಂದು ತಿಳಿಸುತ್ತಾ, ವಿಧೇಯಕದ ಪ್ರತಿ ನಮಗೆ ಈಗ ತಲುಪಿರುವುದರಿಂದ, ಇದನ್ನು ನಮ್ಮ ಎಜಿಎಂ ನಲ್ಲಿಟ್ಟು ಚರ್ಚಿಸಿ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆಂದು ಕಾಲಾವಕಾಶ ಕೋರಿದರು.

ಶ್ರೀ ಪ್ರಸನ್ನ ಕುಮಾರ್, ಸದಾಶಿವನಗರ ಕ್ಲಬ್‌ನ ಕಾರ್ಯದರ್ಶಿಯವರು ಕೂಡ ಕರಡು ವಿಧೇಯಕದ ಪ್ರತಿಯನ್ನು ತಮ್ಮ ಎ.ಜಿ.ಎಂ ಮುಂದಿಟ್ಟು ಚರ್ಚಿಸಿ, ನಂತರ ತಮ್ಮ ಅಬಿಪ್ರಾಯ ತಿಳಿಸುವುದಾಗಿ ಕಾಲಾವಕಾಶವನ್ನು ಕೋರಿದರು.

ಸಮಿತಿಯು ಸಭೆಗೆ ಹಾಜರಾಗಿದ್ದ ಎಲ್ಲಾ ಕ್ಲಬ್‌ಗಳ ಪದಾಧಿಕಾರಿಗಳಿಗೆ ಕರಡು ವಿಧೇಯಕವನ್ನು ತಮ್ಮ ಎ.ಜಿ.ಎಂ ನಲ್ಲಿಟ್ಟು ಚರ್ಚಿಸಿ, ತಮ್ಮ ಅಮೂಲ್ಯವಾದ ಅಭಿಪ್ರಾಯಗಳನ್ನು ನೀಡುವಂತೆ ತಿಳಿಸಿತು.

2012ರಲ್ಲಿ ಸಮಿತಿಯು ವರದಿ ನೀಡಿ, ಶಿಫಾರಸ್ಸು ಮಾಡಿರುವುದನ್ನು ಅನುಷ್ಠಾನಗೊಳಿಸದಿರುವ ಬಗ್ಗೆ ಸಮಿತಿಯು ತೀವ್ರ ಅಸಮಧಾನ ವ್ಯಕ್ತ ಪಡಿಸುತ್ತಾ, ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು, ಶಿಫಾರಸ್ಸುಗಳನ್ನು ಬೈಲಾದಲ್ಲಿ ಸೇರ್ಪಡೆಗೊಳಿಸಲು ಯಾವುದೇ ಕ್ಲಬ್‌ಗಳಿಗೆ ಇಲಾಖೆಯಿಂದ ನಿರ್ದೇಶನ ಹೋಗಿರುವುದಿಲ್ಲ, ಇದು ಅಧಿಕಾರಿಗಳ ಬೇಜವಾಬ್ದಾರಿತನವೆಂದು ಸಮಿತಿಯು ಆಕ್ಷೇಪಿಸಿತು.

ಕ್ಲಬ್‌ಗಳಿಗೆ ಜಮೀನು/ನಿವೇಶನಗಳನ್ನು ನೀಡುವ ಸಂದರ್ಭದಲ್ಲಿ ಹಲವು ಕ್ಲಬ್‌ಗಳು ಕೇವಲ ರೂ.1 ರಂತೆ ಲೀಸ್ ಪಡೆದಿರುತ್ತವೆ. ಇದನ್ನು ಹೆಚ್ಚಿಸುವ ಸಂಬಂಧ ಸಮಿತಿಯು ಇಲಾಖೆಯ ಸ್ಪಷ್ಟೀಕರಣ ಬಯಸಿತು.

ಕಾನೂನು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು, ಲ್ಯಾಂಡ್ ಗ್ರಾಂಟ್ ರೂಲ್ ನಲ್ಲಿ ಶೇಕಡ 10ರಷ್ಟು ಗೈಡೆನ್ಸ್ ವ್ಯಾಲ್ಯೂವನ್ನು ಪ್ರಾಸ್ಪೆಕ್ಟೀವ್ ಆಗಿ ವಿಧಿಸಬಹುದು. ಇದು ದಿನಾಂಕ 09.06.2015ರಿಂದ ಜಾರಿಗೆ ಬಂದಿರುತ್ತದೆ. ಆದ್ದರಿಂದ, ಹೊಸದಾಗಿ ಕ್ಲಬ್‌ಗಳಿಗೆ ಲೀಸ್ ನೀಡುವಾಗ ಶೇಕಡ 10ರಷ್ಟು ಗೈಡೆನ್ಸ್ ವ್ಯಾಲ್ಯೂ ವಿಧಿಸಬಹುದೇ ಹೊರತು ಈಗಾಗಲೇ ಲೀಸ್ ನೀಡಿರುವ ಕ್ಲಬ್‌ಗಳಿಗೆ ಇದನ್ನು ಅನ್ವಯಿಸಲು ಸಾಧ್ಯವಾಗುವುದಿಲ್ಲ. ಸರ್ಕಾರ ಮತ್ತು ಕ್ಲಬ್‌ನ ನಡುವೆ ಲೀಸ್ ಕರಾರಿನಲ್ಲಿ ಲೆಸ್ಸೀ ಶಲ್ ಪೇ ದಿ ರಿವೈಸ್ಡ್ ರೇಟ್ ಅಸ್ ಅಂಡ್ ವೆನ್ ಇನ್‌ಕ್ರೀಸ್ಡ್ ಬೈ ದಿ ಗವರ್ನಮೆಂಟ್ ಎಂದಾಗ ಮಾತ್ರ ಶೇಕಡ 10ನ್ನು ವಿಧಿಸಬಹುದು ಎಂದು ಹೆಚ್ಚಿಸಬಹುದೆಂದು ಸಮಿತಿಗೆ ತಿಳಿಸಿದರು.

ಸಮಿತಿಯು ಕಂದಾಯ ಕಾಯ್ದೆಯಲ್ಲಿ ಈಗಾಗಲೇ ಗೈಡೆನ್ಸ್ ವ್ಯಾಲ್ಯೂ ಮೇಲೆ ಶೇ.7ರ ದರದಲ್ಲಿ ಬಾಡಿಗೆ ವಿಧಿಸಬೇಕೆಂದಿದ್ದರೂ ಅದನ್ನು ಏಕೆ ವಿಧಿಸುತ್ತಿಲ್ಲವೆಂದು ಸ್ಪಷ್ಟೀಕರಣ ಬಯಸಿತು.

ಅಪರ ಮುಖ್ಯ ಕಾರ್ಯದರ್ಶಿ, ಕಾನೂನು ಇಲಾಖೆ ಇವರು, ಸರ್ಕಾರದಿಂದ ಕ್ಲಬ್‌ಗಳಿಗೆ ನೀಡಿದಂತಹ ಭೂಮಿಯನ್ನು 2 ರೀತಿ ವಿಂಗಡಿಸಬಹುದು, ಒಂದು ಲ್ಯಾಂಡ್ ಗ್ರಾಂಟ್ ರೂಲ್ಸ್ ಬಂದ ಮೇಲೆ ಒಂದು ರೀತಿ ಮತ್ತೊಂದು ಬ್ರಿಟಿಷರ ಕಾಲದಲ್ಲಿ ಕೊಟ್ಟಿರತಕ್ಕಂತ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಅಡಿಯಲ್ಲಿ ಬರುತ್ತದೆ. ಲ್ಯಾಂಡ್ ಗ್ರಾಂಟ್ ರೂಲ್ಸ್ 1969ರ ಪ್ರಕಾರ ಭೂಮಿಯನ್ನು ಕೊಟ್ಟಿದ್ದರೆ ಶೇ7 ರಷ್ಟನ್ನು ವಿಧಿಸಬಹುದು. ಗುತ್ತಿಗೆ ಪಡೆದ ಕ್ಲಬ್‌ನವರು ಸದರಿ ಜಾಗದಲ್ಲಿ ಶಾಶ್ವತ ಕಟ್ಟಡಗಳನ್ನು ಕಟ್ಟಲು ಅಥವಾ ಸದರಿ ಜಾಗವನ್ನು ಉಪ ಗುತ್ತಿಗೆಗೆ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸರ್ಕಾರ ಹಾಗೂ ಕ್ಲಬ್ ನಡುವೆ ಕರಾರು ಒಪ್ಪಂದ ಮಾಡಿಕೊಳ್ಳುವ ಸಂದರ್ಭದಲ್ಲಿ ಮೇಲಿನ ವಿಚಾರಗಳಿಗೆ ಸಂಬಂಧಿಸಿದಂತೆ ನಿರ್ಬಂಧವನ್ನು ವಿಧಿಸಿದಲ್ಲಿ, ಕ್ಲಬ್‌ನವರು ಸರ್ಕಾರದಿಂದ ಪಡೆಯಲಾದ ಜಾಗವನ್ನು ಉಪ ಗುತ್ತಿಗೆ ನೀಡಲು, ಅಡಮಾನ ಮಾಡುವುದಕ್ಕೆ ಹಾಗೂ ಗುತ್ತಿಗೆಯ ಹಕ್ಕನ್ನು ವರ್ಗಾವಣೆ ಮಾಡುವುದನ್ನು ನಿರ್ಬಂದಿಸಲಾಗಿರುತ್ತದೆ. ಆದರೆ, TP act ನಲ್ಲಿ Lessee can transfer or sub lease the property ಎಂದು ಬರುತ್ತದೆ. Section 108ರಲ್ಲಿ 'Lessee shall use the property for the pupose for which they used, without the consent of the lessor he cannot erect permanent structure on the lease property'. It is a central Act. Land Grant Rules ಬರುವುದಕ್ಕೆ ಮೊದಲು ಕೊಟ್ಟಿರುವ conditions violate ಆದರೆ section 111 of the property Actನಲ್ಲಿ lease cancel ಮಾಡುವುದಕ್ಕೆ ಹಾಗೂ any of the conditions violate ಮಾಡಿದ್ದರೆ section 111ರಲ್ಲಿ determine ಮಾಡಬಹುದು. Land Grant Rules ಬಂದ ಮೇಲೆ violate ಮಾಡಿದ್ದರೆ section 25(2)ನಡಿಯಲ್ಲಿ action ತೆಗೆದುಕೊಳ್ಳಬಹುದೆಂದು ಸಮಿತಿಗೆ ಮಾಹಿತಿ ನೀಡಿದರು.

ಬೆಂಗಳೂರು ಕ್ಲಬ್ ಸುಮಾರು 135 ವರ್ಷಗಳಿಂದ ನಡೆಯುತ್ತಿದ್ದು, ಆದರೆ ಜಾಗದ ಒಡೆತನದ ಬಗ್ಗೆ ಇನ್ನೂ ಸ್ಪಷ್ಟತೆ ಇರುವುದಿಲ್ಲವೆಂದು ಮದರ್ ಡೀಡ್ ಇಲ್ಲದೆಯೆ ಕ್ಲಬ್ ನಡೆಸಲಾಗುತ್ತಿದೆಯೆಂದು, ಸದರಿ ಕ್ಲಬ್‌ನವರು ಸುಳ್ಳು ದಾಖಲಾತಿಗಳನ್ನು ನೀಡಿ ಪರವಾನಗಿಯನ್ನು ಪಡೆದಿರುತ್ತಾರೆಂದು ಸಮಿತಿಯು ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತಲ್ಲದೆ,

ಕ್ಲಬ್‌ನವರಿಗೆ ಗುತ್ತಿಗೆ ಅಥವಾ ಬಾಡಿಗೆಯ ಆಧಾರದಲ್ಲಿ ಭೂಮಿಯನ್ನು ಕೊಟ್ಟಿದ್ದಲ್ಲಿ, ಯಾವ ಉದ್ದೇಶಕ್ಕಾಗಿ ಭೂಮಿಯನ್ನು ನೀಡಲಾಗಿದೆಯೆಂದು ಪರಿಶೀಲಿಸಬೇಕೆಂದು ಕ್ಲಬ್‌ನ ಧ್ಯೇಯೋಧ್ಯೇಶ ಉಲ್ಲಂಘಿಸಿದಲ್ಲಿ ಅಂತಹ ಕ್ಲಬ್‌ಗಳ ಮೇಲೆ ಕ್ರಮ ಜರುಗಿಸಬೇಕೆಂದು ಸಮಿತಿಯು ಇಲಾಖಾಧಿಕಾರಿಗಳಿಗೆ ಸೂಚನೆ ನೀಡಿತು.

ಕ್ಲಬ್‌ಗಳ ಕಾರ್ಯವೈಖರಿಯನ್ನು ಪರಿಶೀಲಿಸಬೇಕೆಂದು ಹಾಗೂ ಸರ್ಕಾರ ಕ್ಲಬ್‌ಗಳಿಗೆ ಭೂಮಿಯನ್ನು ನೀಡುವಾಗ ಮಾಡಿಕೊಳ್ಳಲಾದ ಕರಾರು ಒಪ್ಪಂದದಲ್ಲಿನ ಷರತ್ತು ಮತ್ತು ನಿರ್ಬಂದನೆಗಳನ್ನು ಉಲ್ಲಂಘಿಸಿದಲ್ಲಿ ಸದರಿಯವರಿಗೆ ನೀಡಲಾದ ಪರವಾನಗಿಯನ್ನು ರದ್ದುಪಡಿಸಬೇಕೆಂದು ಸಹ ಸಮಿತಿಯು ಅಧಿಕಾರಿಗಳಿಗೆ ಸೂಚಿಸಿತು.

ಕಾಯ್ದೆಯಲ್ಲಿನ ಅವಕಾಶದಂತೆ ಇನ್ನು ಮುಂದೆ ಕ್ಲಬ್‌ಗಳ ಗುತ್ತಿಗೆಯನ್ನು ನವೀಕರಿಸುವ ಸಮಯದಲ್ಲಿ ಕಡ್ಡಾಯವಾಗಿ ಗೈಡೆನ್ಸ್ ವ್ಯಾಲ್ಯು ಮೇಲೆ ಶೇ 10ರ ದರದಲ್ಲಿ ಬಾಡಿಗೆಯನ್ನು ವಸೂಲು ಮಾಡಬೇಕೆಂದು ಸಮಿತಿಯು ಸೂಚಿಸಿತು.

ನಗರದಲ್ಲಿ ಸಾಕಷ್ಟು ರಿಕ್ರೀಯೇಷನ್ ಕ್ಲಬ್‌ಗಳಿದ್ದು, ಕೆಲವು ಕ್ಲಬ್‌ಗಳಲ್ಲಿ ಜೂಜು ಸಹ ನಡೆಯುತ್ತಿದ್ದು, ಇದರಿಂದಾಗಿ ಬಹಳಷ್ಟು ಬಡ ಜನರು ಹಾಳಾಗುತ್ತಿದ್ದಾರೆಂದು , ಆದರಿಂದ ಅವುಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಸೂಚಿಸಿತು, ಅದಕ್ಕೆ ಅಪರ ಮುಖ್ಯ ಕಾರ್ಯದರ್ಶಿ, ಕಾನೂನು ಇಲಾಖೆ, ಇವರು ಸೊಸೈಟಿಸ್ ರಿಜೇಸ್ಟೇಷನ್ ಆಕ್ಟ್ ಕಲಂ 25ರಲ್ಲಿ ಇದಕ್ಕೆ ಅವಕಾಶವಿದೆಯೆಂದು ಸಮಿತಿಗೆ ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಕ್ಲಬ್‌ಗಳಲ್ಲಿ ಅದರಲ್ಲೂ ಕಮರ್ಷಿಯಲ್ ಕ್ಲಬ್‌ಗಳಲ್ಲಿ ನಡೆಯುತ್ತಿರುವ ಅನೈತಿಕ ವ್ಯವಹಾರಗಳಿಂದ ಜನ ಸಾಮನ್ಯರಿಗೆ ತುಂಬಾ ತೊಂದರೆಯಾಗಿದ್ದು, ಇದರಿಂದ ಅತ್ಯಹತ್ಯೆಯಂತ ಪ್ರಕರಣಗಳು ಹೆಚ್ಚಾಗಿರುತ್ತದೆ ಎಂದು ಆದುದರಿಂದ, ಎಲ್ಲಾ ಕ್ಲಬ್‌ಗಳು ಕಡ್ಡಾಯವಾಗಿ ಸಿ.ಸಿ.ಟಿ.ವಿ. ಕ್ಯಾಮರ್‌ಗಳನ್ನು ಅಳವಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿತು. ಇದರಿಂದ ಕ್ಲಬ್‌ನಲ್ಲಿ ಯಾವುದೇ ತರಹದ ವ್ಯತ್ಯಾಸ ಉಂಟಾದಲ್ಲಿ ಪತ್ತೆ ಮಾಡಲು ಸಹಾಯಕವಾಗುವುದಲ್ಲವೆ, ಕ್ಲಬ್‌ಗಳ ಮೇಲೆ ಕ್ರಮ ಜರುಗಿಸಲು ಸಹ ಸಹಾಯಕವಾಗುತ್ತದೆಂದು ಸಮಿತಿಯು ಅಭಿಪ್ರಾಯ ವ್ಯಕ್ತಪಡಿಸಿತು.

ಕಂದಾಯ ಇಲಾಖೆಯ ವತಿಯಿಂದ ಸಿದ್ದಪಡಿಸಲಾದ ಕರಡು ವಿಧೇಯಕದ ಬಗ್ಗೆ ಚರ್ಚೆಯನ್ನು ಮುಂದುವರೆಸುತ್ತಾ, ಸದರಿ ವಿಧೇಯಕದ ಬಗ್ಗೆ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ವಿಶೇಷ ಕಾರ್ಯದರ್ಶಿಯವರ ಅಭಿಪ್ರಾಯವನ್ನು ಬಯಸಿತು. ಕರಡು ವಿಧೇಯಕದಲ್ಲಿ ಸಾರ್ವಜನಿಕ ಸ್ಥಳಗಳಿಗೆ

ಪ್ರವೇಶಿಸುವ ಸಾರ್ವಜನಿಕರು ಧರಿಸುವ ವಸ್ತ್ರಕ್ಕೆ ಸಂಬಂಧಿಸಿದಂತೆ ಯಾವುದೇ ತರಹದ ನಿರ್ಬಂದವಿರಬಾರದೆಂದು ಹೇಳಲಾಗಿದೆಯೆಂದು ಇದು ಸಂವಿಧಾನದ ಅನುಗುಣವಾಗಿದೆಯೆಂದು, ಆದರೆ ಕ್ಲಬ್‌ಗಳು ಇಷ್ಟೇ ಸದಸ್ಯತ್ವ ಶುಲ್ಕ ಪಡೆಯಬೇಕೆಂದು ನಿರ್ಬಂದಿಸುವುದು, ಸರ್ಕಾರದಿಂದ ಅನುಮತಿ ಪಡೆಯಬೇಕೆಂದು ಸೂಚನೆ ನೀಡುವುದು ಸಂವಿಧಾನದ ಪ್ರಕಾರ ಸೂಕ್ತವಾಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಅದರ ಬದಲಾಗಿ ಸದಸ್ಯತ್ವ ಶುಲ್ಕವನ್ನು ಅನುಚಿತವಾಗಿ ನಿಗದಿಪಡಿಸಬಾರದೆಂದು ಅದು ಕ್ಲಬ್‌ಗಳು ನೀಡುವ ಸೇವೆ ಹಾಗೂ ಸವಲತ್ತುಗಳಿಗೆ ಅನುಗುಣವಾಗಿರಬೇಕೆಂದು ಕಾನೂನು ತರುವುದು ಸೂಕ್ತವಾಗಿರುತ್ತೆಂದು ವಿಶೇಷ ಕಾರ್ಯದರ್ಶಿಯವರು ಸಮಿತಿಗೆ ತಿಳಿಸಿರುತ್ತಾರೆ. ಮುಂದುವರೆದಂತೆ, ಕಾಯ್ದೆಯಲ್ಲಿ ವಸ್ತ್ರ ಸಂಹಿತೆಯ ಬಗ್ಗೆ ಭಾರತೀಯ ದಿರಿಸನ್ನು ಧರಿಸಬೇಕೆಂದು ಹೇಳಲಾಗಿರುತ್ತದೆ. ವಿದೇಶಿ ವಸ್ತ್ರಗಳನ್ನು ಧರಿಸಬಾರದೆಂದು ಕಾಯ್ದೆ ಮಾಡುವುದು ಸೂಕ್ತವಲ್ಲವೆಂದು ಅದರ ಬದಲಿಗೆ ಪಂಚೆ, ದೋತಿ ಹಾಕಿಕೊಂಡು ಬರುವುದಕ್ಕೆ ಅವಕಾಶ ಮಾಡಿ ಎಂದು ಹೇಳಬಹುದೆಂದು ಸಮಿತಿಗೆ ತಿಳಿಸಿದರು.

ಕರಡು ವಿಧೇಯಕದಲ್ಲಿ ಜನಪ್ರತಿನಿಧಿಗಳಿಗೆ ಕ್ಲಬ್‌ನ ಸದಸ್ಯತ್ವ ನೀಡುವ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಈ ವಿಷಯದ ಬಗ್ಗೆ ಯಾವ ಕ್ಲಬ್‌ನವರು ಸರ್ಕಾರದಿಂದ ರಿಯಾಯಿತಿ ದರದಲ್ಲಿ ಸರ್ಕಾರಿ ಜಾಗವನ್ನು ತೆಗೆದುಕೊಂಡಿರುತ್ತಾರೋ ಅಂತವರು ಜನಪ್ರತಿನಿಧಿಗಳಿಗೆ ಸದಸ್ಯತ್ವವನ್ನು ನಿರಾಕರಿಸುವಂತಿಲ್ಲವೆಂದು ಕಾನೂನು ತರುವುದು ಸೂಕ್ತವೆಂದು ಅಭಿಪ್ರಾಯವನ್ನು ಕಾನೂನು, ಸಂಸದೀಯ ಮತ್ತು ಶಾಸನ ರಚನಾ ಇಲಾಖೆಯ ವಿಶೇಷ ಕಾರ್ಯದರ್ಶಿಯವರು ವ್ಯಕ್ತಪಡಿಸಿರುತ್ತಾರೆ.

19.12.2015ರ ಸಭೆಯಲ್ಲಿ ಕ್ಲಬ್‌ಗಳಲ್ಲಿ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಗಟ್ಟಲು ಯಾವ ಕ್ರಮ ತೆಗೆದುಕೊಳ್ಳಬೇಕು, ಅದನ್ನು ನಿಯಂತ್ರಣ ಮಾಡುವುದಕ್ಕೆ ಪ್ರತ್ಯೇಕವಾದ ಒಂದು ಕಾನೂನನ್ನು ರೂಪಿಸಲು ಸಾಧ್ಯವಿದೆಯೇ ಎಂಬ ಬಗ್ಗೆ ಸಮಿತಿಯು ಅಭಿಪ್ರಾಯವನ್ನು ಕೋರಿತು.

ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಈ ಬಗ್ಗೆ ದಿನಾಂಕ 12.09.2013ರಲ್ಲಿ Controlling of all places of public amusement ಗೆ ಸಂಬಂಧಿಸಿದಂತೆ game of chance and game of skill ಇರತಕ್ಕಂತಹ ಎಲ್ಲಾ ಕ್ಲಬ್‌ಗಳು ಗೃಹ ಇಲಾಖೆಯಿಂದ ಲೈಸೆನ್ಸ್ ಪಡೆದುಕೊಳ್ಳಬೇಕೆಂದು ನಿಯಮವನ್ನು ಮಾಡಿ ಸರ್ಕಾರಿ ಆದೇಶವೊಂದನ್ನು

ಹೊರಡಿಸಲಾಗಿತ್ತು. ಸದರಿ ಆದೇಶವನ್ನು ಎಲ್ಲಾ ಕ್ಲಬ್‌ಗಳು ದಿನಾಂಕ 03.12.2013ರಂದು ಹೈಕೋರ್ಟಿನಲ್ಲಿ ಪ್ರಶ್ನೆ ಮಾಡಿದರು. ಹೈಕೋರ್ಟಿನವರು "Police is at liberty to monitor the activities of the club and also to take action if there are illegal activities carried on in the premises, but with the direction to the respondent not to insist on the petitioner to secure license in respect of the activities stated to have been carried out by the petitioner. However it is made clear that respondent should monitor the activities and take action if the petitioner indulges in any illegal activities in the club premises" ಎಂದು ಆದೇಶ ಮಾಡಿದೆ

ಗೃಹ ಇಲಾಖೆಯು ಸದರಿ ಆದೇಶವನ್ನು ಕೋರ್ಟಿನ ಆದೇಶದಿಂದಾಗಿ ಹಿಂಪಡೆಯಲಾಯಿತು. ಈ ಬಗ್ಗೆ ಇಲಾಖೆಯಿಂದ ಅಪೀಲ್ ಹೋಗಿರುವುದಿಲ್ಲ. ಆದರೆ ನ್ಯಾಯಾಲಯದಲ್ಲಿ ಪ್ರಕರಣ ಇಲಾಖೆ ಪರವಾಗಿ ಇತ್ಯರ್ಥವಾಗದಿದ್ದರೂ ಸಹ ರೈಡ್ ಮಾಡುವುದನ್ನು ನಿಲ್ಲಿಸಿಲ್ಲ. 8700 ಪ್ರಕರಣಗಳನ್ನು ಗ್ಯಾಂಬ್ಲಿಂಗ್‌ಗಾಗಿ ದಾಖಲು ಮಾಡಲಾಗಿದ್ದು, ಎಂಟು ಕೋಟಿ ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆ. ರಿಜಿಸ್ಟ್ರೇಷನ್ ಆಗಿರುವ ಮತ್ತು ಆಗದಿರುವ ಎಲ್ಲಾ ಕ್ಲಬ್‌ಗಳನ್ನು ದಾಳಿ ಮಾಡಲಾಗಿದೆ. ರಿಜಿಸ್ಟ್ರೇಷನ್ ಆಗಿರುವ ಕ್ಲಬ್‌ಗಳಲ್ಲಿ 61 ಪ್ರಕರಣಗಳನ್ನು ದಾಖಲಿಸಲಾಗಿದೆ. ಸುಮಾರು 1200 ಜನರನ್ನು ಬಂಧಿಸಲಾಗಿದೆ ಹಾಗೂ 71 ಲಕ್ಷ ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆಯೆಂದು ಗೃಹ ಇಲಾಖೆಯವರು ಸಮಿತಿಗೆ ವಿವರಿಸಿದರು.

ಕಾನೂನು ಬಾಹಿರ ಚಟುವಟಿಕೆಗಳ ಸಂಖ್ಯೆ ಪ್ರತಿ ವರ್ಷ ಹೆಚ್ಚಾಗುತ್ತಲೇ ಇರುವುದರಿಂದ, ಇದನ್ನು ಕಡಿಮೆ ಮಾಡಲು ಹಾಗೂ ನಿಯಂತ್ರಣ ಮಾಡಲು ಪ್ರತ್ಯೇಕ ಕಾನೂನು ತರಲು ಎಲ್ಲಾ ಇಲಾಖೆಗಳ ಅಭಿಪ್ರಾಯವನ್ನು ನೀಡಲು ಸಮಿತಿಯು ಸೂಚಿಸಿತು.

ಸಭೆಯಲ್ಲಿ ಹಾಜರಿದ್ದ, ಗೃಹ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆಯ ಅಧಿಕಾರಿಗಳು ಕ್ಲಬ್‌ಗಳಲ್ಲಿ ಕಾನೂನುಬಾಹಿರ

ಚಟುವಟಿಕೆಗಳನ್ನು ತಡೆಯಲು ಹಾಗೂ ನಿಯಂತ್ರಿಸಲು ದಂಡನೆ ಪ್ರಮಾಣ ಹೆಚ್ಚಿಸುವುದು. ಲೈಸೆನ್ಸ್ ರದ್ದು ಮಾಡುವುದು ಈ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲು ಪ್ರತ್ಯೇಕ ಕಾನೂನು ತರುವುದು ಸೂಕ್ತವೆಂದು ಸಮಿತಿಗೆ ತಿಳಿಸಿದರು.

ಅದರಂತೆ, ಸಮಿತಿಯು ಎಲ್ಲಾ ಇಲಾಖೆಯ ಅಭಿಪ್ರಾಯವನ್ನು ಪಡೆದು, ಒಂದು ಉತ್ತಮವಾದ ಕಾನೂನನ್ನು ಜಾರಿಗೆ ತರಲು, ಒಂದು ಕರಡು ವಿಧೇಯಕವನ್ನು ತರಲು ಕಂದಾಯ ಇಲಾಖೆಗೆ ಸೂಚಿಸಿತು.

ದಿನಾಂಕ 23.03.2016ರಂದು ನಡೆದ ಸಭೆಯಲ್ಲಿ ಕರಡು ವಿಧೇಯಕವನ್ನು ಎಲ್ಲಾ ಇಲಾಖೆಗಳಿಗೂ ಕಳುಹಿಸಲಾಗಿದ್ದು, ಆ ಇಲಾಖೆಗಳಿಂದ ಸಲಹೆಗಳನ್ನು ನಿರೀಕ್ಷಿಸಲಾಗಿದೆಯೆಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರು ಸಮಿತಿಗೆ ತಿಳಿಸಿದರು.

## ಅಧ್ಯಾಯ – 6

ರಾಜ್ಯದಲ್ಲಿರುವ ಕ್ಲಬ್‌ಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳಿಗೆ ಸಂಬಂಧಿಸಿದಂತೆ ಅವುಗಳ ಕಾರ್ಯವೈಖರಿ ಮತ್ತು ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸುವ ಸಂಬಂಧ ಸಮಗ್ರ ವಿಚಾರಣೆ ನಡೆಸಿ ಸಲಹೆ ಸೂಚನೆಗಳೊಂದಿಗೆ ವರದಿಯನ್ನು ಸಲ್ಲಿಸಲು ರಚಿಸಲಾದ ಸದನ ಸಮಿತಿಯು ಹೆಚ್ಚಿನ ಅಧ್ಯಯನಕ್ಕಾಗಿ ಕ್ಲಬ್ ಸದನ ಸಮಿತಿಯ ಅಧ್ಯಕ್ಷರಾದ ಶ್ರೀ ಎನ್.ಎ. ಹ್ಯಾರಿಸ್, ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರುಗಳಾದ:-

1. ಡಾ: ಅಜಯ್ ಧರ್ಮಸಿಂಗ್,
2. ಶ್ರೀ ಟಿ. ರಘುಮೂರ್ತಿ
3. ಶ್ರೀ ಗುರುಪಾಟೀಲ ಶಿರವಾಳ್
4. ಶ್ರೀ ಬಿ.ವೈ ರಾಘವೇಂದ್ರ
5. ಶ್ರೀ ಹೆಚ್.ಡಿ. ರೇವಣ್ಣ
6. ಶ್ರೀ ವಾಸು

ಇವರುಗಳನ್ನೊಳಗೊಂಡಂತೆ ಸಮಿತಿಯು ದಿನಾಂಕ:04.01.2016 ರಿಂದ 06.01.2016 ರವರೆಗೆ ನವದೆಹಲಿಗೆ ಅಧ್ಯಯನ ಪ್ರವಾಸ ಕೈಗೊಂಡಿತ್ತು.

(1)ಸಮಿತಿಯ ನವದೆಹಲಿ ಭೇಟಿ

ಸಮಿತಿಯು ದಿನಾಂಕ: 04.01.2016 ರಂದು ಲೋಕಸಭೆ Secretary General ಶ್ರೀ ಅನುಪ್ ಮಿಶ್ರ ರವರನ್ನು ಭೇಟಿ ಮಾಡಿ ನವದೆಹಲಿಯಲ್ಲಿರುವ ವಿವಿಧ ಕ್ಲಬ್‌ಗಳ ಕಾರ್ಯವೈಖರಿ, ಸದಸ್ಯರುಗಳ ವಸ್ತ್ರ ಸಂಹಿತೆಗಳ ಬಗ್ಗೆ ಮಾಹಿತಿ ಪಡೆಯಿತು.

ನವದೆಹಲಿಯಲ್ಲಿರುವ Constitution Club ಲೋಕಸಭೆಯ ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದೆಯೆಂದು, ಸಂಸತ್ತಿನ ಎಲ್ಲಾ ಸದಸ್ಯರು ಈ ಕ್ಲಬ್‌ನ ಸದಸ್ಯರಾಗಿರುತ್ತಾರೆಂದು, ಈ ಕ್ಲಬ್‌ಗೆ ಕೇಂದ್ರದ ಲೋಕೋಪಯೋಗಿ ಇಲಾಖೆಯವರು ಧನ ಸಹಾಯ ಒದಗಿಸಿದ್ದು, ಇಲ್ಲಿನ ಸದಸ್ಯರುಗಳಿಗೆ ಯಾವುದೇ ವಸ್ತ್ರ ಸಂಹಿತೆ ಇರುವುದಿಲ್ಲ ಹಾಗೂ ಸಂಸತ್ತಿನ ಸದಸ್ಯರುಗಳು ಅಲ್ಪ ಪ್ರಮಾಣದ ಸದಸ್ಯತ್ವದ ಶುಲ್ಕವನ್ನು ಪಾವತಿಸಿ ಸದಸ್ಯರಾಗಬಹುದಾಗಿದೆ.

ನವದೆಹಲಿಯಲ್ಲಿರುವ ಜಮ್‌ಖಾನ್ ಕ್ಲಬ್ 100 ವರ್ಷಗಳ ಹಳೆಯದಾಗಿದ್ದು, ಅಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಯಾವುದೇ ವಸ್ತ್ರ ಸಂಹಿತೆಯ ಕಾನೂನು ಇರುವುದಿಲ್ಲವೆಂದು ತಿಳಿಸಿದರು, ಮುಂದುವರೆದಂತೆ ನವದೆಹಲಿಯಲ್ಲಿರುವ ಕ್ಲಬ್‌ಗಳು ಸೊಸೈಟಿಸ್ ರಿಜಿಸ್ಟ್ರೇಷನ್ ಆಕ್ಟ್ (Societies Registration Act) ನಲ್ಲಿ ನೋಂದಾಯಿಸಲ್ಪಟ್ಟಿರುತ್ತವೆಂದು, ಕ್ಲಬ್‌ಗಳ ಡ್ರೆಸ್‌ಕೋಡ್‌ಗೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟ ಕಾಯ್ದೆ ರೂಪಿಸಲಾಗಿರುವುದಿಲ್ಲವೆಂಬುದು ತಿಳಿದು ಬಂದಿರುತ್ತದೆ.

2. Constitution Club of India ಗೆ ಭೇಟಿ.

ಸಮಿತಿಯು ನವದೆಹಲಿಯಲ್ಲಿರುವ Constitution Club of India ಸಂಸ್ಥೆಗೆ ದಿನಾಂಕ: 04.01.2016 ರಂದು ಭೇಟಿ ನೀಡಿ ಅದರಲ್ಲಿ ಕ್ಲಬ್‌ನ ಸದಸ್ಯರಲ್ಲೊಬ್ಬರಾದ ಶ್ರೀ ರಾಜೀವ್ ಪ್ರತಾಪ್ ರೂಢಿ, ಮಾನ್ಯ ಕೇಂದ್ರ ಸಚಿವರು ಹಾಗೂ ಶ್ರೀ ಅರವಿಂದ ಕುಮಾರ್, ವ್ಯವಸ್ಥಾಪಕರು ಇವರನ್ನು ಭೇಟಿ ಮಾಡಿ ಚರ್ಚಿಸಿತು.

ಕ್ಲಬ್‌ಗಳಲ್ಲಿನ ಸೌಕರ್ಯಗಳನ್ನು Constituent Assembly ಯ ಸದಸ್ಯರುಗಳಿಗೆ ನೀಡುವ ಉದ್ದೇಶದಿಂದ Constitution Club of India 1947ರಲ್ಲಿ ಸ್ಥಾಪಿತಗೊಂಡಿದ್ದು, ಸದರಿ ಕ್ಲಬ್ ಸೊಸೈಟಿಸ್ ರಿಜಿಸ್ಟ್ರೇಷನ್ ಆಕ್ಟ್ (Societies Registration Act) ನಲ್ಲಿ ನೋಂದಾಯಿಸಲಾಗಿದ್ದು, ಲೋಕಸಭೆಯ ಮಾನ್ಯ ಸಭಾಧ್ಯಕ್ಷರು ex-officio ಅಧ್ಯಕ್ಷರಾಗಿದ್ದು, ಉಪ ಸಭಾಧ್ಯಕ್ಷರು ex-officio ಪ್ರಧಾನ ಕಾರ್ಯದರ್ಶಿಯಾಗಿದ್ದು, ಕೇಂದ್ರದ ನಗರಾಭಿವೃದ್ಧಿ ಸಚಿವರು ಮತ್ತು ರಾಜ್ಯ ಸಭೆಯ ಉಪ ಸಭಾಪತಿಯವರು ex-officio ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ Governing Council ಕ್ಲಬ್‌ನ ಆಡಳಿತವನ್ನು ನೋಡಿಕೊಳ್ಳುತ್ತಿದೆಯೆಂದು ತಿಳಿಸಿದರು. ಕ್ಲಬ್‌ನ ಸದಸ್ಯತ್ವವನ್ನು ಪಡೆಯುವ ಸದಸ್ಯರುಗಳು ವಾರ್ಷಿಕ ರೂ.20,000/-(ರೂಪಾಯಿ ಇಪ್ಪತ್ತು ಸಾವಿರ ಮಾತ್ರ) ಗಳನ್ನು ಪಾವತಿಸಿ ಅವರ ಕುಟುಂಬದವರು ಸಹ ಕ್ಲಬ್‌ನ ಸೌಲಭ್ಯಗಳನ್ನು ಪಡೆಯಬಹುದಾಗಿರುತ್ತದೆಯೆಂದು ತಿಳಿಸಿದರು. ಅಲ್ಲದೆ ರಾಜ್ಯಸಭಾ, ಲೋಕಸಭಾ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಯ ಅಧಿಕಾರಿಗಳೂ ಸಹ ಈ ಕ್ಲಬ್‌ನ ಸದಸ್ಯರಾಗಿರುತ್ತಾರೆಂದು ತಿಳಿಸಿದರು. ಕ್ಲಬ್ ಸದಸ್ಯರುಗಳಿಗೆ ಯಾವುದೇ ವಸ್ತ್ರ ಸಂಹಿತೆ ಇರುವುದಿಲ್ಲವೆಂದು, ಆದರೆ, ಅವರುಗಳು ಸೂಕ್ತ ರೀತಿಯ ಹಾಗೂ ಘನತೆಯುಳ್ಳ ವಸ್ತ್ರ ಧರಿಸಿ ಕ್ಲಬ್‌ಗೆ ಭೇಟಿ ನೀಡಬಹುದಾಗಿದೆಯೆಂದು ತಿಳಿಸಿರು.

Constitution Club of India ದ ಪಕ್ಕದಲ್ಲಿ ಒಂದು ದೊಡ್ಡ ಕಾಂಪ್ಲೆಕ್ಸ್ ಕಟ್ಟಡವನ್ನು ನಿರ್ಮಿಸಲು ಕೇಂದ್ರ ಸರ್ಕಾರವು ರೂ. 250 ಕೋಟಿ ಧನ ಸಹಾಯ ನೀಡಿದ್ದು, ಮಾನ್ಯ ಸದಸ್ಯರುಗಳಿಗೆ ಇಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಈ ಕಟ್ಟಡವನ್ನು ನಿರ್ಮಿಸಲಾಗುವುದೆಂದು ತಿಳಿಸಿದರು.

Constitution Club of India ದ ಕಾರ್ಯವೈಖರಿಯ ಬಗ್ಗೆ ಸಮಿತಿಯು ಮೆಚ್ಚುಗೆ ವ್ಯಕ್ತಪಡಿಸಿ ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಸಹ Constitution

Club of Karnataka ವನ್ನು ಸ್ಥಾಪಿಸಲು ಶಿಫಾರಸ್ಸು ಮಾಡುವುದಾಗಿ, ಈ ಕ್ಲಬ್‌ನ್ನು Constitution Club of India ನವದೆಹಲಿ ಇದರ ಸ್ವಾಯತ್ತತೆಗೆ ಒಳಪಡಿಸಲು ಒಡಬಂಡಿಕೆಯನ್ನು ಮಾಡಿಕೊಳ್ಳುವ ಶಿಫಾರಸ್ಸು ಮಾಡುವುದಾಗಿ ಸಮಿತಿಯು ಅಭಿಪ್ರಾಯಪಟ್ಟಿತು.

**3. ಲೋಕಸಭೆಯ ವಸತಿ ಸಮಿತಿಯೊಂದಿಗೆ ಭೇಟಿ**

ಸಮಿತಿಯು ದಿನಾಂಕ: 04.01.2016 ರಂದು ಲೋಕಸಭೆಯ ವಸತಿ ಸಮಿತಿಯ ಅಧ್ಯಕ್ಷರಾದ ಶ್ರೀ ಅರ್ಜುನ್ ರಾಮ್ ಮೆಗ್ವಾಲ್ ಇವರನ್ನು ಪಾರ್ಲಿಮೆಂಟ್ ಭವನದಲ್ಲಿ ಭೇಟಿ ಮಾಡಿ ಕ್ಲಬ್‌ಗಳ ಕಾರ್ಯವೈಖರಿ ಹಾಗೂ ವಸ್ತ್ರ ಸಂಹಿತೆಯ ಬಗ್ಗೆ ಚರ್ಚಿಸಿದ್ದು, ಸಮಿತಿಯು ಕರ್ನಾಟಕದಲ್ಲಿ ಹಾಗೂ ದೇಶದ ವಿವಿಧ ನಗರಗಳಲ್ಲಿರುವ ಘನತೆಯುಕ್ತ ಕ್ಲಬ್‌ಗಳಲ್ಲಿ ಮಾನ್ಯ ಸದಸ್ಯರುಗಳಿಗೆ ಸದಸ್ಯತ್ವ ನೀಡದಿರುವ ಬಗ್ಗೆ ಹಾಗೂ ವಸ್ತ್ರ ಸಂಹಿತೆಯನ್ನು ಕಡ್ಡಾಯವಾಗಿ ಅಳವಡಿಸಲು ಸೂಚಿಸುತ್ತಿರುವ ಬಗ್ಗೆ ವಸತಿ ಸಮಿತಿಗೆ ಮನವರಿಕೆ ಮಾಡಿಕೊಟ್ಟಿತು.

ಸಮಿತಿಯ ಅಭಿಪ್ರಾಯವನ್ನು ವಸತಿ ಸಮಿತಿಯು ಒಪ್ಪಿಕೊಂಡು ಈ ಸಂಬಂಧ ಭಾರತದಾದ್ಯಂತ ಒಂದು ನಿರ್ದಿಷ್ಟ ಸಮಾನ ಕಾನೂನು (Uniform Law) ಜಾರಿಗೊಳಿಸುವ ಅವಶ್ಯಕತೆ ಇದೆಯೆಂದು ಅಭಿಪ್ರಾಯಪಟ್ಟಿತು.

ಈ ಸಂಬಂಧ ಪ್ರತ್ಯೇಕ ಮಾಹಿತಿಗಳನ್ನು ಒದಗಿಸಬೇಕೆಂದು ಹಾಗೂ ವಿಷಯವನ್ನು ಸಂಸತ್ತಿನಲ್ಲಿ ಚರ್ಚಿಸುವುದಾಗಿ ವಸತಿ ಸಮಿತಿಯ ಅಧ್ಯಕ್ಷರು ಅಭಿಪ್ರಾಯಪಟ್ಟರು.

**4. ಶ್ರೀ ಡಿ.ವಿ. ಸದಾನಂದಗೌಡ, ಮಾನ್ಯ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವರು, ಭಾರತ ಸರ್ಕಾರ ಇವರ ಭೇಟಿ.**

ಸಮಿತಿಯು ದಿನಾಂಕ: 05.01.2016 ರಂದು ಶ್ರೀ ಡಿ.ವಿ. ಸದಾನಂದಗೌಡ, ಮಾನ್ಯ ಕೇಂದ್ರ ಸಚಿವರು ಇವರನ್ನು ನವದೆಹಲಿಯಲ್ಲಿ ಭೇಟಿ ಮಾಡಿ ದೇಶಾದ್ಯಂತ ಇರುವ ಕ್ಲಬ್‌ಗಳ ಕಾರ್ಯವೈಖರಿ, ಅವರುಗಳು ಸದಸ್ಯತ್ವ ನೀಡುತ್ತಿರುವ ವಿಧಾನ, ಹೆಚ್ಚುವರಿ ಸದಸ್ಯತ್ವ

ಶುಲ್ಕವನ್ನು ವಸೂಲಿ ಮಾಡುತ್ತಿರುವುದು ಹಾಗೂ ಸದಸ್ಯತ್ವವನ್ನು ನಿರಾಕರಿಸುತ್ತಿರುವುದು ಹಾಗೂ ಕ್ಲಬ್‌ನ ಮೇಲೆ ಸರ್ಕಾರದ ನಿಯಂತ್ರಣವಿಲ್ಲದಿರುವ ಬಗ್ಗೆ – ಸಂಸತ್ ಮತ್ತು ರಾಜ್ಯ ವಿಧಾನಮಂಡಲಗಳ ಸದಸ್ಯರುಗಳಿಗೆ ವಸ್ತ್ರ ಸಂಹಿತೆಯನ್ನು ಕಡ್ಡಾಯಗೊಳಿಸುತ್ತಿರುವ ಬಗ್ಗೆ ಸಚಿವರಿಗೆ, ಸಮಿತಿಯ ಅಧ್ಯಕ್ಷರಾದ ಶ್ರೀ ಎನ್.ಎ. ಹ್ಯಾರಿಸ್‌ರವರು ಮನವರಿಕೆ ಮಾಡಿಕೊಟ್ಟರು.

ಸಮಿತಿಯ ಅಭಿಪ್ರಾಯಗಳನ್ನು ಮಾನ್ಯ ಕೇಂದ್ರ ಸಚಿವರು ಆಲಿಸಿ, ದೇಶದಾದ್ಯಂತ ಒಂದು ಸಮಾನ ಕಾಯ್ದೆಯನ್ನು ರೂಪಿಸುವ ಅವಶ್ಯಕತೆಯಿದೆಯೆಂದು ಹಾಗೂ ಕರ್ನಾಟಕ ವಿಧಾನಸಭೆಯಿಂದ ರಚಿತವಾದ ಸದನ ಸಮಿತಿಯು ಪ್ರಸ್ತುತ ಕೈಗೊಳ್ಳುತ್ತಿರುವ ಕಾರ್ಯಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ, ಮುಂದಿನ ಕ್ರಮಕೈಗೊಳ್ಳಲು ಆ ಸಂಬಂಧ ಒಂದು ಸುಧೀರ್ಘ ವರದಿಯನ್ನು ನೀಡಲು ಸಮಿತಿಗೆ ಸೂಚಿಸಿದರು.

## 5. Visit to India Habitat Centre, New Delhi

ಸಮಿತಿಯು ದಿನಾಂಕ:05.01.2016ರಂದು ಇಂಡಿಯಾ ಹ್ಯಾಬಿಟೇಟ್ ಸೆಂಟರ್, ನವದೆಹಲಿ ಇಲ್ಲಿಗೆ ಭೇಟಿ ನೀಡಿತು. ಭೇಟಿಯ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಶ್ರೀ ರಾಕೇಶ್ ಕಕ್ಕರ್, ಇವರು ಸಮಿತಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಸಮಿತಿಯನ್ನು ಸಂಸ್ಥೆಯ ವಿವಿಧ ವಿಭಾಗಗಳಾದ, ಹ್ಯಾಬಿಟೇಟ್ ಲರ್ನಿಂಗ್ ಸೆಂಟರ್, ಹ್ಯಾಬಿಟೇಟ್ ಲೈಬ್ರರಿ ಅಂಡ್ ರಿಸೋರ್ಸ್ ಸೆಂಟರ್, ರೂಫ್ ಪ್ಯಾನಲ್ಸ್, ಓಲ್ಡ್ ವರ್ಲ್ಡ್ ಹಾಸ್ಪಿಟಾಲಿಟಿ, ರೀಚಿಂಗ್ ಔಟ್, ವಿಶುಯಲ್ ಆರ್ಟ್ಸ್ ಗ್ಯಾಲರಿ ಮುಂತಾದವುಗಳ ಮೂಲಕ ಹ್ಯಾಬಿಟೇಟ್ ಕೇಂದ್ರದ ಕಾರ್ಯವೈಖರಿಯನ್ನು ವಿವರಿಸಿ ಸಂಸ್ಥೆಯ ಕಾರ್ಯ – ನಿರ್ವಹಣೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು

(1)ವಸತಿ ಮತ್ತು ವಸತಿ ಸಂಬಂಧಿತ ಪರಿಸರ ವಿಷಯಗಳ ವಿಭಿನ್ನ ಸಂಗತಿಗಳೊಂದಿಗೆ ವ್ಯವಹರಿಸುವ ವಿವಿಧ ವೃತ್ತಿಗಳು ಮತ್ತು ಸಂಸ್ಥೆಗಳು ಸಮನ್ವಯ ರೀತಿಯಲ್ಲಿ ವಸತಿ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಪರಸ್ಪರ ಸಂವಹನ ನಡೆಸುವ ಹಾಗೂ ಪ್ರಯತ್ನಿಸುವ ಒಂದು ಸಮಗ್ರ ಭೌತಿಕ ಪರಿಸರವನ್ನು ಬೆಳೆಸುವುದು.

312/35

(2)ಜಲ, ವಾಯು, ಶಬ್ದ ಹಾಗೂ ತ್ಯಾಜ್ಯ ಮಾಲಿನ್ಯವೂ ಸೇರಿದಂತೆ ವಾಸಸ್ಥಾನ (habitat) ಸಂಬಂಧಿ ಪರಿಸರಿಕ ವಿಷಯಗಳು, ಇಂಧನ ಮತ್ತು ಅದರ ಸಂರಕ್ಷಣೆ, ನೀರು ಮತ್ತು ಮಾನವ ತ್ಯಾಜ್ಯ ನಿರ್ವಹಣೆ ಹಾಗೂ ಅಂತಹ ಇತರ ವಿಷಯಗಳ ಸಂಬಂಧದಲ್ಲಿ ಅರಿವು ಮೂಡಿಸುವುದು.

(3) ಭಾರತೀಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸಂದರ್ಭಕ್ಕೆ ಅನುಕೂಲವಾಗುವ ಹಾಗೂ ಜನರ ಜೀವನ ಶೈಲಿಗೆ ಸಂಬಂಧಿಸಿದಂತೆ ಉತ್ತಮ ನಗರ ಹಾಗೂ ಗ್ರಾಮೀಣಾ ವಸತಿ ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದು.

(4) ವಸತಿ ಮಾನವ ವಸತಿ ಸ್ಥಳಗಳು ಹಾಗೂ ಪರಿಸರ ಮುಂತಾದವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಮ್ಮೇಳನಗಳು, ವಿಚಾರ ಸಂಕೀರ್ಣಗಳು, ಉಪನ್ಯಾಸಗಳು ಚರ್ಚೆಗಳು ಹಾಗೂ ಪ್ರದರ್ಶನಗಳನ್ನು ಆಯೋಜಿಸುವುದು ಮತ್ತು ಉತ್ತೇಜಿಸುವುದು.

ಈ ಕೇಂದ್ರವು ಭಾರತ ಸರ್ಕಾರದೊಂದಿಗೆ ಆದಾಯವನ್ನು ಹಂಚಿಕೊಳ್ಳುವ ಮೂಲಕ ಕಾರ್ಯನಿರ್ವಹಿಸುತ್ತಿದೆ. ಭಾರತ ಸರ್ಕಾರ 10 ಎಕರೆ ಜಮೀನನ್ನು ಒದಗಿಸಿದೆ. ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಸರ್ಕಾರದ ಪ್ರಾತಿನಿಧ್ಯವಿದೆ ಈ ಸಂಸ್ಥೆಯ ಶೇಕಡ 60 ರಷ್ಟು ರಾಜಸ್ವವು ಕೇಂದ್ರ ಸರ್ಕಾರದೊಂದಿಗೆ ಹಂಚಿಕೊಳ್ಳುವ ರಾಜಸ್ವದಿಂದ ಬರುತ್ತದೆಯೆಂದು ತಿಳಿಸಿದರು.

ಸಾರ್ವಜನಿಕರಿಗೆ ಸದಸ್ಯತ್ವ ಮುಕ್ತವಾಗಿಲ್ಲ ಹಾಗೂ ಅನಿವಾಸಿ ಭಾರತೀಯರಿಂದ ಹಾಗೂ ವಿದೇಶಿಯರಿಂದ ಮತ್ತು ಭಾರತದಿಂದಲೂ ಸದಸ್ಯತ್ವ ಕೋರಿ ಅರ್ಜಿಗಳು ಬಂದಿವೆ. ಭಾರತ ಸರ್ಕಾರದೊಂದಿಗಿನ ಅಂತರಿಕ –ಒಪ್ಪಂದ ಆಧಾರದ ಮೇಲೆ ಭಾರತ ಸರ್ಕಾರವು ಯಾವುದೇ ಸಮಯದಲ್ಲಿ 175 ಸದಸ್ಯರನ್ನು ಪ್ರಯೋಜಿಸಬಹುದು. ಸುಮಾರು 37 ವಿವಿಧ ಸದಸ್ಯ ಸಂಸ್ಥೆಗಳು ಈ ಕಟ್ಟಡದಲ್ಲಿದ್ದು, ತಮ್ಮ ವ್ಯವಹಾರವನ್ನು

ನಡೆಸುತ್ತಿವೆಯೆಂದು ತಿಳಿಸಿದರು. ಸಂಸ್ಥೆಗೆ 60% ರಷ್ಟು ಆದಾಯ Old World Hospitality ಯಿಂದ ಶೇಕಡ 20 ರಷ್ಟು ಆದಾಯ ಸದಸ್ಯರ ಶುಲ್ಕದಿಂದ ಹಾಗೂ ಶೇಕಡ 20 ರಷ್ಟು ಆದಾಯ ಈ ಕೇಂದ್ರದಲ್ಲಿ ತಮ್ಮ ಕಛೇರಿಗಳನ್ನು ನಡೆಸುತ್ತಿರುವ ಸಂಸ್ಥೆಗಳಿಂದ ಬರುತ್ತವೆಯೆಂದು ತಿಳಿಸಿದರು.

**6. ಶ್ರೀ ಜಿ.ಎಂ. ಸಿದ್ದೇಶ್ವರ, ಮಾನ್ಯ ಭಾರಿ ಕೈಗಾರಿಕಾ ರಾಜ್ಯ ಸಚಿವರು, ಭಾರತ ಸರ್ಕಾರ ಇವರ ಭೇಟಿ:-**

ಸಮಿತಿಯು ದಿನಾಂಕ: 05.01.2016 ರಂದು ಕೇಂದ್ರ ಸಚಿವರಾದ ಶ್ರೀ ಜಿ.ಎಂ. ಸಿದ್ದೇಶ್ವರ ಇವರನ್ನು ಭೇಟಿ ಮಾಡಿ ಸಮಿತಿಯ ರಚನೆ, ಉದ್ದೇಶ ಹಾಗೂ ಇದುವರೆಗೆ ಕೈಗೊಂಡ ಕ್ರಮಗಳ ಬಗ್ಗೆ ಮಾನ್ಯ ಸಚಿವರಿಗೆ ವಿವರಿಸಿತು.

ಸಮಿತಿಯ ಅಭಿಪ್ರಾಯವನ್ನು ಒಪ್ಪಿಕೊಂಡ ಮಾನ್ಯ ಸಚಿವರು ದೇಶದಾದ್ಯಂತ ಕ್ಲಬ್‌ಗಳಿಗೆ ಸಂಬಂಧಪಟ್ಟಂತೆ ಸಮಾನ ಕಾಯ್ದೆಯನ್ನು ರೂಪಿಸುವ ಅವಶ್ಯಕತೆಯಿದೆಯೆಂದು ಹಾಗೂ ಯಾವುದೇ ಸದಸ್ಯರುಗಳಿಗೆ ವಸ್ತ್ರ ಸಂಹಿತೆಗಳನ್ನು ಕಡ್ಡಾಯಗೊಳಿಸಬಾರದೆಂದು ಹಾಗೂ ಸದಸ್ಯರುಗಳಿಗೆ ಕ್ಲಬ್‌ಗಳಲ್ಲಿ ಸದಸ್ಯತ್ವ ನೀಡಬೇಕೆಂದು ಅಭಿಪ್ರಾಯಪಟ್ಟರು.

ಸಮಿತಿಯು ಒಂದು ಸುಧೀರ್ಘ ವರದಿಯನ್ನು ತಯಾರಿಸಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಲ್ಲಿ ಮುಂದಿನ ಕ್ರಮಕೈಗೊಳ್ಳಲು ಒತ್ತಾಯಿಸುವುದಾಗಿ ಮಾನ್ಯ ಸಚಿವರು ಸಮಿತಿಗೆ ತಿಳಿಸಿದರು.

**7. ನವದೆಹಲಿಯ ಇಂಟರ್ ನ್ಯಾಷನಲ್ ಸೆಂಟರ್‌ಗೆ ಭೇಟಿ.**

ಸಮಿತಿಯು ದಿನಾಂಕ: 05.01.2016 ರಂದು ನವದಹಲಿಯಲ್ಲಿರುವ ಭಾರತ ಅಂತರಾಷ್ಟ್ರೀಯ ಕೇಂದ್ರಕ್ಕೆ ಭೇಟಿ ನೀಡಿತ್ತು. ಆ ಕೇಂದ್ರದ ಸಹಾಯಕ ವ್ಯವಸ್ಥಾಪಕರಾದ ಶ್ರೀ ರಾವುಲ್ ಬಿಸ್ಟ್ ಅವರು ಕೇಂದ್ರದಲ್ಲಿರುವ ವಿವಿಧ ಸೌಲಭ್ಯಗಳಾದಂತಹ ಐಐಸಿ ಫೆಸ್ಟಿವಲ್ ಆಫ್ ದಿ ಆರ್ಟ್ಸ್, ಸ್ಪೆಷಲ್ ಪ್ರಾಜೆಕ್ಟ್ಸ್, ಫಿಲ್ಮ್‌ಕ್ಲಬ್, ಲೈಬ್ರರಿ, ಐಐಸಿ ಬಾರ್, ದಿ ಅನೆಕ್ಸ್, ಕಾನ್‌ಫರೆನ್ಸ್ ಬ್ಲಾಕ್ ಮುಂತಾದವುಗಳನ್ನು ಪರಿಚಯಿಸಿದರು.

310

ಈ ಸಂಸ್ಥೆಯು ಚಿತ್ತಾಕರ್ಷಕವಾದ ಪ್ರದೇಶದಿಂದ ಕೂಡಿದ್ದು, ಹಸಿರು ಗಿಡಮರಗಳಿಂದ ಆವೃತವಾಗಿದ್ದು, ಅದರ ಕಾರ್ಯಚಟುವಟಿಕೆಗಳ ಗುಣಮಟ್ಟ ಮತ್ತು ವ್ಯಾಪ್ತಿಯು ವಿಸ್ತಾರವಾಗಿದ್ದು, ಆ ಕಾರಣದಿಂದಲೇ ಅದು ಒಂದು ವಿಶಿಷ್ಟ ಸಂಸ್ಥೆಯಾಗಿದೆ ಮತ್ತು ಆ ಸಂಸ್ಥೆಯು ನಿರಂತರವಾಗಿ ನಾಗರಿಕ ಸಂವಾದಗಳು ಒಂದು ಸೌಹಾರ್ದ ಭಾಂಧತ್ವದಲ್ಲಿ ನಡೆಯುವ ಸಾಂಸ್ಕೃತಿಕ ಮತ್ತು ಸಮುದಾಯ ವಲಯಕ್ಕೆ ಒಂದು ನೆಚ್ಚಿನ ತಾಣವಾಗಿ ಮಾರ್ಪಟ್ಟಿದ್ದು, ಅದು ಕಲಿಕೆಯನ್ನು ಶ್ರೀಮಂತಗೊಳಿಸುವ ಕಡೆಗೂ ತನ್ನ ಉತ್ತಮ ಕಾಣಿಕೆಯನ್ನು ನೀಡಿದೆ ಎಂದು ಸಮಿತಿಗೆ ವಿವರಿಸಿದರು.

**8. ಶ್ರೀ ಅನಂತ ಕುಮಾರ್, ಮಾನ್ಯ ರಾಸಾಯನಿಕ ಮತ್ತು ಗೊಬ್ಬರ ಖಾತೆ ಸಚಿವರ ಭೇಟಿ.**

ಸಮಿತಿಯು ದಿನಾಂಕ: 05.01.2016 ರಂದು ಮಾನ್ಯ ಕೇಂದ್ರ ಸಚಿವರನ್ನು ಭೇಟಿ ಮಾಡಿ ದೇಶದಾದ್ಯಂತ ಕ್ಲಬ್‌ಗಳ ಕಾರ್ಯವೈಖರಿಯನ್ನು ನಿಯಂತ್ರಿಸುವ, ವಸ್ತ್ರ ಸಂಹಿತೆಯನ್ನು ಕಡ್ಡಾಯಗೊಳಿಸಿರುವುದಕ್ಕೆ ಸಂಬಂಧಿಸಿರುವಂತೆ ಸಮಾನ ಕಾನೂನು ರೂಪಿಸುವ ಉದ್ದೇಶವನ್ನು ಸಮಿತಿಯು ಮಾನ್ಯ ಸಚಿವರಿಗೆ ಮನವರಿಕೆ ಮಾಡಿಕೊಟ್ಟಿತು.

ಸಮಿತಿಯ ಅಭಿಪ್ರಾಯವನ್ನು ಆಲಿಸಿದ ಮಾನ್ಯ ಸಚಿವರು, ಒಪ್ಪಿಗೆಯನ್ನು ಸೂಚಿಸಿ ಈ ಸಂಬಂಧ ಕೇಂದ್ರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಒಂದು ವರದಿಯನ್ನು ನೀಡಬೇಕೆಂದು, ಸಂಬಂಧಪಟ್ಟ ಸಚಿವರಾದ ಶ್ರೀ ಜಿತೇಂದ್ರ ಸಿಂಗ್, ಇವರೊಂದಿಗೆ ಮಾತನಾಡಿ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

**9. ಶ್ರೀ ಜಿತೇಂದ್ರ ಸಿಂಗ್, ಮಾನ್ಯ ಸಿಬ್ಬಂದಿ ಮತ್ತು ತರಬೇತಿ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ ಇವರ ಭೇಟಿ.**

ಸಮಿತಿಯು ಶ್ರೀ ಜಿತೇಂದ್ರ ಸಿಂಗ್, ಮಾನ್ಯ ರಾಜ್ಯ ಸಚಿವರು, ಭಾರತ ಸರ್ಕಾರ ಇವರನ್ನು ಭೇಟಿ ಮಾಡಿ ಕ್ಲಬ್‌ಗಳ ಕಾರ್ಯವೈಖರಿಯ ಬಗ್ಗೆ ಚರ್ಚಿಸಿ ದೇಶದಾದ್ಯಂತ ಸಮಾನ ಕಾನೂನನ್ನು ರೂಪಿಸಲು ಅವಶ್ಯಕತೆ ಇರುವ ಬಗ್ಗೆ ಮನವರಿಕೆ ಮಾಡಿಕೊಟ್ಟಿತು.

ಸಮಿತಿಯ ಅಭಿಪ್ರಾಯವನ್ನು ಒಪ್ಪಿಕೊಂಡ ಮಾನ್ಯ ಕೇಂದ್ರ ಸಚಿವರು ಆ ಸಂಬಂಧ ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ, ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

10. ನವದೆಹಲಿಯ ಜಮ್‌ಖಾನ ಕ್ಲಬ್‌ಗೆ ಭೇಟಿ.

ದಿನಾಂಕ: 06.01.2016 ರಂದು ನವದೆಹಲಿಯಲ್ಲಿರುವ ದೆಹಲಿ ಜಮ್‌ಖಾನ ಕ್ಲಬ್‌ಗೆ ಸಮಿತಿಯು ಭೇಟಿ ನೀಡಿ ಕ್ಲಬ್ ನಡೆಸುತ್ತಿರುವ ಬಾಲ್‌ರೂಂ, ಗ್ರಂಥಾಲಯ, ಬಿಲಿಯಾರ್ಡ್ಸ್ ರೂಂ, ಡೈನಿಂಗ್ ರೂಂ, ಸ್ವಿಮಿಂಗ್ ಪೂಲ್, ಟೆನ್ನಿಸ್ ಕೋರ್ಟ್‌ಗಳನ್ನು ವೀಕ್ಷಿಸಿತು. ಕ್ಲಬ್‌ನ ವ್ಯವಸ್ಥಾಪಕರು, ಸಮಿತಿಯೊಂದಿಗೆ ಸೌಹಾರ್ದಯುತವಾಗಿ ಮಾತನಾಡಿ ಕ್ಲಬ್‌ಗಳಿಗೆ ಆಗಮಿಸುವ ಸದಸ್ಯರುಗಳು ದೋತಿಯನ್ನು ಧರಿಸಿ ಬರಬಹುದೆಂದು ಯಾವುದೇ ವಸ್ತ್ರ ಸಂಹಿತೆಯನ್ನು ಕಡ್ಡಾಯಗೊಳಿಸಿಲ್ಲವೆಂದು, ಆದರೆ ಅವರುಗಳು ಗೌರವಯುಕ್ತ ವಸ್ತ್ರಗಳನ್ನು ಧರಿಸಿ ಬರಬಹುದೆಂದು ತಿಳಿಸಿದರು. ಇಂತಹ ಕ್ಲಬ್‌ಗಳ ಕಾರ್ಯವೈಖರಿಯನ್ನು ಉತ್ತೇಜಿಸಬೇಕೆಂದು ಕ್ಲಬ್‌ನ ಅಧಿಕಾರಿಗಳು ಸಚಿವರಿಗೆ ಮನವರಿಕೆ ಮಾಡಿಕೊಟ್ಟರು. ಸಮಿತಿಯು ಜಮ್‌ಖಾನ ಕ್ಲಬ್‌ನ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ಸೂಚಿಸಿತು.

ದಿನಾಂಕ: 06.01.2016 ರಂದು ಸಮಿತಿಯ **ಅಧ್ಯಕ್ಷರಾದ ಶ್ರೀ ಎನ್. ಎ. ಹ್ಯಾರಿಸ್** ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಭವನದಲ್ಲಿ ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿ ಕೇಂದ್ರ ಸರ್ಕಾರವು ದೇಶದಲ್ಲಿರುವ ವಿವಿಧ ಕ್ಲಬ್‌ಗಳಿಗೆ ವಸ್ತ್ರ ಸಂಹಿತೆಯನ್ನು ಕಡ್ಡಾಯವಾಗಿ ಅಳವಡಿಸಿರುವುದರ ವಿರುದ್ಧ ಸೂಕ್ತ ನಿರ್ದೇಶನ ನೀಡಲು ಒತ್ತಾಯಿಸಿತು. (ಅನುಬಂಧ-೫)

ಒಟ್ಟಾರೆ, ಕ್ಲಬ್‌ನ ಸದನ ಸಮಿತಿಯ ನವದೆಹಲಿ ಭೇಟಿಯು ಫಲಪ್ರದವಾಗಿದ್ದು, ಅಲ್ಲಿ ವಿವಿಧ ಕೇಂದ್ರ ಸಚಿವರುಗಳು ಹಾಗೂ ಕ್ಲಬ್‌ಗಳ ಪದಾಧಿಕಾರಿಗಳೊಂದಿಗೆ ನಡೆಸಿದ ಸಭೆಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಕೇಂದ್ರ ಸರ್ಕಾರಕ್ಕೆ ಈ ಸಂಬಂಧ ಸೂಕ್ತ ಕಾಯ್ದೆ ರೂಪಿಸಲು ಒತ್ತಾಯಿಸಿತು.

ಸದನ ಸಮಿತಿಯ **ಅಧ್ಯಕ್ಷರಾದ ಶ್ರೀ ಎನ್.ಎ. ಹ್ಯಾರಿಸ್‌ರವರು** ಸಮಿತಿಯು ದೆಹಲಿಗೆ ಕೈಗೊಂಡ ಅಧ್ಯಯನ ಪ್ರವಾಸದ ಸಂದರ್ಭದಲ್ಲಿ ಕ್ಲಬ್‌ಗಳ ವಸ್ತ್ರ ಸಂಹಿತೆಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಶ್ರೀ ಜೀತೇಂದ್ರ ಸಿಂಗ್, ಮಾನ್ಯ ಸಿಬ್ಬಂದಿ ಮತ್ತು ತರಬೇತಿ ಖಾತೆ, ರಾಜ್ಯ ಸಚಿವರು, ಇವರಿಗೆ ಹಾಗೂ ಶ್ರೀ ಅನಂತ್ ಕುಮಾರ್‌ಜೀ, ಮಾನ್ಯ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು, ಭಾರತ ಸರ್ಕಾರ ಇವರಿಗೆ ಅಗತ್ಯ ಕ್ರಮಕ್ಕಾಗಿ ಕೋರಿ ಪತ್ರ ಬರೆದಿರುತ್ತಾರೆ. (ಅನುಬಂಧ-೬)

308 (B)

# ಸಮಿತಿಯ ಶಿಫಾರಸ್ಸುಗಳು

1. ರಾಜ್ಯದ ಯಾವುದೇ ಕ್ಲಬ್‌ಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಸಾಂಪ್ರದಾಯಿಕ ವಸ್ತ್ರಗಳನ್ನು ನಿಷೇದಿಸದೆ ಸಾಮಾನ್ಯ ನಾಗರೀಕ ಮರ್ಯಾದತ್ತವಾಗಿ ತೊಡುವ ಉಡುಗೆ ಧರಿಸಿ ಕ್ಲಬ್‌ಗಳಿಗೆ ಪ್ರವೇಶಿಸುವ ಅವಕಾಶ ಹೊಂದಿರುವಂತಹ ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಎಲ್ಲಾ ಕ್ಲಬ್‌ಗಳಿಗೆ ಕಟ್ಟು ನಿಟ್ಟಿನ ಸೂಚನೆಯನ್ನು ನೀಡಬೇಕೆಂಬುದನ್ನು ವಿಧೇಯಕದಲ್ಲಿ ಅಳವಡಿಸಿಕೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

2. ಸದಸ್ಯತ್ವ ಶುಲ್ಕ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಲಾಭದ ಉದ್ದೇಶವಿರದ ಎಲ್ಲಾ ಕ್ಲಬ್‌ಗಳಿಗೆ ಸರ್ಕಾರವು ಸೂಕ್ತ ಮಾನದಂಡ ಅಳವಡಿಸಬೇಕೆಂದು ಮತ್ತು ಸಕ್ಷಮ ಪ್ರಾಧಿಕಾರಿಯು ಪ್ರತಿಯೊಂದು ಕ್ಲಬ್‌ನ ಸದಸ್ಯತ್ವ ಶುಲ್ಕವನ್ನು ನಿಗದಿಪಡಿಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

3. ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಕ್ಲಬ್‌ಗಳಲ್ಲಿ ಆಯಾಯ ಕ್ಷೇತ್ರವಾರು ಜನಪ್ರತಿನಿಧಿಗಳು (ಎಂ.ಪಿ., ಎಂ.ಎಲ್.ಎ., ಎಂ.ಎಲ್.ಸಿ.) ಸದಸ್ಯರಾಗಬಯಸಿದಲ್ಲಿ ಅಂತಹ ಜನಪ್ರತಿನಿಧಿಗಳಿಗೆ ಸದಸ್ಯತ್ವವನ್ನು (**Membership**) ಅವರುಗಳು ಬಯಸುವ ಎರಡು ಕ್ಲಬ್‌ಗಳಲ್ಲಿ ಮಾತ್ರ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

4. ಕ್ರೀಡಾ ರಂಗದಲ್ಲಿ ಮಹೋನ್ನತ ಸಾಧನೆ ಮಾಡಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದ ಕ್ರೀಡಾಪಟುಗಳಿಗೆ ಹಾಗೂ ಶೌರ್ಯ ಪ್ರಶಸ್ತಿಯನ್ನು ಪಡೆದ ಮಾಜಿ ಸೈನಿಕರಿಗೆ ಆಯಾ ಪ್ರದೇಶಗಳಲ್ಲಿರುವ ಅವರು ಬಯಸಿದ ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಯಾವುದಾದರೂ ಒಂದು ಕ್ಲಬ್‌ನ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

5. ವಿಧಾನ ಸಭೆಯ ಹಾಲಿ ಮತ್ತು ಮಾಜಿ ಸದಸ್ಯರುಗಳ ಉಪಯೋಗಕ್ಕಾಗಿ ಸ್ಥಾಪಿಸಲಾಗಿರುವ ಸಾಂವಿಧಾನಿಕ ಕ್ಲಬ್ (Constitutional Club) ಜರೂರಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಸ್ಥಳಾವಕಾಶವು ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತುರ್ತಾಗಿ ಒದಗಿಸಿ, ಪ್ರಸ್ತುತ ವರ್ಷದಿಂದಲೇ ಅದು ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

6. ಕರ್ನಾಟಕ ಸಾಂವಿಧಾನಿಕ ಕ್ಲಬ್ (Constitution Club of Karnataka) ಅನ್ನು ಸ್ಥಾಪಿಸಿದ ನಂತರ ಭಾರತ ಸಾಂವಿಧಾನಿಕ ಕ್ಲಬ್(Constitution Club of India) ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಹಾಗೂ ಈ ಕ್ಲಬ್‌ನ್ನು ಭಾರತ ಸಾಂವಿಧಾನಿಕ ಕ್ಲಬ್‌ನ ಸಂಯೋಜನೆ ಪಡೆದು ಅದರ ಸಹಯೋಗದಲ್ಲಿ ಒಂದು ಜಂಟಿ ಉದ್ಯಮವಾಗಿ ನಡೆಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

7. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳು ಕಡ್ಡಾಯವಾಗಿ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕೆಂದು ಹಾಗೂ ಇನ್ನೂ ಮುಂದೆ ಕ್ಲಬ್‌ಗಳು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದರೆ ಮಾತ್ರ ಪರವಾನಿಗೆ ನೀಡಲು ಅಥವಾ ನವೀಕರಿಸಲು ಕ್ರಮಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

8. ಹೊಸ ಬಡಾವಣೆ ನಿರ್ಮಾಣ ಮಾಡಲು ಅನುಮತಿ ನೀಡುವ ಸಂದರ್ಭದಲ್ಲಿಯೇ ಆ ಬಡಾವಣೆಯಲ್ಲಿ ಕ್ಲಬ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸ್ಥಳ ನಿಗದಿಪಡಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

9. 25 ಎಕರೆಗಿಂತ ಮೇಲ್ಪಟ್ಟ ಜಮೀನಿನಲ್ಲಿ ಮುಂದೆ ರಚಿಸಲಾಗುವ ಬಡಾವಣೆಗಳಲ್ಲಿ, ಆ ಬಡಾವಣೆಯ ನಿವಾಸಿಗಳಿಗೆ ಅನುಕೂಲವಾಗುವಂತೆ ಕ್ಲಬ್‌ನ್ನು ಸ್ಥಾಪಿಸಲು ಸ್ಥಳಾವಕಾಶವನ್ನು ಮೀಸಲಿಡುವಂತೆ Karnataka Town and Country Planning Actನ್ನು ತಿದ್ದುಪಡಿ ಮಾಡುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

10. ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ಲಬ್ ನಿರ್ಮಿಸಲು ಸರ್ಕಾರದ ವತಿಯಿಂದ ಜಾಗ ನೀಡುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

306

11. ಸಮಿತಿಯು ಅಧ್ಯಯನ ನಡೆಸಿ ಒಟ್ಟಾರೆಯಾಗಿ ತೀರ್ಮಾನಿಸಿದಂತೆ ರಾಜ್ಯದಲ್ಲಿನ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಕಾನೂನು ಬದ್ದವಾಗಿ ನಿಯಂತ್ರಿಸಲು ಈ ಕೆಳಕಂಡಂತೆ ವಿಧೇಯಕವೊಂದನ್ನು ಮುಂಬರುವ ಅಧಿವೇಶನದಲ್ಲಿ ಮಂಡಿಸಿ, ಸೂಕ್ತ ಕಾನೂನು ಜಾರಿಗೆ ತರಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## THE KARNATAKA REGULATION OF ENTRY TO PUBLIC PLACES AND REGULATION OF CLUBS BILL, 2016

A Bill to provide for removal of restriction, imposed by clubs and public places, on persons wearing dhoti reflecting Kannada Culture or any Indian traditional dress, to enter into such places and for regulating the activities of the clubs.

Whereas it is brought to the notice of the Government that some clubs are denying entry to persons wearing dress reflecting Kannada culture or Indian Traditional dress into public places under their control or management.

And whereas it is the fundamental duty of every Indian citizen to value and preserve the rich heritage of our composite culture;

And whereas certain clubs which are non profit motive Societies, Trusts, associations or organizations are charging exorbitant rate of membership and are carrying on gaming or any other illegal activities.

And whereas it has become imperative in the context of happenings in the past to remove such restrictions and unreasonable attitude and matters connected therewith or incidental thereto.

Now, therefore, in order to preserve our culture, custom and heritage, it is expedient to remove the restriction imposed on persons wearing dhoti reflecting Kannada culture or any Indian traditional dress for entry into public places and also to regulate the Membership and other activities and Fee in clubs run by non-profit making organizations therein.

Be it enacted by the Karnataka State Legislature in the Sixty-Eight Year of the Republic of India as follows:-

1. **Short title and commencement**.- (1) This Act may be called the Karnataka Regulation of Entry into Public Places and Regulation of clubs Act, 2016

(2) It shall come into force at once.

2. **Definition**.- In this Act, unless the context otherwise requires,-

(a) "club" means and includes organizations, run by a society, a trust or other association of individuals, whether incorporated or not with the object of non profit making providing recreation, cultural, sports, gymnasium and service activities of entertainment.

(b) "Competent Authority" **means the District Magistrate of the District**

(c) "Government" means the State Government;

(d) "Public Place" means and includes any club, hotels, theatres, malls, halls, auditoriums, stadiums and such other places as may be notified by the Government, where people including members congregate in connection with any function, event, entertainment, sports or other activity but does not include a place when used exclusively by one or more individuals for a private gathering or other personal purpose.

(e) "gaming" shall have the same meaning as defined in clause(7) of section 2 of the Karnataka Police Act, 1963.

3. **Removal of restriction of entry**.- (1) Notwithstanding anything contained in any rule, regulation or bye-law made by, or circular, instruction or guideline issued by, any club, no person, wearing a dhoti, reflecting Kannada culture or any other Indian traditional dress, shall be denied entry into any public place, by reason only of his dress:

Provided that the dress shall be worn in a decent manner.

(2) No cub, shall make any rule, regulation or bye-law or issue any circular instruction or guideline, imposing thereunder restriction on entry to

any person, wearing a dhoti reflecting Kannada culture or any other Indian traditional dress, into any public place under its control or management.

**4. Approval of the Government for prescribing the membership fee.**- (1) Notwithstanding anything contained in any Law for the time being in force no club, object of which is nonprofit making, shall charge or collect membership fee more than the fee determined by the Competent Authority.

(2) The membership fee shall be determined by the Competent Authority subject to such rules and guidelines as may be prescribed and the fee shall,-

(i) commensurate with the facilities and the service rendered by the club and such other factors as may be prescribed; and

(ii) be determined after providing opportunity to hear the club.

**5. Allotment of membership.**- No club, which has obtained land or sites at concessional or nominal rate, any financial assistance, from the Government or organization established by the Government shall,-

(i) deny membership in not more than two clubs of his choice located in his Constituency where a Member of Lokasabha, a Member of Legislative Assembly, ordinarily resides or in the case of a Member of Legislative Council or a member of Rajya Sabha in the Locality where he is registered as voter, on the recommendations of the Competent Authority ;

(ii) shall deny membership in not more than one club of his choice located in his area of his permanent residence to persons with meritorious contribution at national or international levels in sports or Ex serviceman having received Gallantry awards and civil servants of and above such rank on the recommendations of the Competent Authority;

subject to such rules as may be prescribed.

**6. Anything contrary to the provisions of this Act, null and void.**- Anything contrary to the provisions of this Act, contained in any rule, regulation or bye-law made, or circular, instruction or guideline issued by any club, shall be null and void.

7. **Temporary suspension of license of club.**- (1) Notwithstanding anything contained in any Law for the time being in force the competent Authority may on the report of the Taluk Magistrate, Commissioner of Police or Superintendent of Police, are empowered to suspend the license of a club for a period up to 30 days, after having satisfied himself, that such a club is suspected to be carrying illegal activities.

(2) The suspension may be revoked in case the clubs rectifies or provide proof that such activity is not being carried out;

8. **Cancellation of license or permission.**- (1) If any club, violates the provisions of this Act, the license or permission granted by the Competent Authority or any other Authority concerned under relevant law to that club, shall be cancelled, after having provided an opportunity of being heard to the licensee concerned, in accordance with law applicable thereto.

9. **Restriction on gaming or any other illegal activities.**- No club shall carry on gaming or any other illegal activities. Notwithstanding anything contained in any law in force any club found guilty of carrying on gaming or any other illegal activity, the permission or license granted to such clubs shall be cancelled by the Competent Authority immediately and the Land given to such clubs, if any, on concession or lease shall be cancelled by the concerned Authority after providing an opportunity of being heard.

Penalties specified in this Act shall be in addition to but not in derogation of penalties specified in any other law.

10. **Power to enter public places and clubs.**- **Every Tahsildar** or Police officer not below the rank of Inspector of Police or the **Tahsildar and Taluk Magistrate** may, subject to the rules and orders made by the Government or by a person lawfully authorized **by the competent authority** enter, for any of the purposes referred to in this Act, without a warrant and inspect search or seize in any public place or a club which he has reason to believe that it is used for gambling or any other illegal activity or for committing any offence under this Act and produce the same before

the Competent Court in accordance with The Code of Criminal 1973.

**11. Appeals.**- Any person or Club aggrieved by the order of the Competent Authority or other Authority may appeal to the Regional Commissioner within thirty days in such manner as may be prescribed and the decision of the Regional Commissioner shall be final

**12. Penalty.**- Whoever violates the provisions of section 3, 4, 5, 8 and 11 shall be punished with imprisonment for a term which may extend to six months or with fine which may extend to one lakh rupees or with both.

**13. Cognizance of Offence.**- (1) No Court shall take cognizance of offence punishable under section 3,4 and 5 of this Act **unless the Taluk Magistrate** or a Police Officer not below the rank of Inspector of police makes a complaint in this regard.

(2) Offences under section 9 shall be cognizable.

(3) No Court inferior to that of Magistrate of First Class shall try offences punishable under this Act or any other rules or order made there under.

**14. Offences by a company.**- (1) Where an offence under this Act has been committed by a company every person who, at the time the offence was committed, was in-charge of, and was responsible to, and for the conduct of the business of, the company shall be deemed to be guilty of the offence and shall be liable to be proceeded against and punished accordingly.

Provided that nothing contained in this sub-section shall render any such person liable to any punishment, if he proves that the offence was committed without his knowledge or that he had exercised all due diligence to prevent the commission of such offence.

(2) Notwithstanding anything contained in sub-section (1), where any offence under this Act has been committed by and it is proved that the offence has been committed with the consent or connivance of, or is attributable to, any neglect on the part of any director, manager, secretary or other officer of the company such director, manager, secretary or other

officer concerned, shall be deemed to be guilty of that offence and shall be liable to be proceeded against and punished accordingly.

**Explanation**.- For the purposes of this section,-

(a) "Company" means any body corporate and includes a firm or other association of individuals; and

(b) "director" in relation to,-

(i) a firm, means a partner in the firm;

(ii) a society, a trust or other association of individuals, means the person who is entrusted under the rules of the society, trust or other association with the management of the affairs of the society, trust or other association, as the case may be.

**15. Powers to make rules.**- (1) The Government may make rules after previous publication to carry out all or any of the purposes of this Act.

(2) Every rule made or notification or order issued under this Act shall, as soon as possible, after it is made or issued, be placed on the table of the Legislative Assembly and if, before the expiry of the session in which it is so placed or the next session, the Legislative Assembly makes any modification in any such rule or notification or order or the legislative Assembly decides that the rule or notification or order should not be made or issued, the rule or notification or order shall thereafter have effect only in such modified form or be of no effect, as the case may be, so, however, that any such modification or annulment shall be without prejudice to the validity of anything previously done under that rule or notification or order.

**16. Power to remove difficulties.**- If any difficulty arises in giving effect to the provisions of this Act, the Government may, by order, make such provision not inconsistent with the provisions of this Act, as it appears to it to be necessary or expedient for removing the difficulty.

Provided that not such order shall be made after the expiry of two years from the date of commencement of this Act.

**17. Amendment of the Karnataka Town and Country planning Act, 1961 (Karnataka Act 11 of 1963).**- In the Karnataka Town and Country planning Act, 1961 (Karnataka Act 11 of 1963) after section 15 the following shall be inserted, namely:-

"**15A. Making provision for club.**-Notwithstanding any thing contained in this Act no Authority shall prepare or approve any layout having more than 25 acers unless a civic amenity site is compulsorily provided in such lay out for facilitating a club for the residents of such layout."

ಎನ್.ಎ. ಹ್ಯಾರಿಸ್
ಅಧ್ಯಕ್ಷರು,
ಸದನ ಸಮಿತಿ

ಎಸ್. ಮೂರ್ತಿ
ಕಾರ್ಯದರ್ಶಿ (I/c)
ಕರ್ನಾಟಕ ವಿಧಾನಸಭೆ